
ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 26 ಸಂಚಿಕೆ 41 ಅಕ್ಟೋಬರ್ 10, 2004 ಬೆಲೆ ರೂ. 3.00



ಪರ್ಯಾಯ ಕೃಷಿ ನೀತಿಗಾಗಿ

ರಾಜಧಾನಿಗೆ ರೈತ–ಕೂಲಿಕಾರರ ಲಗ್ಗೆ






ಯಡಿಯೂರಪ್ಪನವರ ಹುಚ್ಚು ಹುಚ್ಚು ಹೆಬ್ಬರ ಗುಚ್ಚು!

ಬಿಜೆಪಿಯೊಳಗಿನ ಕಚ್ಚಾಟ



ದಕ್ಷಿಣ ಏಶ್ಯಾದ ಸಮೃದ್ಧಿಗೆ
ಬೇಕು ಭಾರತ–ಪಾಕ್ ಶಾಂತಿ



ತ ಸಾಹಿತಿ
ುಲ್ಕರಾಜ್ ಆನಂದ್
ನ್ನಿಲ್ಲ

- ಕಾರ್ಮಿಕರ ಜೀವಕ್ಕೆ ಬೆಲೆಯಿಲ್ಲವೇ ?
- ಕೋರ್ಟ್‌ನ ಮೆಟ್ಟಿಲೇರುವ ಮುನ್ನ
- ಕ್ಯೂಬಾ : ಜನಾರೋಗ್ಯ ಅಲ್ಲಿ-ಇಲ್ಲಿ

ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಎಕೆಜಿಯವರದ್ದು ಅಚ್ಚಳಿಯದ ಪಾತ್ರ. ಎಕೆಜಿಯೆಂದರೆ ಕೋಟಿ ಕೋಟಿ ಜನರ ಹೃನ್ಮನಗಳಲ್ಲಿ ರೋಮಾಂಚನವುಂಟು ಮಾಡುವ ಚೈತನ್ಯ. ಜನತೆಯ ನಡುವಿನಲ್ಲೇ ಒಡಮೂಡಿದ ಅಪ್ರತಿಮ ಕ್ರಾಂತಿಕಾರಿಯ ವಿಶಿಷ್ಟ ಬದುಕು, ಬೆಳೆದುಬಂದ ಹಾದಿ ಕೊಡುಗೆಗಳನ್ನು ಅವರಿಂದ ಕಲಿಯಬೇಕಾದ ಪಾಠಗಳನ್ನು ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಸ್ಮರಿಸಿದ್ದಾರೆ ಪ್ರಕಾಶ್ ಕಾರಟ್‌ರವರು

ಎ.ಕೆ.ಗೋಪಾಲನ್

ಕಮ್ಯೂನಿಸ್ಟ್ ಚಳುವಳಿಯ ಮೇರು ಚೇತನ

ಪ್ರಕಾಶ್ ಕಾರಾಟ್

ಭಾರತದ ಕಮ್ಯೂನಿಸ್ಟ್ ಚಳುವಳಿಯ ಐತಿಹಾಸಿಕ ವ್ಯಕ್ತಿತ್ವ ಎ.ಕೆ.ಗೋಪಾಲನ್‌ರವರ ಜನ್ಮ ಶತಾಬ್ದಿಯ ದಿನವಾಗಿ ಅಕ್ಟೋಬರ್ 1, 2004 ದಾಖಲಾಗಿದೆ.

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಬೆಳೆಸುವಲ್ಲಿ ಸ್ಮರಣೀಯ ಕೊಡುಗೆ ನೀಡಿರುವ ಕಮ್ಯೂನಿಸ್ಟ್ ನಾಯಕರು ಬಹಳಷ್ಟಿದ್ದಾರೆ. ಅವರಲ್ಲಿ ಹೆಚ್ಚಿನವರು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅತೀವ ತ್ಯಾಗ ಬಲಿದಾನಗಳನ್ನು ಮಾಡಿದವರು.

ಜನಸಮುದಾಯದ ಜತೆಗೆ ಇರುವುದಷ್ಟೇ ಅಲ್ಲ, ಪಕ್ಷವನ್ನು ಕಟ್ಟಲು ಅವರು ಉದ್ಯುಕ್ತವಾಗುವಂತೆಯೂ ಮಾಡಿದ ಅಪೂರ್ವ ಕಾರ್ಯತತ್ಪರತೆ ಕಾಣಬರುವುದು ಕೆಲವೇ ನಾಯಕರಲ್ಲಿ ಮಾತ್ರ. ಎ.ಕೆ.ಗೋಪಾಲನ್ ಅಂತಹವರಲ್ಲೊಬ್ಬರು.

ಎ.ಕೆ.ಗೋಪಾಲನ್‌ರವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಅವರ ಬದುಕು ಮತ್ತು ಸಾಧನಗಳ ಸ್ಮರಣೆ ಎಂದರೆ ಸಾಮೂಹಿಕ ಚಳುವಳಿಯ ಮೂಲಕ ವಿಶಾಲ ಕಮ್ಯೂನಿಸ್ಟ್ ಪಕ್ಷವೊಂದು ಬೆಳೆದು ಬರಲು ಕಾರಣೀಭೂತವಾದ ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ಪಾಳೆಯಗಾರೀ ವಿರೋಧಿ ನೆಲೆಗಳ ಪುನಃ ದೃಢೀಕರಣ.


ಎರಡು ಪ್ರಬಲ ಪ್ರವಾಹಗಳ ಮೇಳೈಸುವಿಕೆಯ ಅನುಕರಣೀಯ ಬದುಕು ಎ.ಕೆ.ಜಿಯವರದ್ದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರ ಪಾತ್ರ ಒಂದಾದರೆ ಮತ್ತು ಕೇರಳ ಹಾಗೂ ದೇಶದ ರೈತ ಚಳುವಳಿಗೆ ಚಾಲನೆ ನೀಡಿ ಬೆಳೆಸಿದ ಅಪೂರ್ವ ಸಾಧನೆ ಮತ್ತೊಂದು.

ಸ್ವಾತಂತ್ರ್ಯ ಸಮರದಲ್ಲಿ ಕಮ್ಯೂನಿಸ್ಟರು ವಹಿಸಿದ್ದ ಗಮನಾರ್ಹ ಪಾತ್ರದ ಅರಿವೇ ಇಲ್ಲದಿರುವ ಹೊಸ ಪೀಳಿಗೆಗೆ ಏಕೆಜಿಯವರ ಬದುಕನ್ನು ಪರಿಚಯಿಸಬೇಕಾಗಿದೆ. ಗಾಂಧಿಯವರ ನೇತೃತ್ವದ ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕಿ ತನ್ನ ಪ್ರಗಲ್ಭ ದೇಶಪ್ರೇಮ ಹಾಗೂ ಬೆಳೆಯುತ್ತಿದ್ದ ಸಮಾಜವಾದೀ ಪ್ರಜ್ಞೆಯಿಂದಾಗಿ ಕಮ್ಯೂನಿಸ್ಟನಾಗಿ ರೂಪುಗೊಂಡ ಪ್ರಾಥಮಿಕ ಶಾಲಾ ಶಿಕ್ಷಕನೊಬ್ಬನ ಗಾಥೆಯನ್ನು ಪುನಃ ಹೇಳಬೇಕಾಗಿದೆ. ಭಾಜಪ ಮತ್ತು ರಾ.ಸ್ವ.ಸಂ ತಮ್ಮ ಹುಸಿ ರಾಷ್ಟ್ರೀಯತೆಯ ಪ್ರದರ್ಶನದೊಂದಿಗೆ ದೇಶಪ್ರೇಮದ ಸಾರವನ್ನೇ ವಿರೂಪಗೊಳಿಸುತ್ತಿರುವ ಸಮಯದಲ್ಲಿ, ಎ.ಕೆ.ಜಿ ಮತ್ತು ಇತರ ಸಹಸ್ರಾರು ಪ್ರಗತಿಪರ ಯುವ ದೇಶಪ್ರೇಮಿಗಳು ಅನುಸರಿಸಿದ ಹಾದಿಯನ್ನು ಇನ್ನಷ್ಟು ಬೆಳಗಿಸಬೇಕಾಗಿದೆ.

ದೇಶದ ದುಡಿಯುವ ಜನತೆಯ ಹೃದಯದಲ್ಲಿ ಎ.ಕೆ.ಜಿ.ಯವರಿಗೊಂದು ವಿಶಿಷ್ಟ ಸ್ಥಾನವಿದೆ. ನಾಲ್ಕು ದಶಕಗಳ ಕಾಲ ಅವರು ಅತ್ಯಂತ ಸಮರ್ಪಣಾ ಭಾವದಿಂದ ಕಮ್ಯೂನಿಸ್ಟ್ ಪಕ್ಷಕ್ಕಾಗಿ ದುಡಿದರು. 50ರ ದಶಕದಿಂದಲೂ ಅವರು ಅವಿರತವಾಗಿ ಪಕ್ಷದ ನಾಯಕರಾಗಿದ್ದವರು. ಸಿಪಿಐ(ಎಂ)ನ ಸ್ಥಾಪನೆ ಮತ್ತು ತಮ್ಮ ಸಾವಿನ ನಡುವೆ ಅವರು ಪಕ್ಷದ ಪಾಲಿಟ್ ಬ್ಯೂರೋ ಮತ್ತು ಕೇಂದ್ರಸಮಿತಿಯ ಸದಸ್ಯರಾಗಿದ್ದರು. 1952 ರಿಂದ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿ, 1977 ರವರೆಗೆ ಸೇವೆ ಸಲ್ಲಿಸಿದರು. 25 ವರ್ಷಗಳ ಕಾಲ ಪಕ್ಷದ, (ಮೊದಲು ಸಂಯುಕ್ತ, ನಂತರ ಸಿಪಿಐ(ಎಂ) ಸಂಸದೀಯ ತಂಡದ ನಾಯಕರಾಗಿದ್ದರು.

ಅಸಾಧಾರಣ ವ್ಯಕ್ತಿತ್ವ

ಈ ಎಲ್ಲಾ ವಿವರಗಳು ಅವರ ಅಸಾಧಾರಣ ವ್ಯಕ್ತಿತ್ವದ ಸಂಪೂರ್ಣ ಚಿತ್ರ ನೀಡಲಾರವು. ಸಾಮ್ರಾಜ್ಯಶಾಹಿ ಮತ್ತು ಅನ್ಯಾಯದ ವಿರುದ್ಧ ಅವರಿಗಿದ್ದ ಅತೀವ ರೋಷ ಅವರನ್ನು ಒಬ್ಬ ಸಾಮಾನ್ಯ ಪ್ರಾಥಮಿಕ ಶಿಕ್ಷಕನಿಂದ ರೈತ ಕಾರ್ಮಿಕರ ಅಪ್ರತಿಮ ನಾಯಕರಲ್ಲೊಬ್ಬರಾಗಿ ಬೆಳೆಸಲು ಕಾರಣವಾಯಿತು. ಭಾಷೆ, ಧರ್ಮ ಮತ್ತು ರಾಷ್ಟ್ರೀಯತೆಗಳ ಗೋಡೆಗಳನ್ನು ಮೀರಿ ದುಡಿಯುವ ಜನತೆಯ ಬೆಸುಗೆ ಸಾಧಿಸಿದ ಎ.ಕೆ.ಜಿ ಅತ್ಯಂತ ಜನಾನುರಾಗಿ ನಾಯಕರಾಗಿ ಬೆಳೆದು ಬಂದವರು. ಹಿಂದೂ, ಮುಸಲ್ಮಾನ ಅಥವಾ ಕಿರಿಸ್ತಾನ ಎಂಬ ಬೇಧವಿಲ್ಲದೆ ಜನಸಾಮಾನ್ಯರು ಅವರ ಹಿಂದೆ ಅಣಿನೆರೆದು ನಿಂತರು.



ಭಾರತದ ಕಮ್ಯುನಿಸ್ಟ್ ಚಳುವಳಿಯ ಮಹಾನ್ ನಾಯಕರು - ಎಕೆಜಿ, ಇಎಂಎಸ್, ಪಿ.ಸುಂದರಯ್ಯ

1930 ರಿಂದ 1970 ರ 5 ದಶಕಗಳಲ್ಲಿ ದೇಶದಲ್ಲಿ ನಡೆದ ಪ್ರಮುಖ ರಾಜಕೀಯ ಚಳುವಳಿಗಳು ಮತ್ತು ಪ್ರಕ್ಷೋಭೆಗಳನ್ನು ಒಳಗೊಂಡಂತಹ ಬದುಕು ಎಕೆಜಿಯವರದ್ದು. 1930 ರ ಜೈಲು ಭರೋ ಚಳುವಳಿಯಲ್ಲಿ ಭಾಗವಹಿಸಿದ ಅವರು ಮತ್ತೆ ಹಿಂತಿರುಗಿ ನೋಡಲೇ ಇಲ್ಲ. ಅವರೊಬ್ಬ ಆದರ್ಶಪ್ರಾಯ ದೇಶಪ್ರೇಮಿಯಾಗಿದ್ದರು. ಒಟ್ಟು 16 ವರ್ಷಗಳ ಅವಧಿಯ ಕಾರಾಗೃಹವಾಸದಲ್ಲಿ, ಹತ್ತು ವರ್ಷಗಳ ಜೈಲುವಾಸವನ್ನು ಅವರು ಅನುಭವಿಸಿದ್ದು ಆಂಗ್ಲರ ಆಡಳಿತೆಯಲ್ಲಿ. ಆ ಕಾಲಘಟ್ಟದ ಮೂರು ಪ್ರಮುಖ ರಾಜಕೀಯ ವಾಹಿನಿಗಳನ್ನು ಎಕೆಜಿಯವರ ಬದುಕು ಬಿಂಬಿಸುತ್ತದೆ. ಕಾಂಗ್ರೆಸ್ಸಿನ ಗಾಂಧಿವಾದಿ ಕಾರ್ಯಕ್ರಮಗಳಿಂದಾಗಿ ಮೂಡಿದ ಜನಜಾಗೃತಿ; ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಪ್ರತಿಪಾದಿಸಿದ ತೀವ್ರಗಾಮಿ ಸಿದ್ಧಾಂತ (ಎಕೆಜಿ ಕೇರಳದಲ್ಲಿ ಈ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರು); ಕಮ್ಯೂನಿಸಂ ಎಡೆಗೆ ಸೋಷಲಿಸ್ಟರು ಒಲಿದ ದಾರಿ.

ಕೇರಳದ ಇತಿಹಾಸದಲ್ಲಿ ಎಕೆಜಿಯವರಿಗೊಂದು ವಿಶಿಷ್ಟ ಸ್ಥಾನವಿದೆ. ಪಿ.ಕೃಷ್ಣಪಿಳ್ಳೆ ಮತ್ತು ಇ.ಎಂ.ಎಸ್ ನಂಬೂದಿರಿಪಾಡ್ ಅವರ ಸಹವರ್ತಿಗಳು. ಈ ತ್ರಿಮೂರ್ತಿಗಳು ಕೇರಳದಲ್ಲಿನ ಸಾಮೂಹಿಕ ಚಳುವಳಿ ಮತ್ತು ಕಮ್ಯೂನಿಸ್ಟ್ ಪಕ್ಷವನ್ನು ರೂಪಿಸಿದರು. ಈ ಮೂವರೂ ವೈಯಕ್ತಿಕವಾಗಿ ತಮ್ಮದೇ ಆದ ವಿಶೇಷ ವರ್ಚಸ್ಸನ್ನು ಹೊಂದಿದ್ದರು. ಎಕೆಜಿಯವರಲ್ಲಿದ್ದ ವಿಶೇಷವಾದ ವರ್ಚಸ್ಸೆಂದರೆ ಅವರ ಜನಪರ ವ್ಯಕ್ತಿತ್ವ. ಜನಸಮುದಾಯದೊಂದಿಗಿನ ಅವರ ಸಂಬಂಧ ಅತ್ಯಂತ ಸೌಹಾರ್ದಯುತವಾದದ್ದು.

ಎಕೆಜಿ ನಿರ್ಭೀತ ಸಾಹಸದ ವ್ಯಕ್ತಿಯಾಗಿದ್ದರು. ಇನ್ನೂ ಯುವಕರಾಗಿದ್ದಾಗಲೇ ಅವರು ಜಾತಿಪೀಡನೆ ಮತ್ತು ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ವಿರುದ್ಧ ತಮ್ಮ ನೈಜ ಆಕ್ರೋಶವನ್ನು ಹರಿಯಬಿಟ್ಟಿದ್ದರು. ಪುರೋಹಿತ ಶಾಹಿಯು ಹೇರಿದ್ದ ನಿಷೇಧವನ್ನು ಧಿಕ್ಕರಿಸಿ, ಅಸ್ಪೃಶ್ಯರು ಮಂದಿರ ಪ್ರವೇಶಿಸಲು ಮತ್ತು ದೇವಾಲಯದ ಘಂಟೆಯನ್ನು ಬಾರಿಸಲು ನಡೆದ ಚಳುವಳಿಗೆ ನೇತೃತ್ವ ಕೊಟ್ಟಿದ್ದಕ್ಕಾಗಿ ಗುರುವಾಯೂರು ದೇವಸ್ಥಾನದ ಅರ್ಚಕ ಸಮುದಾಯ ಅವರನ್ನು ಹಿಗ್ಗಾಮುಗ್ಗಾ ಥಳಿಸಿತ್ತು. ಹಲವು ದಿನಗಳವರೆಗೆ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿರಬೇಕಾಯಿತು.

ವೆಲ್ಲೂರು ಜೈಲಿನಿಂದ 1941 ರಲ್ಲಿ ಅವರು ಪಾರಾಗಿ ಬಂದ ಪ್ರಸಂಗ ಅತ್ಯಂತ ಜನಜನಿತ. ಅವರ ದೈಹಿಕ ಸಾಮರ್ಥ್ಯ ಮತ್ತು ಸಹಿಷ್ಣುತೆ ಆ ಸಮಯದಲ್ಲಿ ಅತ್ಯಂತ ಸ್ಫುಟವಾಗಿ ಗೋಚರಗೊಂಡವು. ಸಾಮ್ರಾಜ್ಯಶಾಹಿಯ ಯಾವುದೇ ಸೆರೆಮನೆಯೂ ಅಡಗಿಸಲಾರದಂತಹ ಅಪ್ರತಿಮ ವ್ಯಕ್ತಿತ್ವ ಅವರದ್ದು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ, ಬಡ ಕ್ರಿಶ್ಚಿಯನ್ ಕೃಷಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಅಮರಾವತಿಯಲ್ಲಿ ಅವರು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡರು. ಈ ಚಾರಿತ್ರಿಕ ಪ್ರತಿಭಟನೆ ಎಷ್ಟೊಂದು ಪ್ರಭಾವ ಬೀರಿತೆಂದರೆ, ಕಟ್ಟಾ ಕಮ್ಯೂನಿಸ್ಟ್ ವಿರೋಧಿಯಾಗಿದ್ದ ಫಾದರ್ ವಿಡಕ್ಕನ್ ತಮ್ಮ ನಿಲುವುಗಳನ್ನು ಬದಲಾಯಿಸಿದರಷ್ಟೇ ಅಲ್ಲ, ಪ್ರತಿಭಟನೆಯಲ್ಲಿ ನೇರವಾಗಿ ಭಾಗವಹಿಸಿದರು ಸಹ. ತಮ್ಮ ಕೆಚ್ಚಿನ ವ್ಯಕ್ತಿತ್ವ ಮತ್ತು ಸಾಹಸದ ಮೂಲಕ ಎಲ್ಲಾ ಅಡೆತಡೆಗಳನ್ನು ಮೂಲೆಗೊತ್ತುವ ಗುಣ ಎಕೆಜಿಯವರದ್ದು.

25 ವರ್ಷಗಳ ಕಾಲ ಸಂಸತ್ತಿನ ಸದಸ್ಯರಾಗಿದ್ದ ಎಕೆಜಿ, ಕಮ್ಯೂನಿಸ್ಟರ ಸಂಸದೀಯ ಕರ್ತವ್ಯಗಳಿಗೊಂದು ಗುಣಾತ್ಮಕ ಪರಂಪರೆಯನ್ನೇ ನೀಡಿದವರು. ಸಂಸದೀಯ ಬದುಕಿನ ಆಮಿಷಗಳಿಂದ ಅವರು ಕಡೆಯವರೆಗೂ ದೂರ ವಾಗಿಯೇ ಉಳಿದರು. ಜನಸಮುದಾಯದೊಂದಿಗಿನ ನಿಕಟ ಸಂಪರ್ಕ ಮತ್ತು ಆಳುವ ಜನರ ಬೂಟಾಟಿಕೆಯನ್ನು ಬಯಲಿಗೆಳೆಯುವ ಸತ್ಯನಿಷ್ಠುರತೆಯ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು ಎಕೆಜಿ.

ಕ್ರಿಯಾಶೀಲತೆಯ ಸಾಕಾರ ಮೂರ್ತಿಯಾಗಿದ್ದರು ಏಕೆಜಿ. ಮಾರ್ಕ್ಸ್‌ವಾದೀ ಬದ್ಧತೆ ಹಾಗೂ ಜನತೆಯೊಂದಿಗಿನ ಗಾಢವಾದ ಸಂಬಂಧಗಳಿಂದಾಗಿ, ವ್ಯವಹಾರಿಕ ದೃಷ್ಟಿ ಅವರ ಬಳಿ ಎಂದೂ ಸುಳಿಯಲಿಲ್ಲ. ಜನಪರ ಹೋರಾಟ ಎಲ್ಲಿಯೇ ನಡೆಯಲಿ ಅದರ ಬಗ್ಗೆ ಮಾಹಿತಿ ಸಿಕ್ಕಿದ ಕೂಡಲೇ ಆ ಪ್ರದೇಶಕ್ಕೆ ಧಾವಿಸಿ, ಅದರಲ್ಲಿ ಪಾಲ್ಗೊಳ್ಳುತ್ತಿದ್ದರು. ಗುಜರಾತಿನ ಜನ ಭಾಷಾವಾರು ಪ್ರಾಂತ್ಯಗಳ ಪುನರ್ರಚನೆಯನ್ನು ಒತ್ತಾಯಿಸಿ ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ನಡೆಸಿದಾಗ, ಏಕೆಜಿ ಅಲ್ಲಿದ್ದರು. ಪಂಜಾಬಿನ ರೈತರು ಅಭಿವೃದ್ಧಿ ತೆರಿಗೆಯ ವಿರುದ್ಧ ಚಳುವಳಿ ನಡೆಸಿದಾಗ, ಎಕೆಜಿ ಅವರ ಜತೆಗೂಡಿದರು. ಜನಪರ ಹೋರಾಟಗಳಲ್ಲಿ ಭಾಗವಹಿಸುವ ಸಲುವಾಗಿ, ಅವರು ಹೋಗದೇ ಇರುವ ಸ್ಥಳಗಳೇ ಇಲ್ಲ ಎನ್ನಬಹುದು. ತಮ್ಮ ಜೀವಿತದ ಕೊನೆಯ ದಿನಗಳನ್ನವರು ತುರ್ತುಪರಿಸ್ಥಿತಿಯ ನಿರಂಕುಶ ಆಡಳಿತೆಯ ವಿರುದ್ದದ ಸಂಘರ್ಷದಲ್ಲಿ ಕಳೆದಿದ್ದರು.

ಪ್ರಗತಿಪರತೆ ಮತ್ತು ಸಮರಶೀಲತೆಯ ಬಗ್ಗೆ ಬಲವುಳ್ಳ ಇಂದಿನ ಯುವಕ ಯುವತಿಯರು, ಏಕೆಜಿಯವರ ಬದುಕಿನಿಂದ ಕಲಿಯವುದೇನಾದರೂ ಇದ್ದರೆ, ಮೊತ್ತಮೊದಲಿಗೆ ಅವರು ತಿಳಿಯಬೇಕಾದದ್ದು ಇಷ್ಟು. **ಜಾತಿಪದ್ಧತಿ ಮತ್ತು ಜಾತಿ ದಬ್ಬಾಳಿಕೆಯ ವಿರುದ್ಧ ಹೋರಾಟ ನಡೆಸದೆ ಯಾರೂ ಕ್ರಾಂತಿಕಾರಿಯಾಗಲು ಸಾಧ್ಯವಿಲ್ಲ.** ಎಕೆಜಿಯವರ ಸಾಮಾಜಿಕ ಮಧ್ಯಪ್ರವೇಶಿಕೆ ಪ್ರಾರಂಭವಾದದ್ದೇ ಗುರುವಾಯೂರು ದೇವಸ್ಥಾನ ಪ್ರವೇಶ ಸತ್ಯಾಗ್ರಹದ ಮೂಲಕ. ಅದಕ್ಕಾಗಿ ಅವರು ಕ್ರೂರ ಹಲ್ಲೆಗೊಳಗಾದರು ಕೂಡ. ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಇ.ಎಂ.ಎಸ್ ನಂಬೂದಿರಿಪಾಡ್, ಪಿ.ಸುಂದರಯ್ಯ ಮತ್ತು ಇತರರಂತೆಯೇ, ಎಕೆಜಿಯವರ ಬದುಕಿನಲ್ಲೂ, ಜಾತಿ ದಬ್ಬಾಳಿಕೆ ಮತ್ತು ಸಾಮಾಜಿಕ ಕ್ರೌರ್ಯದ ಪ್ರಾಥಮಿಕ ಸಾಮಾಜಿಕ ಪ್ರಜ್ಞೆಯನ್ನು ಒದಗಿಸಿತ್ತು. ಆ ನಂತರ ಅದು ಉನ್ನತ ಸಾಮಾಜಿಕ ಪ್ರಜ್ಞೆಯಾಗಿ ಬೆಳೆದುಬಂತು.

ಎಕೆಜಿಯವರ ಬದುಕಿನಿಂದ ಕಲಿಯಲೇಬೇಕಾದ ಇನ್ನೊಂದು ಪಾಠವೆಂದರೆ, ಮಾರ್ಕ್ಸ್‌ವಾದಿ ದೃಷ್ಟಿಕೋನವಿಲ್ಲದೆ ಹೋದಲ್ಲಿ, ಯಾರೂ ಪರಿಪೂರ್ಣ ಕಮ್ಯೂನಿಸ್ಟ್‌ರಾಗಲು ಸಾಧ್ಯವಿಲ್ಲ ಎಂಬ ವಾಸ್ತವಾಂಶ. ಕಮ್ಯೂನಿಸ್ಟ್ ಚಳುವಳಿಯ ಪ್ರತಿಯೊಂದು ಹಂತದಲ್ಲೂ ಮಾರ್ಕ್ಸ್‌ವಾದ ಮತ್ತು ಅದರ ಮೂಲ ತತ್ವಗಳ ಪರವಾಗಿ ದೃಢನಿಲುವುಗಳನ್ನು ತೆಗೆದುಕೊಳ್ಳಲು ಎಕೆಜಿಯವರಿಗೆ ಸಾಧ್ಯವಾದದ್ದು, ಅವರ ಮಾರ್ಕ್ಸ್‌ವಾದೀ/ ಲೆನಿನ್‌ವಾದೀ ತತ್ವನಿಷ್ಠುರತೆ

ಪುಟ 11 ಕ್ಕೆ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಅಕ್ಟೋಬರ್ 8, 2004**
  ರೈತ-ಕೂಲಿಕಾರರ ವಿಧಾನಸೌಧ ಚಲೋ, ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಆರಂಭ - ಬೆಳಿಗ್ಗೆ 11 ಘಂಟೆಗೆ
- **ಅಕ್ಟೋಬರ್ 9, 2004**
  ಗಂಗಾವತಿಯಲ್ಲಿ ಅಸ್ಪೃಶ್ಯತೆ ಮತ್ತು ದಲಿತ ಕೂಲಿಕಾರ ಮಹಿಳೆಯ ಮೇಲೆ ದೌರ್ಜನ್ಯ ಖಂಡಿಸಿ, ಅಪರಾಧಿಗಳನ್ನು ಬಂಧಿಸಲು ಆಗ್ರಹಿಸಿ, ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆ, ಕೃ.ಪ್ರಾ. ಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ
- **ಅಕ್ಟೋಬರ್ 11, 2004**
  ಗುರುತಿನ ಚೀಟಿ, ಪಿಂಚಣಿ, ವೈದ್ಯಕೀಯ, ಮಕ್ಕಳ ಶಿಕ್ಷಣ, ಮದುವೆಗೆ ಸಹಾಯ ಇತ್ಯಾದಿ ಬೇಡಿಕೆಗಳನ್ನು ಒತ್ತಾಯಿಸಿ, ತಾಲ್ಲೂಕು ಕೇಂದ್ರಗಳಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ
- **ಅಕ್ಟೋಬರ್ 15, 2004**
  ನಿರುದ್ಯೋಗ ಭತ್ಯೆ, ಖಾಲಿ ಇರುವ ಹುದ್ದೆಗಳ ಭರ್ತಿ, ಕೃಪಾಂಕ ನೌಕರರಿಗೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ, ಯುವಜನರ ವಿಧಾನಸೌಧ ಚಲೋ
- **ಅಕ್ಟೋಬರ್ 16 ಮತ್ತು 17, 2004**
  ಪಲ್ಲವಿ ಸಾಂಸ್ಕೃತಿಕ ವೇದಿಕೆ ಟ್ರಸ್ಟ್ ವತಿಯಿಂದ ಮಕ್ಕಳ ಕವಿಗೋಷ್ಠಿ, ವಿಚಾರ ಸಂಕಿರಣ, ಸುಗಮ ಸಂಗೀತ, ಯಕ್ಷಗಾನ ಇತ್ಯಾದಿ. ಕುವೆಂಪು ಕಲಾಕ್ಷೇತ್ರ, ಬೆಂಗಳೂರು
- **ನವೆಂಬರ್ 2,3 ಮತ್ತು 4 2004**
  ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ ಮಂಗಳೂರಿನಲ್ಲಿ ನವೆಂಬರ್ 4ರಂದು ಬೃಹತ್ ರ್‍ಯಾಲಿ. ಮುಖ್ಯ ಅತಿಥಿ : ಕಾ। ಮಹಮ್ಮದ್ ಅಮಿನ್, ಪ.ಬಂಗಾಳ ಸಾರಿಗೆ ಸಚಿವರು.

ಯಡಿಯೂರಪ್ಪನ ಹುಟ್ಟುಹಬ್ಬ !

ರೋಧ ಪಕ್ಷದ 'ಅಧಿಕೃತ' ನಾಯಕ ಯಡಿಯೂರಪ್ಪನವರು ದಿಢೀರನೇ ದ್ದೂರಿಯಿಂದ ಹುಟ್ಟುಹಬ್ಬ ಆಚರಿಸಿಕೊಂಡ ಔಚಿತ್ಯವೇನು? ಸ್ವಾತೀಗಣ್ಯರನ್ನು' ಕರೆಸಿಕೊಂಡು ಪರಾಕು ಹಾಕಿಸಿಕೊಂಡದ್ದು ಯಾವ ಮುಖವನ್ನು ಮರೆ ಮಾಚಿಕೊಳ್ಳಲು?

ಕೆಲವರು 'ನೇಗಿಲಯೋಗಿ' ಎಂದರು. ಇನ್ನೂ ವರು ಗೂಳಿ ಹೋರಿ ಎಂದರೆ, ವಿಧಾನಸೌಧ ಹೆಯಲ್ಲಿ ಗುಡುಗುವ ಸಿಂಹವೆಂದರು, ಇವರು ಡುಗಿದರೆ ಅಸೆಂಬ್ಲಿ ನಡುಗುತ್ತೇ' ಎಂದರು.... ಗೆಲ್ಲಾ ಹೇಳಲು, ಹೇಳಿಸಿಕೊಳ್ಳಲು ಏನಾದರೂ ಾನ-ದಂಡ ಇರಬೇಕೆಂಬುದೇನೂ ಅಲ್ಲಿರಲಿಲ್ಲ. ಲ್ಲಿ ಸನ್ಯಾಸಿಗಳು - ಮಠಾಧೀಶರು, ರಾಜಕೀಯ ಯಕರು ಇತ್ಯಾದಿ ಸೇರಿಕೊಂಡಿದ್ದರು. ಒಬ್ಬರು ನ್ನೊಬ್ಬರನ್ನು ಮೇಲಕ್ಕೆತ್ತುತ್ತಿದ್ದರೆ, ಯಾರು ಲ್ಲಿದ್ದಾರೆ ಎಂಬುದೇ ಗೋಜಲಾಗಿತ್ತು.

ಸಂದರ್ಭ 'ಅಧಿಕೃತ ವಿರೋಧ ಪಕ್ಷದ ನಾಯಕ' ಡಿಯೂರಪ್ಪನವರಿಗೆ 61 ವರ್ಷ ತುಂಬಿತು. ನನಾಯಕನಿಗೆ 61 ಆಗುವುದೆಂದರೇನು? ಭಿನಂದಿಸಿ ಆರಾಧಿಸಬಾರದೆ ? ೊಗಳಬಾರದೆ? ಅವರನ್ನು ಅಭಿನಂದಿಸಲು ್ವಾಮಿಗಳು, ಬಿಜೆಪಿ ನಾಯಕರು, ಸಾಲುಗಟ್ಟಿ ೇರಿದ್ದರು. ಇಲ್ಲಿ ಅಧಿಕಾರಸ್ತರು, ಅಧಿಕಾರದಾಹಿ ಪಾಹಪಿಗಳು, 'ಮತ'ವಾದಿಗಳು.... ಹೀಗೆ ಶೇಷ ಸಂಯೋಜನೆಯೇ ಇಲ್ಲಿದ್ದುದದರಿಂದ ರಸ್ಪರ ಮಂಗಳಾರತಿ ನಡೆದೇ ಇತ್ತು. ಹೀಗಾಗಿ ನೂ ಮಾತನಾಡಿದರೂ ಆಯ್ತು. 'ನೇಗಿಲ ೋಗ್ಯ', 'ಯೋಗಿಲ ನೋಗಿಯ' ಎಂದು ತಪ್ಪಾಗಿ ಮಾತನಾಡಿದರೂ ಚಪ್ಪಾಳೆ ದಕ್ಕಿಸಿಕೊಂಡವರೆಂದರೆ ವಾಜಪೇಯಿ. ಈ ಮುಖಸ್ತುತಿ, ವ್ಯಕ್ತಿಯೊಬ್ಬನ ವೈಭವೀಕರಣ ಹೀಗೆಲ್ಲಾ ಅಗತ್ಯವಿತ್ತೇ' ಇಂತಹ ಬಿರುದು ಬಾವಲಿಗಳಿಗೆ ಯಡಿಯೂರಪ್ಪ ಅರ್ಹರೇ, ಬಿಜೆಪಿಯಲ್ಲಿ 61 ಆದವರು ಅದೆಷ್ಟಿಲ್ಲ? ಇಂತಹ ಪ್ರಶ್ನೆಗಳ ಅಗತ್ಯವೇ ಇಲ್ಲ ಎನ್ನುತ್ತಾರೆ ಅದನ್ನು ಸಂಘಟಿಸಲು ಹೊಣೆ ಹೊತ್ತಿದ್ದ ಶಾಸಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು. 50 ಸಾವಿರ ಜನಕ್ಕೆ ಊಟವನ್ನು ಕೊಡುವ ಇಂತಹ ಭಾರಿ ಸಮಾರಂಭಕ್ಕೆ ಹಣ ಎಲ್ಲಿಂದ ಎಂದರೆ ಮನೆಯಲ್ಲಿ ಹಬ್ಬ ಮಾಡೋದಿಲ್ಲವೇ' ಎನ್ನುತ್ತಾರೆ ಸುಬ್ಬ ನಾಯ್ಡು. ಇಂತಹ ಪರಾಕು ಹಾಕಿಸಿಕೊಳ್ಳುವುದರಲ್ಲಿ ಕಾಂಗ್ರೆಸ್ಸಿಗರೇ ಮೇಲುಗೈ ಸಾಧಿಸಿದವರು. ದಳದವರು ಆ ಸೆಳೆತದಿಂದ ಬಿಡಿಸಿಕೊಂಡಿಲ್ಲ. ಈಗ ಬಿಜೆಪಿಯೂ ಈ ಕೊಳಕು ಗದ್ದೆ ಓಟದಲ್ಲಿ ಯಾರಿಗೇನೂ ಕಮ್ಮಿ ಇಲ್ಲ ಎಂದು ಹೊರಟಿದೆ. ಪಕ್ಷದ ನೀತಿಗಳಿಗಿಂತ 'ನೇತಾಗಳೇ' ಅತಿ ಮುಖ್ಯವೆಂಬ ಭ್ರಮೆ ಸೃಷ್ಟಿಸುವುದು, ವ್ಯಕ್ತಿ ಆರಾಧನೆಯ ಇಂತಹ ಭಾವನೆಗಳನ್ನೇ ಜನರಲ್ಲಿ ಬಿತ್ತಿ ಹಾದಿ ತಪ್ಪಿಸಿ, ಅದರ ರಕ್ಷಣೆಯಲ್ಲಿ ಎಲ್ಲಾ ಅನಿಷ್ಟಗಳನ್ನು ಮುಚ್ಚಿಕೊಳ್ಳುವುದು ಇಂತಹ ಬಲಪಂಥೀಯ ರಾಜಕಾರಣದಲ್ಲಿ ಹೊಸದೇನಲ್ಲ.

ಸಮಾಜದಲ್ಲಿ 'ಗಣ್ಯ'ರೆನಿಸಿಕೊಂಡಂತಹ ಪೇಜಾವರ, ಆದಿ ಚುಂಚನಗಿರಿ, ಸಿದ್ದಗಂಗಾ, ತರಬಾಳು, ಕಾಗಿನೆಲೆ, ಗೋಸಾಯಿ ಮಠಗಳಂತಹ ಸ್ವಾಮಿಗಳು, ಚಿದಾನಂದಮೂರ್ತಿಯಂತಹ ಸಾಹಿತಿಗಳಿಂದ, ವಾಜಪೇಯಿಯವರಂತಹ ನಾಯಕರಿಂದ ಹೊಗಳಿಸಿಕೊಂಡ ಕೂಡಲೇ ಪಾತಕಗಳು ಮರೆಯಾಗುತ್ತಾವೆಯೇ? ಇದೇ ವಾಜಪೇಯಿಯವರ 'ದೇಶಭಕ್ತ' ಸರ್ಕಾರದ ನೀತಿಗಳಿಂದ ಕೃಷಿ ದಿವಾಳಿಯೆದ್ದು, ಮಣ್ಣಿನ ಮಕ್ಕಳು ಬದುಕಲಾಗದೇ ಕರ್ನಾಟಕದಲ್ಲಿಯೂ ಹಿಂದು ಹಿಂಡಾಗಿ ಆತ್ಮಹತ್ಯೆಗೆ ಈಡಾಗಿ ಮಣ್ಣು ಸೇರುತ್ತಿರುವಾಗ, ಹಸಿವಿನ ಸಾವನ್ನಪ್ಪುತ್ತಿರುವಾಗ ಚಕಾರವೆತ್ತದ ಯಡಿಯೂರಪ್ಪ, ರಾಜ್ಯದಲ್ಲಿ ಕೋಮುದ್ವೇಷದ ಕಿಚ್ಚಿಗೆ ಎಣ್ಣೆ ಸುರಿಯುತ್ತಾ ಕೊಳ್ಳಿ ಹಿಡಿದು ತಿರುಗಾಡುತ್ತಿದ್ದವರು. ಅಸೆಂಬ್ಲಿಯಲ್ಲಿ ಮಾತನಾಡಿ ರೈತ ನಾಯಕ ಹೇಗಾದರು ಎಂಬುದಕ್ಕೆ ಈ ಗಣ್ಯರ ವಿವರಣೆಯಿಲ್ಲ. ರೈತ ನಾಯಕನೆಂದು ಹುಟ್ಟು ಹೋರಾಟಗಾರನೆಂದು ಆರೋಪಿಸಿಕೊಳ್ಳಲು ಕೊಂಚವಾದರೂ ಅಳುಕಿಲ್ಲ



ಅತಿ ವಿನಯಂ ಧೂರ್ತ ಲಕ್ಷಣಂ

ಎಂಬುದೇ ವಂಚಕತನಕ್ಕೆ ಉದಾಹರಣೆ. ರೈತರ ಕಾಳಜಿಗಿಂತ ಅವರ ಹೆಸರಿನ ಹಣೆಪಟ್ಟಿ ಸಾಕು ಎಂಬುದೇ ಪರಮ ದೃಷ್ಟಿ.

ಇಂತಹ ದಿಢೀರನೇ ಕಾರ್ಯಕ್ರಮ ವೇದಿಕೆಗೆ ನೆಗೆದುಬಂದ ಹಿನ್ನೆಲೆ ಏನು? ಉಮಾಭಾರತಿಯನ್ನು ಮುಂದಿಟ್ಟುಕೊಂಡು ತಿರಂಗಾ ಯಾತ್ರೆ ನಡೆಸಿ, ದೇಶಭಕ್ತಿಯ ಸೋಗು ಹಾಕಿ ನಟಿಸಲು ಬಿಜೆಪಿ ಯತ್ನಿಸಿತು. ಈ ಬಾವುಟದ ಮರೆಯಲ್ಲಿ ತಮ್ಮ ಕುಕೃತ್ಯ ಮುಚ್ಚಿಕೊಳ್ಳ ಬಯಸಿತಲ್ಲದೇ ಹಿಂದೂ-ಮುಸ್ಲಿಂ ರ ನಡುವೆ ಅನುಮಾನದ ಧಗೆ ಹೊತ್ತಿಸಲು ಹೆಣಗಿತು. ಇದು ಕೂಗಿಕೊಂಡ ವರದಷ್ಟೇ ಕಿತಾಪತಿ ಎಂದು, ಜನಸ್ಪಂದನವಿಲ್ಲದೇ ಅಂತಿಮವಾಗಿ ಬಿಜೆಪಿ ಯೊಳಗಿನ ಕಚ್ಚಾಟವೆಂಬುದು ಬಯಲಾದಾಗ ಅದರ ಲಾಭ ಹೊಡೆಯಲು ಅಷ್ಟಾಗಿ ಆಗದಿರುವು ದುರ ಬಗ್ಗೆ ವ್ಯಥೆ ಪಟ್ಟಿತು. ಕೋಮುವಾದವನ್ನು ಬಡಿದೆಬ್ಬಿಸಿದ ಬಳಿಕ ಈಗ ಯಡಿಯೂರಪ್ಪನ ಹುಟ್ಟುಹಬ್ಬದ ಮೂಲಕ ರೈತರ ಪರವೆಂಬ ಒಣ ಕಾಳಜಿಯ ಯತ್ನಕ್ಕೆ ಇಳಿದಿದೆ. ಒಂದೆಡೆ ಕೋಮು ದ್ವೇಷದ ಉದ್ರೇಕ ಹೆಚ್ಚಿಸುವುದು, ಇನ್ನೊಂದೆಡೆ ಯಿಂದ ಜನರ ಕಷ್ಟಗಳಿಗೆ ಧ್ವನಿ ಕೊಡುವ ಪಕ್ಷವೆಂದು ಬಿಂಬಿಸಿಕೊಳ್ಳುವುದು ಬಿಜೆಪಿ ಸಂಘ ಪರಿವಾರ ಅನುಸರಿಸಿಕೊಂಡು ಬಂದಿರುವ ತಂತ್ರ.

ಮಧ್ಯಂತರ ಚುನಾವಣೆಯ ನಿರೀಕ್ಷೆಯಲ್ಲಿರುವ ಬಿಜೆಪಿ ಹೇಗಾದರೂ ಜಾತ್ಯತೀತ ಜನತಾದಳ ಶಕ್ತಿಯನ್ನು ಕುಗ್ಗಿಸಿದರೇ ಮಾತ್ರವೇ ತನ್ನ ಶಕ್ತಿ ವೃದ್ಧಿಯಾಗುವುದು ಎಂದು ಲೆಕ್ಕಾಚಾರ ಇರಿಸಿದೆ. ಜೆಡಿ(ಎಸ್) ಗಿರುವ ಗ್ರಾಮೀಣ ಪ್ರದೇಶದ ಜನರ ಒಲವು, ತಳಹದಿ, ರೈತರ ಪಕ್ಷವೆಂದರೆ ಜೆಡಿ(ಎಸ್) ಎಂಬಂತಹ ನೆಲೆಯನ್ನು ಕಬಳಿಸಲು, ದೇವೇಗೌಡ, ಸಿದ್ದರಾಮಯ್ಯನವರಿಗಿಂತ ತಾವೇನೂ ಕಡಿಮೆಯಿಲ್ಲ ಎಂದು, ತಮ್ಮದು ಮಾರ್ವಾಡಿ ಪಕ್ಷವಲ್ಲ, ಮಣ್ಣಿನ ಮಕ್ಕಳ ಪಕ್ಷ ಎಂದು ಬಿಂಬಿಸಲು ನಡೆಸಿದ ಒಂದು ಕಸರತ್ತು ಇದು.

ಕರ್ನಾಟಕದ ಬಿಜೆಪಿಯೊಳಗೂ ಕಿತ್ತಾಟ ಇರುವುದು ಗುಟ್ಟಿನ ವಿಷಯವೇನಲ್ಲ. ತನ್ನನ್ನು ಬಿಟ್ಟು ಮುಖ್ಯಮಂತ್ರಿ ಇನ್ಯಾರೂ ಅಸಾಧ್ಯ ಎನ್ನುತ್ತಿರುವ ಅನಂತಕುಮಾರ್, ಯಡಿಯೂರಪ್ಪನವರ ನಡುವಿನ ಜಗಳ ತಿಳಿದದ್ದೆ. ಯಡಿಯೂರಪ್ಪನವರಿಗೆ ತನ್ನ ಬಲ ತೋರಿಸುವ ಬಯಕೆ, ಜನ ನಾಯಕನೆಂದು ಬಿಂಬಿಸಿಕೊಳ್ಳುವ ಆಶೆ. ರಾಷ್ಟ್ರ ನಾಯಕರ ಆಶೀರ್ವಾದ, ಜಾತಿ ಗುರುಗಳ ಬೆಂಬಲ ತನಗಿದೆ ಎಂಬ ಪ್ರದರ್ಶನ ಒಂದು ಪ್ರಸಂಗದ ಸೃಷ್ಟಿ ಇದು. ಅನಂತಕುಮಾರ್ ಯಡಿಯೂರಪ್ಪನ ಕಾಲಮುಟ್ಟಿ ನಮಸ್ಕರಿಸಿದಂತೆ ಕಂಡರೂ ಸಮಯ ಬಂದಾಗ ಕಾಲು ಎಳೆಯಲು ಆದೆಲ್ಲಿದೆ ಎಂದು ತಿಳಿಯುವುದು ಅಗತ್ಯವೆಂದೇ ಭಾವಿಸಿದಂತಿದೆ. ಮಾಜಿ ಮುಖ್ಯಮಂತ್ರಿ, ಸಂಸದ ಬಂಗಾರಪ್ಪ ಈ ಕಾರ್ಯಕ್ರಮಕ್ಕೆ ಬರದೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ವಿದೆಯೆಂದು ಅಸಹನೆ ವ್ಯಕ್ತಪಡಿಸಿದ್ದಾರೆ. ಅಸಲಿ ಸಂಗತಿ ಏನು?

ಬಿಜೆಪಿಯಂತಹ ಪಕ್ಷದ ನೀತಿಗಳು ಒಂದೆಡೆಗಿದ್ದರೆ, ಕಲಸುಮೇಲೋಗರ, ಭ್ರಷ್ಟತೆ, ಸಮಾಜದ ಮೌಲ್ಯಗಳ ಮೇಲೆ ಎರಗುವ, ಆತ್ಮವಂಚಕತನದ ಮೂರ್ತಿಯಾಗಿರುವ ಕೋಮುವಾದಿ ವೈರಸ್‌ನ್ನು ಹಾಡಿ ಹೊಗಳುವ, ಸ್ವಾರ್ವಜನಿಕವಾಗಿ ಒಪ್ಪಿಸುವ ಪ್ರಯತ್ನ ಖಂಡನಾರ್ಹ. ಇದರಲ್ಲಿ ಸಂಯುಕ್ತ ಕರ್ನಾಟಕ ದಂತಹ ಪತ್ರಿಕೆ ವಿಶೇಷ ಸಂಚಿಕೆ ಹೊರತಂದು ಭಟ್ಟಂಗಿತನ ತೋರಿತು. ಇನ್ನು ವಿಜಯ ಕರ್ನಾಟಕ ಮುಂತಾದ ಮಾಧ್ಯಮಗಳು ಶಕ್ತ್ಯಾನುಸಾರ ತುತ್ತೂರಿ ಊದಿದವು. ಅತಿರೇಕವೆಂದರೆ ಶಾಂತವೇರಿ ಗೋಪಾಲಗೌಡರಿಗೆ ಯಡಿಯೂರಪ್ಪನನ್ನು ಹೋಲಿಸಿ ಪಾದಸೇವೆ ಮಾಡಿದ್ದು ಸಂಯುಕ್ತ ಕರ್ನಾಟಕ - ಅಸಹ್ಯ ಹುಟ್ಟಿಸಿತು. ತಾನು ಜೀವನ ಪೂರ್ತಿ ಆರ್.ಎಸ್.ಎಸ್. ನಲ್ಲೇ ಇರುವೆನೆಂದು ಮರು ಅಫಿಡೇವಿಟ್ ನೀಡಿ, ಕಾಣಿಕೆಯನ್ನು ಅರ್ಪಿಸಿದ ಯಡಿಯೂರಪ್ಪ ಸಂಸದೀಯ ವ್ಯವಸ್ಥೆಯ ಎಲ್ಲಾ ಸೌಲಭ್ಯಗಳನ್ನು ತಿಂದುಂಡು ಪ್ರಜಾಸತ್ತೆ, ಜಾತ್ಯತೀತತೆಗೆ ಕೊಳ್ಳಿ ಇಡುವರು ಎಂಬ ಅಪಾಯವನ್ನು ಗ್ರಹಿಸುವುದು, ಎದುರಿಸುವುದು ಅತೀ ಅಗತ್ಯ.

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಕಾರ್ಮಿಕರ ಜೀವಕ್ಕೆ ಬೆಲೆಯಿಲ್ಲವೇ ?

ಬೆಂಗಳೂರಿನ ಅನೇಕ ಕೈಗಾರಿಕೆಗಳಲ್ಲಿ ಸಂಭವಿಸುವ ಅವಘಡಗಳಿಂದ ಅನೇಕ ಕಾರ್ಮಿಕರು ಸಾವನ್ನಪ್ಪುತ್ತಿದ್ದರೂ ಅದನ್ನು ತಡೆಯುವ ಕ್ರಮಗಳೇ ಇಲ್ಲವಾಗಿದೆ. ಕಾರ್ಮಿಕರ ಭದ್ರತೆ, ಕಾರ್ಖಾನೆಯ ಸುರಕ್ಷಿತೆಯನ್ನು ತಪಾಸಿಸಬೇಕಾದ ಸರ್ಕಾರದ ಅಧಿಕಾರಿಗಳು ಮಾಲೀಕರೊಂದಿಗೆ ಶಾಮೀಲಾಗುವುದರಿಂದ ನಿರ್ಲಕ್ಷಿಸಲಾಗುತ್ತಿದೆ. ಉದಾರೀಕರಣ ಭರಾಟೆಯಲ್ಲಿ ಕಾರ್ಮಿಕರ ಜೀವಗಳು ಉದಾರಗೊಂಡಿವೆ! ಇದಕ್ಕೆ ತಡೆಯಿಲ್ಲವೇ?

ಬೆಂಗಳೂರಿನ ಬಿಡದಿ ಸಮೀಪದ ಕುಂಬಳಗೋಡು ಪ್ರದೇಶದ ಕಾರ್ಖಾನೆ ಯೊಂದರಲ್ಲಿ ರಾತ್ರಿ ಮಲಗಿದ್ದ ನಾಲ್ವರು ಕಾರ್ಮಿಕರು ಬೆಳಗಾಗುವುದರೊಳಗೆ ಸತ್ತಹೋಗಿದ್ದಾರೆ. ಸಾವು ಹೇಗೆ ಸಂಭವಿಸಿತು ಎಂಬುದರ ಕಾರಣ ಇನ್ನೂ ಸಹ ಹೊರಬಂದಿಲ್ಲ. ಹೊರ ಬರುವುದು ಕಷ್ಟವೆಂಬಂತಹ ಸ್ಥಿತಿ ಇದೆ.

ಮೊದಲ ಮಾಹಿತಿಯಂತೆ ಬೆಂಗಳೂರು ಕೆಮಿಕಲ್ ಕಾರ್ಪೊರೇಷನ್ ಎಂಬ ಈ ಫ್ಯಾಕ್ಟರಿಯಲ್ಲಿ ಗ್ಯಾಸ್ ಸೋರಿಕೆಯಿಂದ ಈ ಸಾವು ಸಂಭವಿಸಿದೆ, ಕೆಲಸ ಮುಗಿಸಿ, ಭದ್ರತಾ ಕೋಣೆಯಲ್ಲಿ ಮಲಗಿದ ಈ ನಾಲ್ವರು ಕಾರ್ಮಿಕರು ಸೋರಿದ ಗ್ಯಾಸ್ ಸೇವನೆಯಿಂದ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಈ ಕಾರ್ಮಿಕರು ಸತ್ತು ವಾರವಾಗುತ್ತಿದ್ದರೂ ತನಿಖೆ ನಡೆದು ಕಾರಣವೇನು ಎಂಬುದು ಹೊರಬಾರದೆ ಇರುವುದಕ್ಕೆ ಮಾಲೀಕ ವರ್ಗ ಮತ್ತು ಸರ್ಕಾರದ ಅಧಿಕಾರಿಗಳ ನಡುವಿನ ಶಾಮೀಲುತನ ಮುಖ್ಯಕಾರಣ. ಕೈಗಾರಿಕೆಗಳಲ್ಲಿ ಕೆಲಸದ ಸ್ಥಿತಿ, ಭದ್ರತಾ ಕ್ರಮಗಳನ್ನು ಖುದ್ದಾಗಿ ಪರಿಶೀಲಿಸಿ, ಕ್ರಮ ವಹಿಸಬೇಕಾದ ಇಲಾಖೆಯ ಭ್ರಷ್ಟಾಚಾರ, ಮಾಲೀಕರೊಂದಿಗಿನ ಕೈಮಿಲಾಯಿಸಿ, ಕಾರ್ಮಿಕ ಜೀವಕ್ಕೆ ಆಪತ್ತು ತರುವುದು ಎದ್ದು ಕಾಣುವ ಅಂಶ.

ಇಂತಹ ಘಟನೆ ಇದೊಂದೇ ಅಲ್ಲ. ಈಚೆಗೆ 'ವೆಲ್ ಕಾಸ್ಟ್' ಎಂಬ ಕಾರ್ಖಾನೆಯಲ್ಲಿ 'ಫರ್‌ನೇಸ್' (ಕಬ್ಬಿಣದ ಕುಲುಮೆ) ಸಿಡಿತದಿಂದ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತರಾದರು. ಅಲ್ಲಿ ಸಿಐಟಿಯು ಸಂಘಟನೆ ಇದ್ದುದರಿಂದ ಮಾಲೀಕರ ವಿರುದ್ಧ ಹೋರಾಟ ನಡೆಸಲಾಯಿತು. ಸತ್ತ ಕಾರ್ಮಿಕರಿಗೆ ಪರಿಹಾರ ಸಿಗಲು ಹಾಗೂ ಮುಂದೆ ಅಂತಹ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಹಾಗೂ ಅಗತ್ಯ ಎಚ್ಚರಿಕೆ ವಹಿಸಲು ಸಾಧ್ಯವಾಯಿತು. ಕಾರ್ಮಿಕರಲ್ಲಿ ಜಾಗೃತಿ, ಸಂಘಟನೆ ಇಲ್ಲದ ಬಹುತೇಕ ಕಡೆ ಕಾರ್ಮಿಕರನ್ನು ಕೇಳುವವರಾರು?

ಹಾಗೆಯೇ ಬೆಂಗಳೂರಿನ ಯಾವುದೋ ಒಂದು ಮೂಲೆಯಲ್ಲಾದರೂ ದಿನಾಲೂ ಇಂತಹ ಅವಘಡ, ಅನಾಹುತ ನಡೆಯುತ್ತಲೇ ಇವೆ. ರಸ್ತೆ ನಿರ್ಮಾಣ, ಕಟ್ಟಡ ಕೆಲಸಗಳಂತಲ್ಲಿ ಈಚೆಗೆ ಮಣ್ಣು ಕುಸಿದು, ಕಟ್ಟಡ ಉರುಳಿ ಕಾರ್ಮಿಕರು ಸಾವನ್ನಪ್ಪಿದರು. ದೂರದ ಯಾವುದೋ ಊರಿನಿಂದ ತುತ್ತು ಗಂಜಿಗಾಗಿ ಬಂದ ವಲಸೆ ಕಾರ್ಮಿಕರೇ ಅಧಿಕವಿರುವ ಇವರ ಬದುಕಿನ ಲೆಕ್ಕ ಪತ್ರ-ದಾಖಲೆ ಇಟ್ಟವರಾರು?



ಕೆಲಸಗಾರರ ಭದ್ರತೆ, ಕೆಲಸ ಮಾಡುವ ಸ್ಥಳದಲ್ಲಿ ರಕ್ಷಣೆ, ಯಂತ್ರೋಪಕರಣಗಳ ಸುಸಜ್ಜಿತ ನಿಯಮಗಳ ಪಾಲನೆ ಗಳಂತಹ ಮುಖ್ಯ ವಿಷಯ ಗಳನ್ನು ಪರಿಶೀಲಿಸಬೇಕಾದ ಸರ್ಕಾರಿ ಅಧಿಕಾರಿಗಳು ಮಾಲೀಕರೊಂದಿಗೆ ಶಾಮೀಲಾಗಿ ನಿರ್ಲಕ್ಷ್ಯ ವಹಿಸುತ್ತಿರುವುದು ಇದಕ್ಕೆ ಕಾರಣ. ಸರ್ಕಾರದಿಂದ ಬಿಗಿಯಾದ ನಿರ್ವಹಣೆ ಯಿಲ್ಲ, ತಪ್ಪಿತಸ್ಥ ಮಾಲೀಕರಿಗೆ ನಿಷ್ಠುರ ಶಿಕ್ಷಿಸುವ ಕ್ರಮವಿಲ್ಲ. ಆರ್ಥಿಕ ಉದಾರೀಕರಣದಲ್ಲಿ ಕಾನೂನು- ಕಟ್ಟಳೆಗಳು ಉದಾರೀಕರಣಗೊಂಡು ಬಡ ಕಾರ್ಮಿಕರ ಜೀವವೂ ಬಲಿಹಾಕಲು ಉದಾರಗೊಂಡಿದೆ.

ಇಂತಹ ದುರ್ಘಟನೆಗಳ ಬಳಿಕವಾದರೂ ಸರ್ಕಾರ ಎಚ್ಚೆತ್ತುಕೊಂಡು ಕ್ರಮ ಜರುಗಿಸಲು ಮುಂದಾಗಬೇಕು. ಕಾರ್ಮಿಕರ ಸಚಿವನಿರುವುದು ಮಾಲೀಕರ ಸೇವೆಗೆ ಎಂಬಂತಹ ಸ್ಥಿತಿ ಕೊಂಚವಾದರೂ ಬದಲಾಗಬೇಕು. ಇದಕ್ಕಾಗಿ ಹೋರಾಡುವುದು ಅಗತ್ಯವಾಗಿದೆ.

ಕಂಗಾಲಾಗಿರುವ ರಿಕ್ಷಾ ಚಾಲಕರು : ಸಮಸ್ಯೆಗಳ ಈಡೇರಿಕೆಗೆ ಪ್ರತಿಭಟನೆ

ನಗರದಲ್ಲಿ ಈಗಾಗಲೇ 78 ಸಾವಿರ ಆಟೋರಿಕ್ಷಾಗಳಿದ್ದು ಸುಮಾರು 2 ಲಕ್ಷ ಜನ ಆಟೋರಿಕ್ಷಾ ಚಾಲಕರು ಸಾರ್ವಜನಿಕ ಸೇವೆಯಲ್ಲಿ ನಿರತರಾಗಿದ್ದಾರೆ. ಅಗತ್ಯಕ್ಕಿಂತ ಎರಡರಷ್ಟು ಆಟೋರಿಕ್ಷಾಗಳು ರಸ್ತೆಯಲ್ಲಿ ಓಡುತ್ತಿವೆ. ಈಗಿರುವ ಆಟೋರಿಕ್ಷಾಗಳಿಗೆ ಪ್ರಯಾಣಿಕರಿಲ್ಲದೆ, ಜೀವನ ನಡೆಸಲು ಕನಿಷ್ಠ ಸಂಪಾದನೆಯೂ ಇಲ್ಲದೆ ಚಾಲಕರು ಕಂಗಾಲಾಗಿದ್ದಾರೆ.

ಇದರ ಜೊತೆ ನಗರದ ಪರಿಮಿತಿಯಲ್ಲಿ ವಾಹನಗಳು ಚಲಿಸಲಾಗದಷ್ಟು ರಸ್ತೆಯಲ್ಲಿ ಸಾರಿಗೆ ಒತ್ತಡ ಹೆಚ್ಚಾಗಿರುತ್ತದೆ. ಇದರಿಂದಾಗಿ ಸಂಚಾರ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ನಗರಕ್ಕೆ ಈಗಿರುವ ಆಟೋರಿಕ್ಷಾಗಳೇ ಅತಿ ಹೆಚ್ಚಾಗಿದ್ದು ಇನ್ನು ಮುಂದೆ ಹೆಚ್ಚಿನ ಆಟೋರಿಕ್ಷಾಗಳ ಅವಶ್ಯಕತೆ ಇರುವುದಿಲ್ಲ. ಸಂಚಾರ ನಿಯಂತ್ರಣ ಸಾಧ್ಯವಾಗದೆ ಈಗಾಗಲೇ ಕೆಲವು ರಸ್ತೆಗಳಲ್ಲಿ ಆಟೋ ಸಂಚಾರ ನಿಷೇಧಿಸಲಾಗಿದೆ.

ಸಂದರ್ಭ ಜಟಿಲವಾಗಿದ್ದರೂ ಸಹ ಆಟೋರಿಕ್ಷಾ ಮಾರಾಟ ಮಾಡುವ ಕಂಪನಿಗಳು, ಮಧ್ಯವರ್ತಿಗಳು, ಮತ್ತು ಆದಾಯಕ್ಕಾಗಿ ಕೆಲಸ ಮಾಡುವ ಕಾಗದದ ಮೇಲಿರುವ ಸಂಘಗಳು ಅಧಿಕಾರಿಗಳೊಂದಿಗೆ ಲಾಭಿ ನಡೆಸುತ್ತಾ ಹೊಸದಾಗಿ ಆಟೋರಿಕ್ಷಾ ಪರ್ಮಿಟ್‌ಗೆ ಬೇಡಿಕೆಗಳನ್ನು ಸಲ್ಲಿಸುತ್ತಿವೆ. ಈ ಅನಧಿಕೃತ ವ್ಯಕ್ತಿಗಳು ಹೊಸ ಪರ್ಮಿಟ್‌ಗೆ ನೀಡುವ ಕಾರಣ ನಿರುದ್ಯೋಗ ಮತ್ತು ಬೆಂಗಳೂರು ನಗರದ ವಿಸ್ತರಣೆ ವಾಸ್ತವವಾಗಿ ಈ ಕಾರಣವನ್ನೇ ತಮ್ಮ ಲಾಭಕ್ಕಾಗಿ ಉಪಯೋಗಿಸಿ ಕೊಂಡು ಕಾನೂನು ಬಾಹೀರವಾಗಿ ಮತ್ತು ಅನಧಿಕೃತವಾಗಿ ಈ ಪರ್ಮಿಟ್‌ವುಳ್ಳ ಗಾಡಿಗಳನ್ನು ಅತಿ ಹೆಚ್ಚಿನ ಲಾಭಕ್ಕೆ ಕಾಳಸಂತೆಯಲ್ಲಿ ಮಾರಿ ಹಣ ಮಾಡುತ್ತಿದ್ದಾರೆ. ಇದರ ಅಡಿಯಲ್ಲಿ ಪದೇ ಪದೇ ಸಾಲ ತೀರಿಸಲಾಗದೆ ಮಾರಾಟ ಮಾಡುತ್ತಿರುವ ದಂಧೆಯಿಂದಾಗಿ ಕಾನೂನು ಬಾಹೀರ ಚಟುವಟಿಕೆಗಳು ಜಾಸ್ತಿಯಗಿ ಸಮಾಜಕ್ಕೆ ಒಂದು ಪಿಡುಗಾಗಿ ಪರಿಣಮಿಸಿದೆ. ಸರ್ಕಾರವು ಈ ಸಮಾಜ ಘಾತುಕ ವ್ಯಕ್ತಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸಿ ತೀವ್ರ ಕ್ರಮವನ್ನು ಕೈಗೊಂಡು ಆಟೋ ರಿಕ್ಷಾ ಪರ್ಮಿಟ್‌ಗಳ ವಾಹನ ಚಾಲಕರನ್ನು ಸಮಾಜದ ಭದ್ರತೆಗೆ ಒಳಪಡಿಸಬೇಕಾಗಿದೆ.

ಇಂತಹ ಕಷ್ಟದ ಜೀವನ ನಡೆಸುತ್ತಿರುವ ಚಾಲಕರ ಮೇಲೆ ಆಟೋರಿಕ್ಷಾಗಳಿಗೆ ಅಂಗೀಕತ ಎಲ್.ಪಿ.ಜಿ. ಕಿಟ್‌ಗಳನ್ನು ಸಧ್ಯಕ್ಕೆ 2002-03ರ ಮಾಡಲ್ ವಾಹನಗಳಿಗೆ ಕಿಟ್ ಅಳವಡಿಸಲು ಸರ್ಕಾರವು ಸೆಪ್ಟಂಬರ್ 18ನೇ ತಾರೀಖಿನವರೆಗೆ



ಕಾಲಾವಕಾಶ ನೀಡಿ ಸರ್ಕಾರವು ಆದೇಶ ನೀಡಿರುವುದು ಹೊರಲಾಗದ ಹೊರೆಯಾಗಿದೆ.

ವಾಯುಮಾಲಿನ್ಯ ನಿವಾರಣೆ ಮತ್ತು ಸುರಕ್ಷತೆಗಾಗಿ ಅಂಗೀಕೃತ ಎಲ್.ಪಿ.ಜಿ. ಕಿಟ್‌ಗಳನ್ನು ಅಳವಡಿಸಲು ಚಾಲಕರು ಸ್ವಾಗತಿಸಿದ್ದಾರೆ. ಆದರೆ, ಈ ಕಷ್ಟಕರ ಸನ್ನಿವೇಶದಲ್ಲಿ ಕಿಟ್‌ಗಳಿಗೆ ಅಗತ್ಯವಾದ ಹಣವನ್ನು ಹೊದಿಸಲಾಗದ ಪರಿಸ್ಥಿತಿ ಇದೆ. ಸುಮಾರು 60 ಸಾವಿರ ಆಟೋಗಳು ಕಿಟ್‌ಗಳನ್ನು ಅಳವಡಿಸಿಕೊಳ್ಳಬೇಕಾಗಿದ್ದು ಇದರಲ್ಲಿ ಶೇ.85ರಷ್ಟು ಆಟೋಗಳು ಸಾಲವನ್ನು ಹೊಂದಿರುತ್ತದೆ. ಅಂದರೆ ಆರ್.ಸಿ. ಬುಕ್‌ನಲ್ಲಿ ಹೆಚ್.ಪಿ. ನೋಂದಣಿಯಾಗಿ ರುತ್ತದೆ. ಈಗ ಈ ಆಟೋಗಳಿಗೆ ಯಾರೂ ಸಾಲ ಕೊಡುವುದಿಲ್ಲ. 2002-03ರ ಸಾಲಿನ ಆಟೋಗಳು ಸುಮಾರು ಆರು ಸಾವಿರ ಇರುತ್ತದೆ. ಈ ವಾಹನಗಳಿಗೆ ಕಾಲಾವಕಾಶ ಮುಗಿದಿರುತ್ತದೆ. ಸಾರಿಗೆ ಇಲಾಖೆಯ ಆದೇಶದಂತೆ, ಅಂಗೀಕೃತ ಎಲ್.ಪಿ.ಜಿ. ಕಿಟ್ ಅಳವಡಿಸದ ಈ ವಾಹನಗಳ ಪರ್ಮಿಟ್‌ಗಳನ್ನು ಅಸಿಂಧುಗೊಳಿಸಿರುವ ಮತ್ತು ಎಫ್.ಸಿ. ಮಾಡದೆ ಇರುವ ಎಚ್ಚರಿಕೆಯ ಪತ್ರಗಳನ್ನು ನೀಡಲಾಗಿದೆ. ನೀಡಿರುವ ಕಾಲಮಿತಿಯಲ್ಲಿ ಸಾಧ್ಯವಾಗದ ಕಾರ್ಯಕ್ಕೆ ಚಾಲಕರ ಬಲಿಪಶು ಮಾಡುವುದು ಸರ್ಕಾರದ ಇರಾದೆಯಾಗಬಾರದು. ಆದುದರಿಂದ ಎಲ್.ಪಿ.ಜಿ. ಕಿಟ್ ಅಳವಡಿಕೆಯ ಕೆಲಸವನ್ನು ಸುಗಮಗೊಳಿಸಲು ಮತ್ತು ಸಮಸ್ಯೆಗಳಿಗೆ ಸರ್ಕಾರವು ಸ್ಪಂದಿಸಿ ಚಾಲಕರ ಜೀವನಕ್ಕೆ ಎರವಾಗದಂತೆ ಪರಿಹಾರ ಸೂಚಿಸಬೇಕಿದೆ. ಈ ಬಗ್ಗೆ ವಿವರವಾದ ಚರ್ಚೆಗಾಗಿ ಸಂಘವು ಸಾರಿಗೆ ಸಚಿವ ಪಿಜಿಆರ್ ಸಿಂಧ್ಯಾರವರನ್ನು ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ (ಎಆರ್‌ಡಿಯು) ಆಗ್ರಹಿಸಿದೆ.

ಪ್ರಮುಖ ಬೇಡಿಕೆಗಳು

1. ಆಟೋರಿಕ್ಷಾಗಳಿಗೆ ಹೊಸ ಪರ್ಮಿಟ್‌ಗ
ಯಾವುದೇ ಕಾರಣಕ್ಕೂ ನೀಡಬಾರದು.
2. ಆಟೋರಿಕ್ಷಾ ಚಾಲಕರ ಜೀವನಕ್ಕೆ ಆಧಾರ
ಪರ್ಮಿಟ್‌ಗಳನ್ನು ಮಾರಬಾರದು ಅ
ವರ್ಗಾವಣೆ ಮಾಡದಂತೆ ಹಾಗೂ ಚಾಲ
ಪರ್ಮಿಟ್ ಅವಶ್ಯಕತೆ ಇಲ್ಲದಿದ್ದ ಸ
ಇಲಾಖೆಗೆ ಹಿಂದಿರುಗಿಸಬೇಕು ಎಂದು ಸರ್ಕಾ
ಆಜ್ಞೆ ಹೊರಡಿಸಬೇಕು.
3. ಅಂಗೀಕೃತ ಎಲ್.ಪಿ.ಜಿ. ಕಿಟ್‌ಗ
ಆಟೋರಿಕ್ಷಾಗಳಿಗೆ ಅಳವಡಿಸಲು
ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಅಗತ್ಯ
ಕಾಲಾವಕಾಶವನ್ನು ನೀಡಬೇಕು.
4. ವಾಯುಮಾಲಿನ್ಯ ನಿವಾರಣೆಗಾಗಿ ಎಲ್.ಪಿ
ಕಿಟ್ ಎಂಬ ವಿಶೇಷ ಯೋಜನೆಯಡಿ
ಅಂಗೀಕೃತ ಕಿಟ್‌ಗಳಿಗಾಗಿ ಸಾಲವನ್ನು
ಹಣಕಾಸು ಸಂಸ್ಥೆಗಳಿಂದ ಕನಿಷ್ಠ ದರದ ಬ
ಒದಗಿಸಬೇಕೆಂದು ಸರ್ಕಾರ ಆದ
ಹೊರಡಿಸಬೇಕು.
5. ಎಲ್.ಪಿ.ಜಿ. ಫಿಲ್ಲಿಂಗ್ ಸ್ಟೇಷನ್
ಅಗತ್ಯವಿರುವಷ್ಟು ನಗರದ ಪರಿಮಿತಿ
ಸ್ಥಾಪಿಸಬೇಕು.
6. ಬಜಾಜ್ ಕಂಪನಿಯ ಆಟೋರಿಕ್ಷಾಗ
ಕಂಪನಿಯ ಮಾರಾಟ ಬೆಲೆಗಿಂತ 8 ಸಾವಿರ
12 ಸಾವಿರದವರೆಗೆ ಹೆಚ್ಚಿನ ಬೆಲೆಗೆ ಮಾ
ಮಾಡಿ ಚಾಲಕರನ್ನು ಶೋಷಿಸುತ್ತಿರುವ ನ
ಆಟೋರಿಕ್ಷಾ ವಿತರಕ ಕಂಪನಿಗಳ ಅವ್ಯವಹಾ
ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕಾನೂನು
ಕೈಗೊಳ್ಳಬೇಕು.

❍ ಶ್ರೀನಿವಾಸ ಮು

ಕಂದಾಚಾರಗಳಿಲ್ಲದ ಮಾದರಿ ವಿವಾಹ

ನಾವಿಬ್ಬರು ಅಂದು ಹೊಳೆಯ
ದಡದಲಿ ಮಿಂದು
ಮರಳು ಮನೆಗಳ ಕಟ್ಟಿ ಆಟ ಆಡಿದ ದಿವಸ
ನೆನಪಿದೆಯೇ ಗೆಳತಿ....

ಎಂಬ ಹಾಡಿನೊಂದಿಗೆ ಅದ್ದೂರಿ, ಆಡಂಬರವಿಲ್ಲದೆ ಅತ್ಯಂತ ಸರಳವಾಗಿ ಆರಂಭಗೊಂಡ ಮದುವೆಯಲ್ಲಿ ಐಕ್ಯರಂಗ ಪತ್ರಿಕೆಯ ಕಾಂ.ಜಯರಾಂ ಮತ್ತು ವಾಣಿಶ್ರೀಯವರು ಪ್ರತಿಬಿಂಬವಾಗಿದ್ದರು.

ಕುಮಾರಸ್ವಾಮಿ ಲೇಔಟ್‌ನ ಸಣ್ಣ ಹಾಲ್‌ನಲ್ಲಿ ನಡೆದ ಈ ಸಡಗರದ ಮದುವೆಯ ಸಮಾರಂಭಕ್ಕೆ ನೂರಾರು ಜನ ಸಾಕ್ಷಿಯಾಗಿದ್ದರು. ಪುರೋಹಿತ, ಶಾಸ್ತ್ರ ಪುರಾಣ ಗಳಿಲ್ಲದೆ ಹೂಮಾಲೆ ಬದಲಾಯಿಸುವುದ ರೊಂದಿಗೆ ನವಜೀವನಕ್ಕೆ ಕಾಂ.ಜಯರಾಂ ಮತ್ತು ವಾಣಿಶ್ರೀ ಕಾಲಿಡುವಾಗ ನೆರೆದ ಜನ ಚಪ್ಪಾಳೆಯ ಮೂಲಕ ಶುಭ ಹಾರೈಸಿದರು.

ನವಜೋಡಿಗೆ ಶುಭಕೋರಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಜಿ.ಎನ್. ನಾಗರಾಜ್ ಮಾತನಾಡುತ್ತಾ 'ಕುವೆಂಪು ಅವರ ಪ್ರೇರಣೆಯಿಂದ ಅತ್ಯಂತ ಹೆಚ್ಚು ಸರಳ ವಿವಾಹ ನಡೆಯುವ ಮಂಡ್ಯ ಜಿಲ್ಲೆಯವರಾದ ಕಾಂ.ಜಯರಾಂ ಹಲವು ವರ್ಷಗಳಿಂದ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಒಬ್ಬ ಸಂಗಾತಿ. ದುಡಿಯುವ ಜನರ ಪತ್ರಿಕೆ ಐಕ್ಯರಂಗ ಪ್ರಸಾರ ನಿರ್ವಹಣೆ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಹೆಣ್ಣೆತ್ತವರ ಪ್ರಾಣ ಹಿಂಡಿ ಲಕ್ಷಗಟ್ಟಲೆ ಹಣ ಸುರಿದು ಅದ್ದೂರಿ ಮದುವೆಗಳು ನಡೆಯುವ ಈ ದಿನಗಳಲ್ಲಿ ಈ ಮದುವೆ ಒಂದು ಮಾದರಿಯಾಗಿದೆ' ಎಂದು ಪ್ರಶಂಸಿಸಿದರು.

'ಖಾಸಗಿ ವಿಷಯವಾಗಬೇಕಾದ ಮದುವೆ ಇಂದು ಸಾರ್ವಜನಿಕ ವಿಷಯವಾಗಿ ಬೆಳೆಯುತ್ತಿರುವುದು ಶೋಚನೀಯ. ಆದರೆ ಕಾಂ.ಜಯರಾಮು ಮತ್ತು ವಾಣಿಶ್ರೀ ಜೋಡಿ ಇದಕ್ಕೆ ಅಪವಾದವಾಗಿದ್ದಾರೆ' ಎಂದು ಸಿಪಿಐ(ಎಂ)ನ ಬಾಗೇಪಲ್ಲಿ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತಾ ಹೇಳಿದರು. ಈ ಜೋಡಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲೀ ಎಂದು ಆಶಿಸುತ್ತಾ ಶುಭ ಹಾರೈಸಿದರು.

25 ವರ್ಷಗಳ ಹಿಂದೆಯೇ ಇದೇ ತರಹದ ಮದುವೆಯಾಗಿ ಯಶಸ್ವಿ ಜೀವನ ನಡೆಸುತ್ತಿರುವ ಜೆ.ಎಂ.ಎಸ್.ನ ರಾಜ್ಯ ಕಾರ್ಯದರ್ಶಿ ಕಾಂ.ಕೆ.ಎಸ್.ವಿಮಲ ಮಾತನಾಡಿ ಲಕ್ಷಗಟ್ಟಲೆ ವರದಕ್ಷಿಣೆ ಸುರಿದು ಶಾಸ್ತ್ರೋಕ್ತವಾಗಿ ಮದುವೆಯಾದ ಎಷ್ಟೋ ಕುಟುಂಬಗಳು ಕಿತ್ತುಹೋಗಿರುವುದನ್ನು ಕಾಣುತ್ತೇವೆ. ಇದೇ ತರದ ಮದುವೆಯಾದ ಹತ್ತಾರು ಜೋಡಿಗಳು ಇಲ್ಲಿದ್ದು ಎಲ್ಲರೂ ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಹೇಳುತ್ತಾ ಈ ಜೋಡಿ ಕೂಡ ಅಂತಹ ಜೀವನ ನಡೆಸಲಿ ಎಂದು ಶುಭಹಾರೈಸಿದರು.

ಐಕ್ಯರಂಗ ಪತ್ರಿಕೆಯ ಸಂಪಾದಕ ಎಸ್.ವೈ ಗುರುಶಾಂತ್ ಮದುವೆ ಸಮಾರಂಭದ ಕಾರ್ಯಕ್ರಮ ನಿರ್ವಹಿಸಿದರು.

ಕಾಂ.ಲಿಂಗರಾಜು, ಕಾಂ.ಲಕ್ಷ್ಮಿ, ಶ್ರೀಮತಿ ರಾಜಲಕ್ಷ್ಮಿ ಹಾಗೂ ಪುಟಾಣಿಗಳಾದ ನಿತಿನ್‌ಮತ್ತು ಧನುಶ್ ಅವರು ಹಾಡಿದ ಹಾಡುಗಳು ಕಾರ್ಯಕ್ರಮಕ್ಕೆ ಮೆರುಗು ತಂದಿತು.

ವರದಿ : ಲಿಂಗರಾಜು



ಬೀದರ್ ಉಪಚುನಾವಣೆ : ಬಿಜೆಪಿ ಹಿಮ್ಮೆಟ್ಟಿಸಲು ಸಿಪಿಎಂ ನಿರ್ಧಾರ

ಜನತೆಯನ್ನು ಮತಧರ್ಮ
ಆಧಾರದಲ್ಲಿ ಒಡೆಯುವ ಕೋಮುವಾ
ಶಕ್ತಿಗಳನ್ನು ಹಿಮ್ಮೆಟ್ಟಿಸುವ ಉದ್ದೇಶದಿ
ಬೀದರ್ ಲೋಕಸಭಾ ಕ್ಷೇತ್ರದ
ನಡೆಯಲಿರುವ ಉಪಚುನಾವಣೆಯ
ಬಿಜೆಪಿ ಅಭ್ಯರ್ಥಿಯ ವಿರುದ್ಧ ಪ್ರಚಾ
ನಡೆಸಲು ಸಿಪಿಐ(ಎಂ) ನಿರ್ಧರಿಸಿದೆ. ಕ
ಲೋಕಸಭಾ ಚುನಾವಣೆಯಲ್ಲಿ ದೇಶದ ಜ
ಬಿಜೆಪಿಯನ್ನು ಮತ್ತು ಅದರ ಕೋಮುವಾ
ಅಜೆಂಡಾವನ್ನು ನಿರ್ಣಾಯಕವಾ
ತಿರಸ್ಕರಿಸಿದ್ದಾರೆ. ರಾಜ್ಯವಿಧಾನ ಸ
ಚುನಾವಣೆಯಲ್ಲಿಯೂ ರಾಜ್ಯದ ಜನ
ಬಿಜೆಪಿ ಕೈಗೆ ಅಧಿಕಾರ ನೀಡಲು ನಿರಾಕರಿಸಿ
ಈ ಜನಾದೇಶಕ್ಕೆ ತಕ್ಕಂತೆ ಪ್ರಸ
ಉಪಚುನಾವಣೆಯಲ್ಲಿಯೂ ಬಿಜೆಪಿಯ
ಸೋಲಿಸುವುದರಲ್ಲಿಯೇ ರಾಜ್ಯದ ಹಿ
ಅಡಗಿದೆ ಎಂದು ಭಾವಿಸಿರುವ ಸಿಪಿಐ(ಎ
ಬಿಜೆಪಿ ವಿರುದ್ಧ ಮತ ನೀಡುವಂತೆ ಬೀದ
ಲೋಕಸಭಾ ಕ್ಷೇತ್ರ ಮತದಾರರಲ್ಲಿ ಮನ
ಮಾಡಲು ಸ್ವತಂತ್ರವಾಗಿ ಪ್ರಚಾರ ನಡೆಸ
ನಿರ್ಧರಿಸಿದೆ.

ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಕ
ಕೆಲವು ಅವಧಿಗಳಲ್ಲಿ ಬಿಜೆಪಿ ಅಭ್ಯ
ಗೆಲ್ಲುತ್ತಾ ಬಂದಿರುವುದು ಮತ್ತು ಈ
ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿಯ
ಗೆದ್ದಿರುವುದನ್ನು ಗಮನಿಸಿದಾಗ ಕ್ಷೇತ್ರದ
ಕೋಮುವಾದಿ ಶಕ್ತಿಗಳು ಗಣನೀಯ ಪ್ರಭಾ
ಬೆಳೆಸಿಕೊಂಡಿರುವುದು ವ್ಯಕ್ತವಾಗುತ್ತ
ಆದ್ದರಿಂದ ಈ ಚುನಾವಣೆಯ
ಬಿಜೆಪಿಯನ್ನು ಸೋಲಿಸುವುದು ಅಗತ್ಯವಾ
ಎಂದು ಸಿಪಿಐ(ಎಂ) ಈ ತೀರ್ಮಾ
ಬಂದಿದೆ ಎಂದು ರಾಜ್ಯ ಕಾರ್ಯದ
ಜಿ.ಎನ್.ನಾಗರಾಜ್ ತಿಳಿಸಿದ್ದಾರೆ.

ಬಿಜೆಪಿಯೊಳಗಿನ ಕಚ್ಚಾಟ

ಬಿಜೆಪಿ ಪಕ್ಷದೊಳಗಿನ ಕಚ್ಚಾಟ ಅಸಹ್ಯ ಹುಟ್ಟಿಸುವ ಪ್ರಮಾಣಕ್ಕೇರಿದೆ. ನಾಯಕತ್ವ – ಸ್ಥಾನಗಳಿಗಾಗಿ ಪೈಪೋಟಿ ಆರಂಭಗೊಂಡಿದ್ದು ಬೀದಿ ರಂಪಾಟಕ್ಕಿಳಿಸಿದೆ. 'ದೇಶಭಕ್ತರ' ಈ ಕೂಟದೊಳಗಿನ ವಿದ್ಯಮಾನಗಳತ್ತ ಒಂದು ನೋಟ

2004 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋತಂದಿನಿಂದ ಬಿಜೆಪಿಗೆ ಒಂದೋ ಜನಾದೇಶದ ಪರಿಣಾಮಗಳೇನು ಎಂದು ಅರ್ಥವಾಗಿಲ್ಲ, ಅಥವಾ ಅದನ್ನು ಸ್ವೀಕರಿಸಲು ಅದು ಅಸಮರ್ಥವಾಗಿದೆ. ಸಹಜವಾಗಿಯೇ ಇದರಿಂದಾಗಿ ಪಕ್ಷದ ಆಂತರಿಕ ಕಚ್ಚಾಟ ಅಸಹ್ಯ ಪ್ರಮಾಣಕ್ಕೇರಿದೆ.

ಇತ್ತೀಚಿನ ವಾರಗಳಲ್ಲಿ ಅವರ ವರ್ತನೆಯನ್ನು ನೋಡಿದರೆ ಜನಗಳನ್ನು ತಟ್ಟುವ ಪ್ರಶ್ನೆಗಳು ಅದರ ಅಜೆಂಡಾದಲ್ಲಿಯೇ ಇದ್ದಂತಿಲ್ಲ. ಈಗ ಮತ್ತೆ ಹತಾಶೆಯಿಂದ 'ಹಿಂದುತ್ವ' ಕ್ಕೆ ಮರಳುತ್ತಾ ಅದು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳಲ್ಲಿ ಜನಗಳ ಬೆಂಬಲ ಗಿಟ್ಟಿಸಲು ಸಾರ್ವಕರ್ ಪ್ರಶ್ನೆ, ತಿರಂಗಾ ಯಾತ್ರೆ ಮತ್ತು ಸತಾರಾದಲ್ಲಿ ಅಫ್ಜಲ್ ಖಾನ್ ಸಮಾಧಿಯ ಧ್ವಂಸಕ್ಕಾಗಿ ಆಂದೋಲನದ ಹೆಸರಿನಲ್ಲಿ ಗಲಭೆಯೆಬ್ಬಿಸುವ ಪ್ರಯತ್ನ ನಡೆಸಿದೆ.

ಆದರೆ ಇವೆಲ್ಲಾ ಪ್ರಶ್ನೆಗಳಿಗೂ ಜನಗಳಿಂದ ಸ್ವಲ್ಪವಷ್ಟೇ ಸ್ಪಂದನ ದೊರೆತಿದ್ದು, ಇದು ಬಿಜೆಪಿಯೊಳಗೆ ಗುಂಪು ಕಚ್ಚಾಟ ಮತ್ತು ವ್ಯಕ್ತಿಗಳ ತಾಕಲಾಟಗಳನ್ನು ಹೆಚ್ಚಿಸಿದೆ. **ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಒಟ್ಟಾಗಿ ಬೆಸೆದದ್ದು ಅಧಿಕಾರದ ವ್ಯಾಮೋಹ ಎಂದು ನಾವು ಹಲವು ಬಾರಿ ಹೇಳಿದ್ದೇವೆ.** ಸೈದ್ಧಾಂತಿಕವಾಗಿ ಅಥವಾ ನೀತಿಗಳ ವಿಷಯದಲ್ಲಿ ಎನ್‌ಡಿಎ ಪಾಲುದಾರರಿಗೂ ಬಿಜೆಪಿಗೂ ಏನೂ ಸಾಮ್ಯವಿರಲಿಲ್ಲ.

ಬಿಜೆಪಿಯೊಳಗೂ ಇದು ನಿಜವಿದ್ದಂತೆ ಕಾಣುತ್ತದೆ. **ಅಧಿಕಾರದಿಂದ ಹೊರಗೆ ಹೋದ ಕೂಡಲೇ ಅದುವರೆಗೆ ಅಧಿಕಾರದ ಪ್ರಯೋಜನಗಳಲ್ಲಿ ಪಾಲು ಪಡೆಯುವ ಮೂಲಕ ಪುಟಿದುಬಂದ ಎರಡನೇ ಹಂತದ ಮುಖಂಡರು ತಮ್ಮದೇ ಕೈ ಮೇಲಾಗುವಂತೆ ಪರಸ್ಪರ ಸ್ಪರ್ಧೆಗಿಳಿದಿದ್ದಾರೆ.** ಉಮಾ ಭಾರತಿ ತನ್ನ 'ತಿರಂಗಾ ಯಾತ್ರೆ' ಗೆ ಬಿಜೆಪಿ ಹೈಕಮಾಂಡಿನಿಂದ ಬೆಂಬಲ ಸಿಗಲಿಲ್ಲವೆಂದು ಎಷ್ಟು ರೇಗಿದ್ದಾರೆಂದರೆ ತಾನು ರಾಜಕೀಯ ಸನ್ಯಾಸ ತಗೊಳ್ಳುವುದಾಗಿ ಸಾರಿದರು. **ಒಬ್ಬ ಸನ್ಯಾಸಿನಿಯೇ ತಾನು ಸನ್ಯಾಸ ತೆಗೆದುಕೊಳ್ಳುವುದಾಗಿ ಸಾರಿದ್ದು ಬಹುಶಃ ಇದೇ ಮೊದಲ ಬಾರಿಯಿರಬಹುದು!**

ಈ ಹಿಂದೆ ಸೋನಿಯಾ ಗಾಂಧಿ ಪ್ರಧಾನ ಮಂತ್ರಿಯಾದರೆ ತನ್ನ **ಕೇಶಮುಂಡನ ಮಾಡಿಕೊಳ್ಳುತ್ತೇನೆಂದು ಬೆದರಿಸಿದ್ದ ಸುಷ್ಮಾ ಸ್ವರಾಜ್ ಉಮಾ ಭಾರತಿ ಹೆಸರು ರಾರಾಜಿಸುತ್ತದೆಂಬ ಭಯದಿಂದ ಅಂಡಮಾನ್‌ನ ಸೆಲ್ಯುಲರ್ ಜೈಲಿನಲ್ಲಿ ಧರಣಿ ಕಾರ್ಯಕ್ರಮ ಆರಂಭಿಸಿದರು** - ಸಾರ್ವಕರ್‌ಗೆ ಇತಿಹಾಸದಲ್ಲಿ ಅವರ ಯೋಗ್ಯ ಸ್ಥಾನ ದೊರಕಿಸಿಕೊಡಲು ; 125 ಬಿಜೆಪಿ ಸಂಸತ್ ಸದಸ್ಯರು ಮತ್ತು ವಿವಿಧ ರಾಜ್ಯಗಳಿಂದ ಹಲವಾರು ಶಾಸಕರು, ಮಂತ್ರಿಗಳು ಆಕೆಯ ಜತೆಗಿದ್ದರು. ಇವೆಲ್ಲಾ ಉಮಾ ಭಾರತಿ 'ತಿರಂಗಾ ಯಾತ್ರಾ' ದ ನಡುವೆಯೇ ನಡೆಯಿತು. ಸಹಜವಾಗಿ ಈ ಮೇಲಾಟ ಬಿಜೆಪಿ ಮುಖಂಡತ್ವವನ್ನು ತಬ್ಬಿಬ್ಬಾಗಿಸಿತು. ವಿವಿಧ ಮುಖಂಡರು ಈ ಇಬ್ಬರಲ್ಲಿ ಒಬ್ಬರ ಪರವಹಿಸಿ ಪರಸ್ಪರ ಎದುರುಬದುರು ನಿಂತರು.



ಇವೆಲ್ಲವುಗಳ ನಡುವೆ, ಇದುವರೆಗೆ **'ವಿಕಾಸ ಪುರುಷ' ಮತ್ತು 'ಲೋಹಪುರುಷ'ರ ನಡುವೆ ಅಪ್ಪಚ್ಚಿಯಾಗಿದ್ದ ವೆಂಕಯ್ಯನಾಯ್ಡು ಏದುಸಿರು ಬಿಡುವಂತೆ ಕಾಣುತ್ತಿದೆ.**

ಈ ಕಾದಾಟ ಯಾವ ಸ್ವರೂಪ ತಾಳಬಹುದು ಎಂದು ಸಮಯವೇ ಹೇಳಬೇಕು. ಆದರೆ ದೇಶವಂತೂ ನಿಟ್ಟುಸಿರು ಬಿಡುತ್ತಿದೆ - ಇಂತಹ ವ್ಯಕ್ತಿಗಳ ಗುಂಪಿನಿಂದ ಆಳಿಸಿಕೊಳ್ಳುವ ಸಂಕಟ ತಪ್ಪಿತಲ್ಲಾ ಎಂದು. ಬಿಜೆಪಿ ನೇತೃತ್ವದ ಎನಡಿಎ ಆಳ್ವಿಕೆಯಲ್ಲಿ ಕೋಮುವಾದದ ಸಾಂಸ್ಥಿಕ ರೂಪ ಪಡೆದು ಅದಕ್ಕೆ ದೇಶ ಭಾರಿ ಬೆಲೆ ತೆತ್ತಿದೆ. ಅವರ ಆರ್ಥಿಕ ನೀತಿಗಳಿಂದ ಜನರ ಪರಿಸ್ಥಿತಿ ದಿನೇದಿನೇ ಹದಗೆಟ್ಟಿತು. ರಾಜಕೀಯ ನೈತಿಕತೆ ಪಾತಾಳಕ್ಕಿಳಿಯಿತು.

ಇತ್ತ ಬಿಜೆಪಿ ತನ್ನ ಆಂತರಿಕ ಕಿತ್ತಾಟ, ರಂಪಾಟಗಳನ್ನು ಮುಂದುವರೆಸುತ್ತಲೇ ಇರಲಿ, ಆದರೆ ಬಿಜೆಪಿ ಆಳ್ವಿಕೆಯಲ್ಲಿ ನುಸುಳಿ ಬಂದ ವಿಕೃತಿಗಳನ್ನು ಸರಿಪಡಿಸಬೇಕಾದ, ಜನಗಳು ಮತ್ತು ದೇಶ ಎದುರಿಸುತ್ತಿರುವ ತುರ್ತು ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕಾದ ಸಮಯ ಈಗ ಬಂದಿದೆ. ಪ್ರಸಕ್ತ ಯುಪಿಎ ಸರ್ಕಾರ ಈ ಅಜೆಂಡಾವನ್ನು ಅವಿಶ್ರಾಂತವಾಗಿ ಅನುಸರಿಸಬೇಕಾಗಿದೆ.

ಮಹಾರಾಷ್ಟ್ರ ಚುನಾವಣೆ : ಬಿಜೆಪಿ-ಶಿವಸೇನೆ ಸೋಲಿಸುವತ್ತ....


ಮಹಾರಾಷ್ಟ್ರದ ವಿಧಾನಸಭೆಗೆ ಚುನಾವಣೆಗಳು ನಡೆಯಲಿದ್ದು, ವಿವಿಧ ರಾಜಕೀಯ ಪಕ್ಷಗಳು ಅಬ್ಬರದ ಪ್ರಚಾರವನ್ನು ಈಗಾಗಲೇ ಆರಂಭಿಸಿವೆ.

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ತೆಗೆದುಕೊಂಡ ನಿಲುವುಗಳು ರಾಜಕೀಯವಾಗಿ ಸರಿಯಾಗಿಯೇ ಇದ್ದವು ಎಂಬುದನ್ನು ಚುನಾವಣಾ ಫಲಿತಾಂಶಗಳು ನಿಚ್ಚಳವಾಗಿ ತೋರಿಸಿಕೊಟ್ಟಿವೆ. ಅದರಂತೆಯೇ ಮಹಾರಾಷ್ಟ್ರದಲ್ಲೂ ಸಹ, ಶಿವಸೇನಾ-ಭಾಜಪವನ್ನು ಸೋಲಿಸುವುದು, ಜಾತ್ಯಾತೀತ ರಾಜ್ಯ ಸರ್ಕಾರವೊಂದನ್ನು ಪ್ರತಿಷ್ಠಾಪಿಸುವುದು ಹಾಗೂ ನೂತನ ವಿಧಾನಸಭೆಯಲ್ಲಿ ಎಡಪಕ್ಷಗಳ ಸದಸ್ಯರ ಸಂಖ್ಯೆಯನ್ನು ವೃದ್ಧಿಸುವುದು ಈ ಮೂರು ರಾಜಕೀಯ ಗುರಿಗಳನ್ನಿಟ್ಟುಕೊಂಡು ಸಿಪಿಐ(ಎಂ) ಮತ್ತು ಸಿಪಿಐ ಚುನಾವಣಾ ಸಮರಕ್ಕೆ ಧುಮುಕಿವೆ.

ಕೋಮುವಾದದ- ವಿರುದ್ಧದ ಮತಗಳು ಹಂಚಿ ಹರಿದು ಹೋಗುವುದನ್ನು ತಡೆಹಿಡಿವ ಸಲುವಾಗಿ, ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷಗಳ ಜತೆ ಮಾತುಕತೆ ನಡೆಸಲಾಯಿತಾದರೂ, ಒಂದು ತಿಂಗಳ ಮಾತುಕತೆಗಳು ಫಲಪ್ರದವಾಗಲಿಲ್ಲ. ಸಿ.ಪಿ.ಐ(ಎಂ)ಗೆ ಅವರು ಬಿಟ್ಟುಕೊಟ್ಟಿರುವ ಮೂರು ಸ್ಥಾನಗಳಲ್ಲಿ, ಎರಡರಲ್ಲಿ ಅಂದರೆ ಥಾಣೆ ಜಿಲ್ಲೆಯ ಜವಹರ್ ಮತ್ತು ನಾಸಿಕ್ ಜಿಲ್ಲೆಯ ಸುರ್ಗಣಾ ಕ್ಷೇತ್ರಗಳಲ್ಲಿ ಕಳೆದ 25 ವರ್ಷಗಳಿಂದ ಸಿಪಿಐ(ಎಂ) ಸತತವಾಗಿ ಗೆದ್ದುಬರುತ್ತಿದೆ. ಮೂರನೆಯ ಕ್ಷೇತ್ರವಾದ ಸೋಲಾಪುರ ದಕ್ಷಿಣದಲ್ಲಿ ಸಿಪಿಐ(ಎಂ) 1995 ರಲ್ಲಿ ಜಯಶಾಲಿಯಾಗಿತ್ತು. 1999 ರಲ್ಲಿ ಕಾಂಗ್ರೆಸ್ ಮತ್ತು ಎನ್.ಸಿ.ಸಿ ಗಳಿಗಿಂತಲೂ ಅಧಿಕ ಮತಗಳನ್ನು ಪಕ್ಷಗಳಿಸಿತ್ತು. ಸಿಪಿಐಗೆ ಒಂದು ಸ್ಥಾನ ಅಮರಾವತಿ ಜಿಲ್ಲೆಯಲ್ಲಿ ನೀಡಲಾಗಿದೆ. ಈ ತೀರ್ಮಾನಗಳನ್ನು ಸಹ ಕಡೆಯಗಳಿಗೆಯಲ್ಲಿ ಪ್ರಕಟಿಸುವ ಮೂಲಕ ಕಾಂಗ್ರೆಸ್ ಮತ್ತು ಎನ್.ಸಿ.ಸಿ ಪಕ್ಷಗಳು ಜಾತ್ಯಾತೀತ ಶಕ್ತಿಗಳ ಕ್ರೋಢೀಕರಣಕ್ಕೆ ತಾವು ಅಷ್ಟೊಂದು ಉತ್ಸುಕರಾಗಿಲ್ಲ ಎಂದು ತೋರಿಸಿಕೊಟ್ಟಿವೆ.

ಈ ಹಿನ್ನೆಲೆಯಲ್ಲಿ, ಈ ಎರಡು ಎಡಪಕ್ಷಗಳು ತಮಗೆ ಜನಬೆಂಬಲ ಇರುವ ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ನಿರ್ಧಾರ ತೆಗೆದುಕೊಂಡಿದ್ದು, ಅದರಂತೆಯೇ ಸಿಪಿಐ(ಎಂ) 16 ಕ್ಷೇತ್ರಗಳಲ್ಲಿ, ಸಿಪಿಐ 15 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ. ಅಲ್ಲದೆ ಥಾಣೆ ಜಿಲ್ಲೆಯಲ್ಲಿ ಎರಡು ಸ್ಥಾನಗಳನ್ನು (ವಾಡಾ ಮತ್ತು ಶಹಾಪುರ) 'ಕುನಾದಿ ಸೇನಾ' ಗೆ ಬಿಟ್ಟುಕೊಡಲಾಗಿದೆ. ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ರೈತ ಹೋರಾಟಗಳಲ್ಲಿ ಈ ಪಕ್ಷ ಭಾಗವಹಿಸಿತು.

ಉಳಿದಂತೆ ಸುಮಾರು 250 ಕ್ಷೇತ್ರಗಳಲ್ಲಿ, ಎಡಪಕ್ಷಗಳು ಶಿವಸೇನಾ-ಬಾಜಪ ಕೋಮುವಾದಿ ಕೂಟವನ್ನು ಸೋಲಿಸಲು ಸಮರ್ಥರಾಗಿರುವ ಸ್ಪರ್ಧಿಗಳನ್ನು ಬೆಂಬಲಿಸುತ್ತಿವೆ.



ಸೈದ್ಧಾಂತಿಕ ಪ್ರಚಾರ ದ ಮೂಲಕ ಕಾಂ. ಎಕೆಜಿ ಮತ್ತು ಕಾಂ. ಬಿಟಿಆರ್ ಜನ್ಮ ಶತಮಾನೋತ್ಸವ ಆಚರಣೆಗೆ ಕರೆ

ಅಕ್ಟೋಬರ್ 1, 2004 ಕ್ಕೆ ಧೀಮಂತ ನಾಯಕ ಕಾಮ್ರೇಡ್ ಎ.ಕೆ.ಗೋಪಾಲನ್‌ರವರು ಜನಿಸಿ ನೂರು ವರುಷಗಳಾಗುತ್ತಿವೆ. ಹಾಗೆಯೇ ಡಿಸೆಂಬರ್ 19, 2004 ಕ್ಕೆ ಇನ್ನೊಬ್ಬ ಅಪ್ರತಿಮ ಕ್ರಾಂತಿಕಾರಿ ಕಾಮ್ರೇಡ್ ಬಿ.ಟಿ.ರಣದಿವೆಯವರ ಜನ್ಮಶತಮಾನೋತ್ಸವದ ಸಮಾರೋಪವೂ ಆಗಲಿದೆ. ಭಾರತದ ಕಮ್ಯುನಿಸ್ಟ್ ಆಂದೋಲನಕ್ಕೆ ಈ ಇಬ್ಬರು ಮಹಾನ್ ನಾಯಕರು ವಿಪುಲವಾಗಿ ಕೊಡುಗೆ ನೀಡಿದವರು. ಈ ಜನ್ಮ ಶತಮಾನೋತ್ಸವವನ್ನು ಅರ್ಥಪೂರ್ಣವಾದ ರೀತಿಯಲ್ಲಿ ಆಚರಿಸಬೇಕಿದೆ. ಈ ಸಂದರ್ಭವನ್ನು ಸೈದ್ಧಾಂತಿಕ ಪ್ರಕ್ಷೋಭೆ ನಡೆಸುವುದರ ಮೂಲಕ ಆಚರಿಸಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

1. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧದ ಸಂಗ್ರಾಮದಲ್ಲಿ ಕಮ್ಯುನಿಸ್ಟರ ಪಾತ್ರ ಮತ್ತು ಪ್ರಸಕ್ತವಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪ್ರಸ್ತುತತೆ
2. ಭಾರತೀಯ ಸಮಾಜ ಎದುರಿಸುತ್ತಿರುವ ಸಮಸ್ಯೆಗಳ ವಿಶ್ಲೇಷಣೆಗೆ ಹಾಗೂ ವರ್ಗ ಮತ್ತು ಸಾಮಾಜಿಕ ಶೋಷಣೆಯನ್ನು ಕೊನೆಗಾಣಿಸಲು ಮಾರ್ಕ್ಸ್‌ವಾದದ ವೈಜ್ಞಾನಿಕ ವಿಧಾನ ಹೇಗೆ ಪರಿಹಾರದ ಹಾದಿ ತೋರಿಸುವುದು
3. ಸಮಕಾಲೀನ ಜಗತ್ತಿನಲ್ಲಿ ಸಮಾಜವಾದದ ಪ್ರಸ್ತುತತೆಯೊಂದೇ ಆಧುನಿಕ ಬಂಡವಾಳಶಾಹಿಯು ಶೋಷಣೆ ಮತ್ತು ವಿಧ್ವಂಸಕತನವನ್ನು ಕೊನೆಗಾಣಿಸಲು ಇರುವ ಏಕೈಕ ಪರ್ಯಾಯ

ಈ ಪ್ರಧಾನ ವಿಷಯಗಳ ಆಧಾರದಲ್ಲಿ, **ಅಕ್ಟೋಬರ್ 1 ರಿಂದ ಡಿಸೆಂಬರ್ 19 ರವರೆಗೆ** ಒಂದು ವಾರ ಸೈದ್ಧಾಂತಿಕ ಪ್ರಚಾರ ನಡೆಸಲು ಕರೆ ನೀಡಲಾಗಿದೆ.

ವಿಶ್ವಬ್ಯಾಂಕ್ ಅಣತಿಗೆ ತಕ್ಕಂತೆ ಹೆಜ್ಜೆ ಹಾಕಿದ ಕೃಷ್ಣ ಸರ್ಕಾರವನ್ನು - ಅದರ ನೀತಿಗಳನ್ನು ರಾಜ್ಯದ ಜನತೆ ನಿರ್ಣಾಯಕವಾಗಿ ತಿರಸ್ಕರಿಸಿದರೆ, ಬದಲಿ ಧೋರಣೆಗಾಗಿ ಜನಾದೇಶವನ್ನು ಪಡೆದಿರುವ ಧರಂಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರವು ಕೃಷಿರಂಗದ ಬಿಕ್ಕಟ್ಟಿಗೆ ತಕ್ಷಣ ನೈಜ ಪರಿಹಾರಗಳನ್ನು ಒದಗಿಸಬೇಕಾಗಿದೆ. ಪರ್ಯಾಯ ಕೃಷಿ ನೀತಿಗೆ ಒತ್ತಾಯಿಸಿ ಇದೇ ಅಕ್ಟೋಬರ್ 8 ರಂದು ರಾಜಧಾನಿಗೆ ಲಗ್ಗೆ ಹಾಕಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಭೂಮಿ, ಗ್ರಾಮೀಣ, ಸಾಲ, ವಿದ್ಯುತ್, ಪಡಿತರ ವ್ಯವಸ್ಥೆ, ಕೃಷಿ ಕೂಲಿಕಾರರಿಗೆ ಕೆಲಸ ಹಾಗೂ ಕನಿಷ್ಟ ಕೂಲಿ ಮೊದಲಾದ ಆದ್ಯತೆಯ ಪ್ರಶ್ನೆಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ

'ತಾಯಿ' ಎಂದು ಗೌರವಿಸುವ ಸಂಸ್ಕೃತಿ ನಮ್ಮದಾಗಿದೆ. ಆದರೆ ಭೂಮಿ ಕೆಲವೇ ಕೆಲವು ಜಮೀನ್ದಾರರ ವಶದಲ್ಲಿರುವುದು ಪ್ರಗತಿಗೆ ಮಾರಕವಾಗಿದೆ. ಭೂ ಹಿಡುವಳಿಗೆ ಮಿತಿ ಹಾಕಿ ಹೆಚ್ಚುವರಿ ಭೂಮಿಯನ್ನು ಭೂಹೀನ ಕುಟುಂಬಗಳಿಗೆ ವಿತರಣೆ ಮಾಡುವುದಕ್ಕೆ ಭೂ

ಬಂದ ಭೂಸುಧಾರಣಾ ಕಾಯ್ದೆ ಮತ್ತು ಅ... ಅನುಷ್ಠಾನ ಇದಕ್ಕಿಂತ ಭಿನ್ನವಾಗಿರಲಿಲ್ಲ. ಪಶ್ಚಿ... ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗ... ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗ... ಮಾತ್ರ ಅತ್ಯಂತ ಪ್ರಗತಿಪರವಾದ ಭೂಸುಧಾರ... ಕಾನೂನುಗಳನ್ನು ರೂಪಿಸಿ ಅವುಗಳನ್ನು ಅತ್ಯಂ...

ಪರ್ಯಾಯ ಕೃಷಿ ನೀತಿಗಳ...

ರಾಜಧಾನಿಗೆ ರೈತ - ಕೂಲಿ...


ದೇಶದ ಸ್ವಾತಂತ್ರ್ಯವನ್ನು ಗಳಿಸಿದ ನಂತರ ಕೇಂದ್ರದಲ್ಲಿ ಮತ್ತು ಬಹುತೇಕ ರಾಜ್ಯಗಳಲ್ಲಿ ಅಧಿಕಾರವಹಿಸಿಕೊಂಡ ಕಾಂಗ್ರೆಸ್ ಸರ್ಕಾರಗಳು ದೇಶವನ್ನು ಬಂಡವಾಳಶಾಹಿ ದಾರಿಯಲ್ಲಿ ನಡೆಸುತ್ತಾ ಬಂದುದರಿಂದ ಕೃಷಿ ಕ್ಷೇತ್ರವು ನಿರ್ಲಕ್ಷಿಸಲ್ಪಟ್ಟಿತು. ಕಾಂಗ್ರೆಸ್ ಸರ್ಕಾರಗಳ ಕೃಷಿ ನೀತಿಗಳು ಕೃಷಿಯಲ್ಲಿ ಬಂಡವಾಳದ ಬೆಳವಣಿಗೆಯನ್ನು ಸಾಧಿಸುವ ಗುರಿಯನ್ನು ಹೊಂದಿದ್ದವು. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಅರೆಪಾಳೆಗಾರಿ ಭೂಮಾಲಕರು ಬಂಡವಾಳಶಾಹಿ ಭೂಮಾಲಕರಾಗಿ ಬೆಳೆದುಬರುವಂತಾಯಿತು. ಆದರೆ ಬಡರೈತರು, ಮಧ್ಯಮ ರೈತರನ್ನು ಒಳಗೊಂಡ ಬಹುದೊಡ್ಡ ರೈತಾಪಿ ವಿಭಾಗವು ತಮ್ಮ ಫಸಲಿಗೆ ನ್ಯಾಯವಾದ ಬೆಲೆಯನ್ನು ಪಡೆಯಲಾಗದೆ ತೀವ್ರ ಹಾನಿಯನ್ನು ಅನುಭವಿಸತೊಡಗಿದರು. ಕೃಷಿ, ಇವರ ಪಾಲಿಗೆ ಒಂದು ಲಾಭದಾಯಕ ಉದ್ಯೋಗವಾಗಿ ಉಳಿಯಲಿಲ್ಲ. ಸ್ವಾತಂತ್ರ್ಯನಂತರದ 50 ವರ್ಷಗಳಲ್ಲಿ ದೇಶದ ಗುತ್ತೇದಾರಿ ಬಂಡವಾಳಶಾಹಿಗಳ ಆಸ್ತಿ 50 ಪಟ್ಟು ಹೆಚ್ಚಾಯಿತು. ಆದರೆ ದೇಶಕ್ಕೆ ಅನ್ನವನ್ನು ಬೆಳೆದುಕೊಡುವ ರೈತರು ತಮ್ಮ ಭೂಮಿಯನ್ನು ಕಳೆದುಕೊಂಡು ದಿವಾಳಿಯಾಗತೊಡಗಿದರು.

ತದನಂತರ ಆರಂಭವಾಯ್ತು 'ಸುಧಾರಣೆಗಳ' ಪರ್ವ. ಇದುವರೆಗಿನ ಧೋರಣೆಗಳು ಸಾಕಷ್ಟು ಇತಿಮಿತಿಗಳಿಂದ ಕೂಡಿದ್ದರೂ ಅವುಗಳ ಕೆಲವು ಸಕಾರಾತ್ಮಕ ವೈಶಿಷ್ಟ್ಯಗಳನ್ನು ಕಡೆಗಣಿಸಲಾಗದು. ಇದುವರೆಗೆ ಸರ್ಕಾರ ನೀರಾವರಿ, ವಿದ್ಯುತ್, ಸಂಶೋಧನೆ, ಸಾರಿಗೆ, ಸಂಪರ್ಕ, ವಿಜ್ಞಾನ ಮತ್ತು ತಂತ್ರಜ್ಞಾನದ ಮೊದಲಾದ ಕ್ಷೇತ್ರಗಳಲ್ಲಿ ಸಾಕಷ್ಟು ಹಣ ಹೂಡಿಕೆ ಮಾಡುತ್ತಿತ್ತು. ಅದರಿಂದಾಗಿ ಕೃಷಿ ಕ್ಷೇತ್ರದಲ್ಲಿ ಉತ್ಪಾದಕತೆ ಮತ್ತು ಉತ್ಪಾದನೆ ಗಣನೀಯವಾಗಿ ಹೆಚ್ಚಾಯಿತು. ಆದರೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನೀತಿಗಳ ಅನುಷ್ಠಾನ ಆರಂಭವಾದಂತೆ ಸರ್ಕಾರ ಆರ್ಥಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡುವುದನ್ನು ಕಡಿಮೆ ಮಾಡುತ್ತಾ ಮಾರುಕಟ್ಟೆಯ ಶಕ್ತಿಗಳಿಗೆ ಶರಣಾಯಿತು.

ಉದಾರೀಕರಣದ ನೀತಿಗಳ ಪರಿಣಾಮವಾಗಿ ಕೃಷಿ ಕ್ಷೇತ್ರಕ್ಕೆ ಇದುವರೆಗೆ ನೀಡಲಾಗುತ್ತಿದ್ದ ಅಲ್ಪಸ್ವಲ್ಪ ಪ್ರೋತ್ಸಾಹವೂ ನಿಂತುಹೋಯಿತು. ಕೃಷಿ ಸಾಲ ಕ್ಷೀಣಿಸಿತು. ಸಬ್ಸಿಡಿಗಳು ಮಾಯವಾದವು. ಆಮದುಗಳ ಮೇಲಿನ ಪ್ರಮಾಣಾತ್ಮಕ ನಿರ್ಬಂಧಗಳನ್ನು ಹಿಂತೆಗೆದುಕೊಂಡ ಪರಿಣಾಮವಾಗಿ ಅಗ್ಗದ ವಿದೇಶಿ ಕೃಷಿ ಉತ್ಪನ್ನಗಳು ದೇಶದ ಮಾರುಕಟ್ಟೆಗೆ ಪ್ರವಾಹದಂತೆ ಹರಿದುಬರಲಾರಂಭಿಸಿದವು. ಬೆಲೆ ಹಾನಿ, ಬೆಲೆ ಕುಸಿತ ಸಾಲದ ಬಾಧೆ ತಾಳಲಾರದೆ ರೈತರು ಸಾಲುಸಾಲಾಗಿ ಆತ್ಮಹತ್ಯೆ ಮಾಡಿಕೊಳ್ಳಲಾರಂಭಿಸಿದರು. ರೈತರನ್ನೇ ಅವಲಂಬಿಸಿದ ಕೃಷಿ ಕೂಲಿಕಾರರು ಉದ್ಯೋಗ ಹುಡುಕಿಕೊಂಡು ಊರೂರು ಅಲೆಯತೊಡಗಿದರು. ಹಸಿವೆಯೊಂದಿಗೆ ಸೆಣಸಾಡಲಾಗದೆ ಅದೆಷ್ಟೋ ಜನ ಅಸುನೀಗಿದರು. ನಿರುದ್ಯೋಗಕ್ಕೆ ಬಲಿಯಾಗಿ ದಿಕ್ಕೆಟ್ಟ ಯುವಕರು ಹೊಟ್ಟೆಪಾಡಿಗಾಗಿ ಎಂತಹ ಹೀನ ಕೃತ್ಯಕ್ಕೂ ಹಿಂಜರಿಯದಾದರು.

ಇಷ್ಟೊಂದು ಅನಾಹುತಕ್ಕೆ ಕಾರಣವಾದ ಉದಾರೀಕರಣದ ನೀತಿಗಳನ್ನು ಜಾರಿಗೆ ತಂದಿದ್ದ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಕಿತ್ತೆಸೆದು ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತರಲಾಯಿತು. ಬಿಜೆಪಿ, ಉದಾರೀಕರಣದ ನೀತಿಗಳನ್ನು ಕೈಬಿಡುವ ಬದಲು ಇನ್ನೂ ಹೆಚ್ಚು ರಭಸದಿಂದ ಅವುಗಳನ್ನು ಜಾರಿ ಮಾಡಿತು. ಪರಿಣಾಮವಾಗಿ ರೈತರ ಆತ್ಮಹತ್ಯೆಗಳು, ಹಸಿವಿನ ಸಾವುಗಳು ವ್ಯಾಪಕಗೊಂಡವು. ಕಂಗೆಟ್ಟ ಜನರ ಕೈಡಿಡಿಯಲು ವಾಜಪೇಯಿ ಸರ್ಕಾರ ಮುಂದೆ ಬರಲಿಲ್ಲ. ಜನತೆಯ ಆಕ್ರೋಶ ಮತ ಪೆಟ್ಟಿಗೆಯಲ್ಲಿ ವ್ಯಕ್ತವಾಯಿತು. ಮತ್ತೊಮ್ಮೆ ಅಧಿಕಾರಕ್ಕೆ ಬರುವ ಬಿಜೆಪಿಯ ಕನಸು ನುಚ್ಚುನೂರಾಯಿತು.

ಪರ್ಯಾಯಕ್ಕಾಗಿ ಹುಡುಕಾಟ ನಡೆಸಿದ್ದ ಜನತೆ ಕೇಂದ್ರದಲ್ಲಿ ಎಡಪಕ್ಷಗಳ ಬೆಂಬಲದ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಅಸ್ತಿತ್ವಕ್ಕೆ ತಂದಿದೆ. ಜನತೆಯ ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರದ ಯು.ಪಿ.ಎ. ಸರ್ಕಾರವು ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಜನತೆಗೆ ಕೆಲವು ಭರವಸೆಗಳನ್ನು ನೀಡಿದೆ. ಈ ಭರವಸೆಗಳು ಜಾರಿಗೆ



ಭೂಮಿಯಲ್ಲಿ ಕೂಲಿಯೂ ಇಲ್ಲ
ಬದುಕುವ ಬಗೆ ಎಂತು?

ಬಂದರೆ ಈಗಾಗಲೇ ಸೋತು ಸುಣ್ಣವಾದ ರೈತನಿಗೆ, ಕೂಲಿಕಾರನಿಗೆ, ನಿರುದ್ಯೋಗಿ ಯುವಕನಿಗೆ ಬದುಕಿನಲ್ಲಿ ವಿಶ್ವಾಸ ಮೂಡುವ ಸಾಧ್ಯತೆ ಇದೆ.

ಕರ್ನಾಟಕದಲ್ಲಿಯೂ ಜನ ಬಡಲಾವಣೆಯ ಪರವಾಗಿ ಮತ ನೀಡಿದ್ದಾರೆ. ಇಲ್ಲಿಯೂ ಬಿಜೆಪಿಗೆ ಜನ ಅಧಿಕಾರ ನೀಡಲಿಲ್ಲ. ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್-ಜೆಡಿ(ಎಸ್) ಸಮ್ಮಿಶ್ರ ಸರ್ಕಾರ ಜನಾದೇಶಕ್ಕೆ ತಕ್ಕಂತೆ ಕಾರ್ಯನಿರ್ವಹಿಸಬೇಕು. ಕೃಷಿ ಹಾಗೂ ಇತರ ಕ್ಷೇತ್ರಗಳಲ್ಲಿ ಹಿಂದಿನ ಸರ್ಕಾರದ ವಿಶ್ವಬ್ಯಾಂಕ್ ನಿರ್ದೇಶಿತ ಉದಾರೀಕರಣದ ನೀತಿಗಳನ್ನು ಕೈಬಿಟ್ಟು ಹೊಸ ಹಾದಿಯನ್ನು ತುಳಿಯಲು ಮನಸ್ಸು ಮಾಡಬೇಕು; ಧೈರ್ಯ ತೋರಬೇಕು. ಕೃಷಿ ಕ್ಷೇತ್ರದಲ್ಲಿ ಆಳವಾಗುತ್ತಿರುವ ಬಿಕ್ಕಟ್ಟಿಗೆ ಪರಿಹಾರ ಒದಗಿಸಲು ಆದ್ಯತೆ ನೀಡಬೇಕು.

1. ಭೂಮಿಯ ಪ್ರಶ್ನೆ:

ಭೂಮಿ ಎಲ್ಲ ಅಭಿವೃದ್ಧಿಯ ಮೂಲ ಆಧಾರವಾಗಿದೆ. ಆದ್ದರಿಂದಲೇ ಭೂಮಿಯನ್ನು

ಸುಧಾರಣೆ ಎನ್ನುತ್ತಾರೆ. ಜಮೀನ್ದಾರಿ ಪದ್ಧತಿ ನಾಶವಾಗಬೇಕು; ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬ ಘೋಷಣೆಗಳು ಸ್ವಾತಂತ್ರ್ಯ ಚಳುವಳಿಯ ಆಶಯಗಳ ಭಾಗವೇ ಆಗಿದ್ದವು. ಆದರೆ ಸ್ವಾತಂತ್ರ್ಯ ಸಿಕ್ಕ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರಗಳು ಭೂ ಸುಧಾರಣೆಗಳನ್ನು ಜಾರಿ ಮಾಡಲು ಮುಂದಾಗಲಿಲ್ಲ. ದೇಶದ ಜಮೀನ್ದಾರರೊಂದಿಗೆ ಅಧಿಕಾರವನ್ನು ಹಂಚಿಕೊಂಡ ಬಂಡವಾಳಶಾಹಿಗಳು ಜಮೀನ್ದಾರಿ ಪದ್ಧತಿಯನ್ನು ನಾಶ ಮಾಡಲು ಬಯಸಲಿಲ್ಲ. ಇದರಿಂದಾಗಿ ದೇಶದ ಭಾಗ್ಯದ ಬಾಗಿಲು ತೆರೆಯಲು ಸಿಕ್ಕ ಅವಕಾಶವನ್ನು ದೇಶ ಕಳೆದುಕೊಳ್ಳುವಂತಾಯಿತು.


ಭೂ ಸುಧಾರಣಾ ಕ್ರಮಗಳು ಜಾರಿಯಾದರೆ, ಭೂಹೀನ ಕೃಷಿ ಕೂಲಿಕಾರರಿಗೆ ಮತ್ತು ಬಡ ರೈತರಿಗೆ ಹೆಚ್ಚುವರಿ ಭೂಮಿ ವಿತರಣೆಯಾಗುತ್ತದೆ. ಇದರಿಂದಾಗಿ ಕೃಷಿ ಉತ್ಪಾದನೆ ಅಧಿಕಗೊಳ್ಳುತ್ತದೆ. ಭೂಮಿಯನ್ನು ಪಡೆದ ಕೃಷಿ ಕೂಲಿಕಾರರ ಮತ್ತು ಬಡ ರೈತರ ಆದಾಯ ಹೆಚ್ಚಾಗುತ್ತದೆ; ಅವರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಇದರ ಪರಿಣಾಮವಾಗಿ ಕೈಗಾರಿಕಾ ಸರಕುಗಳ ಬೇಡಿಕೆ ಹೆಚ್ಚಾಗುತ್ತದೆ; ಕೈಗಾರೀಕರಣ ತೀವ್ರವಾಗುತ್ತದೆ. ಇತ್ತ ಕೃಷಿ ಉತ್ಪಾದನೆ ಅಧಿಕಗೊಂಡಂತೆ ಕೃಷಿ ಆಧಾರಿತ ಕೈಗಾರಿಕೆಗಳ ಬೆಳವಣಿಗೆಯಾಗುತ್ತದೆ. ಕೈಗಾರೀಕರಣದಿಂದಾಗಿ ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತವೆ; ಭೂಮಿಯ ಮೇಲಿನ ಅನಗತ್ಯ ಅವಲಂಬನೆ ಕಡಿಮೆಯಾಗುತ್ತದೆ. ಹೀಗೆ ಭೂಸುಧಾರಣೆಗಳಿಂದಾಗಿ ಅಭಿವೃದ್ಧಿಯ ಚಕ್ರ ತಿರುಗಲಾರಂಭಿಸುತ್ತದೆ. ಇಂದು ಅತ್ಯಂತ ಅಭಿವೃದ್ಧಿ ಹೊಂದಿದ ಕೈಗಾರಿಕಾ ರಾಷ್ಟ್ರಗಳಲ್ಲಿ ಒಂದಾಗಿರುವ ಜಪಾನ್ ಸಾಧಿಸಿರುವ ಪ್ರಗತಿಗೆ ಮೂಲ ಭೂತವಾಗಿ ಕ್ರಾಂತಿಕಾರಿ ಭೂಸುಧಾರಣೆಗಳೇ ಕಾರಣ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ನಿತ್ಯಾನಂದಸ್ವಾಮಿ

ಭಾರತದಲ್ಲಿ ಸ್ವಾತಂತ್ರ್ಯ ನಂತರವೂ ಭೂಮಿಯ ಹಕ್ಕಿಗಾಗಿ ಮುಂದುವರೆದ ಜನಾಂದೋಲನದ ಪರಿಣಾಮವಾಗಿ ಕಾಂಗ್ರೆಸ್ ಸರ್ಕಾರಗಳು ಜನರ ಕಣ್ಣಿಗೆ ಮಣ್ಣೆರಚುವ ಉದ್ದೇಶಕ್ಕಾದರೂ ಭೂಸುಧಾರಣೆಗಳನ್ನು ಜಾರಿಗೆ ತರಲೇಬೇಕಾಯಿತು. ಇಂತಹ ಭೂಸುಧಾರಣಾ ಕಾಯ್ದೆಗಳ ಮೂಲಕ ದೊಡ್ಡ ದೊಡ್ಡ ಭೂಮಾಲಕರಿಗೆ ಅಪಾರವಾದ ಪರಿಹಾರವನ್ನು ಪಡೆಯಲು ಸಾಧ್ಯವಾಯಿತು. ಕಾಯ್ದೆಗಳಲ್ಲಿ ಅಡಗಿದ್ದ ಪಾರುಗುಂಡಿಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಭೂಮಾಲಕರು ತಮ್ಮ ವಶದಲ್ಲೇ ಉಳಿಸಿಕೊಳ್ಳುವುದು ಸಾಧ್ಯವಾಯಿತು. ಸ್ವಯಂ ಸಾಗುವಳಿಯ ಹೆಸರಿನಲ್ಲಿ ಭೂಮಿಯನ್ನು ಗೇಣಿದಾರರಿಂದ ಪುನರ್ವಶ ಮಾಡಿಕೊಳ್ಳುವ ಹಕ್ಕನ್ನು ಪಡೆದ ಭೂಮಾಲಕರು ಗೇಣಿದಾರರನ್ನು ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸಿದರು. ಹೀಗೆ ಹೆಚ್ಚುವರಿ ಭೂಮಿಯನ್ನು ವಶಪಡಿಸುವುದೂ ಆಗಲಿಲ್ಲ; ಅದನ್ನು ಭೂ ಹೀನ ಬಡವರಿಗೆ ಹಂಚುವುದೂ ಆಗಲಿಲ್ಲ. ಕರ್ನಾಟಕದಲ್ಲಿ ಜಾರಿಗೆ

ಪರಿಣಾಮಕಾರಿಯಾಗಿ ಜಾರಿಗೆ ತಂದವು. ಪಶ್ಚಿಮ ಬಂಗಾಳ ರಾಜ್ಯವೊಂದರಲ್ಲೇ ಸುಮಾರು 14 ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಅದರಲ್ಲಿ ಸುಮಾರು 11 ಲಕ್ಷ ಎಕರೆ ಭೂಮಿಯನ್ನು 2.5 ಲಕ್ಷ ಭೂಹೀನ ಕುಟುಂಬಗಳಿಗೆ ವಿತರಣೆ ಮಾಡಲಾಯಿತು.

ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರ ಜಾರಿಗೆ ತಂದ ಭೂ ಸುಧಾರಣೆಗಳಿಂದ ಎಚ್ಚರಗೊಂಡ ಕರ್ನಾಟಕದ ಭೂಮಾಲಕರು ಗೇಣಿದಾರರನ್ನು ಒಕ್ಕಲೆಬ್ಬಿಸಲು ತಡ ಮಾಡಲಿಲ್ಲ. ಹೀಗಾಗಿ ಲಕ್ಷಾಂತರ ಗೇಣಿದಾರರು ಭೂಮಿಯಿಂದ ಹೊರದಬ್ಬಲ್ಪಟ್ಟು ಕೂಲಿಕಾರರಾಗುವಂತಾಯಿತು. ಮೊದಲು 1961 ರಲ್ಲಿ, ನಂತರ ತಿದ್ದುಪಡಿಗಳೊಂದಿಗೆ 1974 ರಲ್ಲಿ ಭೂಸುಧಾರಣಾ ಕಾಯ್ದೆ ಜಾರಿಗೆ ಬಂದರೂ ಗೇಣಿದಾರ ರೈತರ ಚಳುವಳಿ ನಡೆಯುತ್ತಿದ್ದ ಕರಾವಳಿ ಜಿಲ್ಲೆಗಳಲ್ಲಿ ಮಾತ್ರ ಗೇಣಿದಾರರು ಭೂಮಿಯ ಹಕ್ಕನ್ನು ಪಡೆಯಲು ಸಾಧ್ಯವಾಯಿತು. ಭೂಮಾಲಕ ಪದ್ಧತಿ ಬಲವಾಗಿ ಬೇರೂರಿ ನಿಂತಿದ್ದ ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಜಿಲ್ಲೆಗಳಲ್ಲಿ ಬಹುತೇಕ ಗೇಣಿದಾರರು ಅರ್ಜಿ ಹಾಕದಂತೆ ಅವರನ್ನು ಬೆದರಿಸಿ ತಡೆ ಹಿಡಿಯಲಾಯಿತು. ಸ್ವೀಕೃತವಾದ ಸಾವಿರಾರು ಅರ್ಜಿಗಳನ್ನು ತಿರಸ್ಕರಿಸಲಾಯಿತು. ಭೂಮಾಲಕ ಪ್ರತಿನಿಧಿ ಗಳಿಂದಲೇ ತುಂಬಿರುತ್ತಿದ್ದ ಭೂನ್ಯಾಯ ಮಂಡಳಿಗಳಿಂದ ಗೇಣಿದಾರರಿಗೆ ನ್ಯಾಯ ದೊರೆಯುವುದು ಸಾಧ್ಯವೇ? ಬಲಿಷ್ಟವಾದ ರೈತ ಚಳುವಳಿ ಇದ್ದ ಕರಾವಳಿ ಜಿಲ್ಲೆಗಳಲ್ಲಿ ಸಹ ಗೇಣಿದಾರರ ಸಾವಿರಾರು ಅರ್ಜಿಗಳು ಇನ್ನೂ ಇತ್ಯರ್ಥವಾಗದೆ ಉಳಿದಿರುವುದನ್ನು ಗಮನಿಸಿದರೆ ಕರ್ನಾಟಕದ ಭೂಸುಧಾರಣೆಗಳ ವೈಫಲ್ಯ ಕಣ್ಣಿಗೆ ಕಟ್ಟುತ್ತದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಮತ್ತೆ ವ್ಯಾಪಿಸಿರುವ ಗೇಣಿ ಪದ್ಧತಿ, ಲೀಸ್ ಪದ್ಧತಿಯಿಂದ ರಾಜ್ಯದಲ್ಲಿ ಭೂಸುಧಾರಣೆಗಳ ನಂತರವೂ ಭೂಮಾಲಕ ಪದ್ಧತಿ ಜೀವಂತವಾಗಿದೆ ಎಂಬುದು




ಶವಾಗುತ್ತದೆ.

90 ರ ದಶಕದಲ್ಲಿ ಆರಂಭಿಸಲಾದ ದಾರೀಕರಣ ನೀತಿಗಳ ಪರಿಣಾಮವಾಗಿ ಾಸುಧಾರಣೆಗಳ ಬಗ್ಗೆ ಮಾತೆತ್ತುವುದನ್ನೇ ಕೈ ಡಲಾಯಿತು. ಮಾತ್ರವಲ್ಲ ಅಳಿದುಳಿದ ಾಸುಧಾರಣಾ ಕ್ರಮಗಳನ್ನು ಸಡಿಲುಗೊಳಿಸಿ ಭಾರಿ

ಆಗ್ರಹಿಸಿ

ರರ ಲಗ್ಗೆ



ವಾಣದ ಭೂಮಿಯನ್ನು ದೊಡ್ಡ ಡವಾಳಶಾಹಿ ಮನೆತನಗಳಿಗೆ ಮತ್ತು ವಿದೇಶಿ ಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಾಡುವುದನ್ನು ಹಾಗೂ ಲೀಸ್ ಆಧಾರದಲ್ಲಿ ಡುವುದನ್ನು ಆರಂಭಿಸಲಾಯಿತು. 1995 ರಲ್ಲಿ ರ್ನಾಟಕ ಭೂಸುಧಾರಣಾ ಕಾಯ್ದೆಯನ್ನು ದ್ದುಪಡಿ ಮಾಡಿ ಕೃಷಿಯೇತರ ಉದ್ದೇಶಗಳಿಗೆ ಕೃಷಿ ಾಮಿಯನ್ನು ಬಳಕೆ ಮಾಡಲು ಆಸ್ಪದ ಡಿಕೊಡಲಾಯಿತು. ಇದರ ಪರಿಣಾಮವಾಗಿ ಗಳೂರಿನಂತಹ ನಗರ ಪ್ರದೇಶಗಳ ಸುತ್ತಲಿನ ಡ ರೈತರು ಭೂಮಿ ಕಳೆದುಕೊಂಡು ದಿವಾಲಾಗುವಂತಾಯಿತು. ಭೂ ಸುಧಾರಣಾ ಯ್ದೆಗೆ ಮಾಡಲಾದ ಇಂತಹ ಪ್ರತಿಗಾಮಿ ದ್ದುಪಡಿಗಳನ್ನು ಕೈಬಿಟ್ಟು, ಕಾಯ್ದೆಯಲ್ಲಿರುವ ಎಲ್ಲಾ ರುಗುಂಡಿಗಳನ್ನು ಮುಚ್ಚಿ, ಗೇಣಿದಾರರ ಕ್ಕುಗಳಿಗೆ ರಕ್ಷಣೆ ಹಾಗೂ ಹೆಚ್ಚುವರಿ ೂಮಿಯನ್ನು ನಿರ್ದಾಕ್ಷಿಣ್ಯವಾಗಿ ಶಪಡಿಸಿಕೊಂಡು ಭೂಹೀನ ಬಡವರಿಗೆ ಂಚಲು ಸಾಧ್ಯವಾಗುವಂತೆ ಪರ್ಯಾಯ ಾಸುಧಾರಣಾ ಕಾಯ್ದೆಯನ್ನು ರೂಪಿಸಲು ಧ್ಯವಾಗುವಂತೆ ಸಮಾನ ಮನಸ್ಕರೆಲ್ಲರು ದಾಗಿ ಸರ್ಕಾರಗಳ ಮೇಲೆ ಒತ್ತಡ ತರುವುದು ಬೇಕಾಗಿದೆ.


ಈ ನಡುವೆ ಕಳೆದ ಕೆಲವು ದಶಕಗಳಿಂದ ಅರಣ್ಯ ೂಮಿಯಲ್ಲಿ ವಾಸ ಮಾಡುತ್ತಿರುವ ಹಾಗೂ ಗುವಳಿ ಮಾಡುತ್ತಿರುವ ಬಡವರನ್ನು ಕ್ಕಲೆಬ್ಬಿಸುವ ಪ್ರಯತ್ನ ಆರಂಭವಾಗಿದೆ. ರಣ್ಯದಲ್ಲೇ ಹುಟ್ಟಿ ಅರಣ್ಯದಲ್ಲೇ ಬೆಳೆದ ವಾಸಿಗಳನ್ನು ಪರಿಸರ ರಕ್ಷಣೆಯ ಹೆಸರಿನಲ್ಲಿ ರಣ್ಯದಿಂದ ಹೊರಹಾಕುವ ಪ್ರಯತ್ನವೂ ಡೆಯುತ್ತಿದೆ. ಸರ್ವೋಚ್ಚ ನ್ಯಾಯಾಲಯದ ದೇಶದ ಹೆಸರಿನಲ್ಲಿ 2002 ರಲ್ಲಿ ವಾಜಪೇಯಿ ರ್ಕಾರ ಈ ಆದೇಶವನ್ನು ಹೊರಡಿಸಿದ್ದು ರ್ನಾಟಕವೂ ಸೇರಿದಂತೆ ಅನೇಕ ರಾಜ್ಯ ರ್ಕಾರಗಳು ಇದನ್ನು ಜಾರಿಗೊಳಿಸಲು ಕ್ರಮ ಗೊಂಡಿವೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಜ್ಯಗಳ ಸಿಪಿಐ(ಎಂ) ನೇತೃತ್ವದ ಎಡರಂಗ ರ್ಕಾರಗಳು ಮಾತ್ರ ಬಡವರನ್ನು ಅರಣ್ಯ ೂಮಿಯಿಂದ ಒಕ್ಕಲೆಬ್ಬಿಸಲು ನಿರಾಕರಿಸಿವೆ.

ಕರ್ನಾಟಕದಲ್ಲಿ ಕೆಲವು ವರ್ಷಗಳ ಹಿಂದೆ 'ಸಿ' ಮತ್ತು 'ಡಿ' ವರ್ಗದ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಅಂತಹ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಾ ಬಂದಿರುವ ಬಡವರನ್ನು ಅರಣ್ಯ ಇಲಾಖೆ ಬಲವಂತದಿಂದ ಹೊರಹಾಕುತ್ತಿದೆ. ಕಾರಣಾಂತರದಿಂದ ಜನವಸತಿ ನಿರ್ನಾಮವಾಗಿ ಹಾಳುಬಿದ್ದ ಗ್ರಾಮಗಳ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಅಂತಹ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ಭೂಹೀನರಿಗೆ ಅರಣ್ಯ ಇಲಾಖೆ ಕಿರುಕುಳ ಕೊಡುತ್ತಿದೆ. ಭೂಮಿಗೆ ಸಂಬಂಧಪಟ್ಟ ಈ ಎಲ್ಲಾ ಪ್ರಶ್ನೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ದೊಡ್ಡ ಚಳುವಳಿಯೊಂದನ್ನು ನಡೆಸಬೇಕಾಗಿದೆ.

2. ಕೃಷಿ ಕೂಲಿಕಾರರ ಪ್ರಶ್ನೆ

ಭೂ ಹೀನತೆ : ನೈಜ ಭೂಸುಧಾರಣೆಗಳನ್ನು ಜಾರಿಗೆ ತರಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿರುವುದರಿಂದ ಕೋಟ್ಯಾಂತರ ಕುಟುಂಬಗಳು ಭೂಹೀನ ಕೃಷಿ ಕೂಲಿಕಾರರಾಗಿ ಜೀವನ ಸಾಗಿಸುವಂತಾಗಿದೆ. ಉದಾರೀಕರಣದ ಧಾಳಿಯಿಂದಾಗಿ ಬಡ ರೈತರು ತಮ್ಮ ಭೂಮಿಯನ್ನು ಕಳೆದುಕೊಂಡು ಕೂಲಿಕಾರರಾಗುತ್ತಿರುವುದರಿಂದ ದೇಶದಲ್ಲಿ ಕೃಷಿ ಕೂಲಿಕಾರರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. 1951 ರ ಜನಗಣತಿಯಲ್ಲಿ ಸುಮಾರು 3 ಕೋಟಿಯಷ್ಟು ಇದ್ದ ಕೃಷಿಕೂಲಿಕಾರರ ಸಂಖ್ಯೆ 2001 ರ ಗಣತಿಯಲ್ಲಿ 11 ಕೋಟಿಗೆ ಏರಿದೆ. 1991-2001ರ ನಡುವಿನ 10 ವರ್ಷಗಳ ಉದಾರೀಕರಣ ನೀತಿಗಳ ಅನುಷ್ಠಾನದ ಅವಧಿಯಲ್ಲಿ ಕೃಷಿಕೂಲಿಕಾರರ ಸಂಖ್ಯೆ 3 ಕೋಟಿಯಷ್ಟು ಅಧಿಕವಾಗಿದೆ. ಭೂಮಿ ಕಳೆದುಕೊಂಡ ರೈತರು ಮಾತ್ರವಲ್ಲದೆ, ಒಕ್ಕಲೆಬ್ಬಿಸಲ್ಪಟ್ಟ ಗೇಣಿದಾರರು, ಅರಣ್ಯ ಭೂಮಿ ಸಾಗುವಳಿದಾರರು, ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರು, ಉದ್ಯೋಗವಿಲ್ಲದ ನೇಕಾರರು, ಕೃಷಿ ಕೂಲಿಕಾರರ ಸೈನ್ಯವನ್ನು ಸೇರುತ್ತಿದ್ದಾರೆ.

ಕೆಲಸ: ಕೃಷಿ ಕ್ಷೇತ್ರದಲ್ಲಿ ಆಳವಾಗುತ್ತಿರುವ ಬಿಕ್ಕಟ್ಟಿನಿಂದಾಗಿ ಕೃಷಿ ಕೂಲಿಕಾರರಿಗೆ ಕೆಲಸ ಸಿಗದಂತಾಗಿದೆ. ವಾರ್ಷಿಕ ಸರಾಸರಿ ಕೆಲಸದ ದಿನಗಳು 60 ಕ್ಕೆ ಇಳಿದಿವೆ. ಕೃಷಿ ಕೆಲಸಗಳಲ್ಲಿ ಮತ್ತು ಸರ್ಕಾರಿ ಕಾಮಗಾರಿಗಳಲ್ಲಿ ಯಂತ್ರಗಳ ಬಳಕೆ ಹೆಚ್ಚುತ್ತಿದ್ದಂತೆ ಕೃಷಿ ಕೂಲಿಕಾರರ ಗೋಳು ತೀವ್ರವಾಗುತ್ತಿದೆ. ಕೂಲಿಕಾರರ ಸಂಖ್ಯೆ ಬೆಳೆಯುತ್ತಿರುವುದರಿಂದ ಅವರ ಚೌಕಾಸಿಯ ಶಕ್ತಿ ಕುಸಿದು ಸಂಪಾದನೆ ಇಳಿಮುಖವಾಗುತ್ತದೆ. ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳನ್ನು ಹೊರತುಪಡಿಸಿ ಬೇರೆ ಯಾವ ರಾಜ್ಯದಲ್ಲೂ ಕೃಷಿ ಕೂಲಿಕಾರರಿಗೆ ಸರ್ಕಾರ ನಿಗದಿಪಡಿಸಿ ಕನಿಷ್ಠ ಕೂಲಿ ಜಾರಿಯಾಗಲಿಲ್ಲ. ಮಹಿಳಾ ಕೃಷಿ ಕೂಲಿಕಾರರಿಗೆ ಪುರುಷರೊಂದಿಗೆ ಸಮಾನ ಕೆಲಸಕ್ಕೆ ಸಮಾನ ಕೂಲಿ ನೀಡಲಾಗುವುದಿಲ್ಲ. ಕೃಷಿ ಕೂಲಿಕಾರರಿಗೆ ಭವಿಷ್ಯ ನಿಧಿ, ವೃದ್ಧಾಪ್ಯ ವೇತನ, ಸಾಮಾಜಿಕ ಸಂರಕ್ಷಣೆ ಒದಗಿಸುವ ಯಾವುದೇ ಕಾನೂನು ರಕ್ಷಣೆ ಇಲ್ಲ.



ಆತ್ಮಹತ್ಯೆಗೀಡಾದ ಅನ್ನದಾತ

ವಲಸೆ-ವಾಸ : ಕೃಷಿ ಕೂಲಿಕಾರರಲ್ಲಿ ಒಂದು ದೊಡ್ಡ ವಿಭಾಗ ಉದ್ಯೋಗವನ್ನು ಹುಡುಕಿಕೊಂಡು ಊರೂರು ಅಲೆಯುತ್ತಿರುತ್ತಾರೆ. ಬರಗಾಲದ ಸಂದರ್ಭದಲ್ಲಿ ಸರ್ಕಾರಿ ಕಾಮಗಾರಿಗಳ ಕೊರತೆಯಿಂದಾಗಿ, ಇವರು ತಮ್ಮ ಮಕ್ಕಳುಮರಿಗಳನ್ನು ಕಟ್ಟಿಕೊಂಡು ದೂರದ ಗೋವಾ, ಮುಂಬೈ ಮೊದಲಾದ ಕಡೆಗಳಿಗೆ ವಲಸೆ ಹೋಗುತ್ತಾರೆ. ಅಲ್ಲಿ ರಸ್ತೆಗಳ ಬದಿಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ ನರಕ ಯಾತನೆಯನ್ನು ಅನುಭವಿಸುತ್ತಿರುತ್ತಾರೆ. ವಲಸೆ ಕಾರ್ಮಿಕರ ಕಾನೂನು ಅಲ್ಲಿ ಅವರ ನೆರವಿಗೆ ಬರುವುದಿಲ್ಲ. ಇಂತಹವರ ಮೇಲೆ ಎಂತಹ ದೌರ್ಜನ್ಯ ನಡೆಯುತ್ತದೆ ಎಂಬುದಕ್ಕೆ ಗೋವಾದ ಬಿಜೆಪಿ ಸರ್ಕಾರದ ಇತ್ತೀಚಿನ ಉದಾಹರಣೆ ನಮ್ಮ ಕಣ್ಮುಂದೆ ಇದೆ.

ಪಿಡುಗುಗಳಿಗೆ ಬಲಿ: ಕರ್ನಾಟಕದ ಗ್ರಾಮೀಣ ಜನವಿಭಾಗಗಳ ಶೇ 40 ರಷ್ಟಿರುವ ಕೃಷಿ ಕೂಲಿಕಾರರು ವಾಸಕ್ಕೆ ಸ್ವಂತ ಮನೆಗಳಿಲ್ಲದೆ, ನಿಯಮಿತ ಸಂಪಾದನೆ ಇಲ್ಲದೆ, ಪೌಷ್ಟಿಕ ಆಹಾರವಿಲ್ಲದೆ, ಶುಶ್ರೂಷೆಗೆ ದಿಕ್ಕಿಲ್ಲದೆ, ಮಕ್ಕಳಿಗೆ ಶಿಕ್ಷಣದ ಸ್ಪರ್ಶವಿಲ್ಲದೆ ಘೋರ ಅಂಧಕಾರದಲ್ಲಿ ಕಾಲ ಕಳೆಯುತ್ತಿರುತ್ತಾರೆ. ಇವರಲ್ಲಿ ಬಹುಸಂಖ್ಯಾತರು ದಲಿತ ವಿಭಾಗಗಳಿಗೆ ಸೇರಿದವರಾಗಿದ್ದು ಅಮಾನವೀಯ ಜಾತಿ ಅಸ್ಪೃಶ್ಯತೆ ಹಾಗೂ ಸಾಮಾಜಿಕ ದಮನಕ್ಕೆ ಒಳಗಾಗುತ್ತಿದ್ದಾರೆ. ಇವರ ಬದುಕಿನಲ್ಲಿ ಬದಲಾವಣೆಯಾಗದೆ ಕರ್ನಾಟಕದ ಅಭಿವೃದ್ಧಿ ಸಾಧ್ಯವೇ?

3. ಗ್ರಾಮೀಣ ಸಾಲದ ಪ್ರಶ್ನೆ

ಆಧುನಿಕ ಬೇಸಾಯ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿದೆ. ಬೀಜ, ಗೊಬ್ಬರ, ಕ್ರಿಮಿನಾಶಕಗಳು, ಯಂತ್ರೋಪಕರಣಗಳು, ವಿದ್ಯುತ್ ಮೊದಲಾದ ಕೃಷಿ ಲಾಗುವಾಡುಗಳ ಬೆಲೆಗಳು ಗಗನಕ್ಕೇರುತ್ತಿದ್ದಂತೆ ಅವುಗಳಿಗಾಗಿ ಹಣ ಜೋಡಿಸಿಕೊಳ್ಳುವುದು ಬಡ ಹಾಗೂ ಮಧ್ಯಮ ರೈತರಿಗೆ ಅತ್ಯಂತ ಯಾತನೆಯ ವಿಷಯವಾಗಿದೆ. ಸ್ವಾತಂತ್ರ್ಯನಂತರದ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ಒದಗಿಸಲಾಗುತ್ತಿದ್ದ ಸಾಂಸ್ಥಿಕ ಸಾಲದ ಪ್ರಯೋಜನವನ್ನು ಶ್ರೀಮಂತ ರೈತರೇ ಹೆಚ್ಚಾಗಿ ಪಡೆಯುವಂತಾದರೂ ಒಟ್ಟಾರೆಯಾಗಿ ಕೃಷಿ ಕ್ಷೇತ್ರಕ್ಕೆ ಅನುಕೂಲವಾಗಿತ್ತು. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ, ಕೃಷಿಯೂ ಸೇರಿದಂತೆ ಆದ್ಯತೆಯ ವಲಯಕ್ಕೆ ಬ್ಯಾಂಕುಗಳು ಶೇ 40 ರಷ್ಟು ಸಾಲ ನೀಡುವುದನ್ನು ಕಡ್ಡಾಯ ಮಾಡಿದಾಗ ಕೃಷಿ ಕ್ಷೇತ್ರಕ್ಕೆ ಅಗತ್ಯ ಪ್ರೋತ್ಸಾಹ ದೊರೆಯುವಂತಾಗಿತ್ತು. ಆದರೆ ಉದಾರೀಕರಣದ ನೀತಿಗಳ ಆಗಮನದಿಂದಾಗಿ ರೈತರಿಗೆ ಯಾವ ಪ್ರೋತ್ಸಾಹವೂ ಇಲ್ಲದಂತಾಗಿದೆ. ಬಜೆಟ್ ಕಡಿತಗಳಿಂದಾಗಿ ಸಾರ್ವಜನಿಕ ರಂಗದ ಬ್ಯಾಂಕುಗಳಿಂದ ಮತ್ತು ಸಹಕಾರಿ ಬ್ಯಾಂಕುಗಳಿಂದ ರೈತರಿಗೆ ದೊರೆಯುತ್ತಿದ್ದ ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯವನ್ನು ಹಿಂತೆಗೆದುಕೊಳ್ಳಲಾಯಿತು. ಖಾಸಗಿ ಸಾಲದ ಮೇಲೆ ಅವಲಂಬನೆ ಹೆಚ್ಚಾಯಿತು. ಗೊಬ್ಬರ, ಕ್ರಿಮಿನಾಶಕ ಗಳನ್ನು ಮಾರಾಟ ಮಾಡುವ ಕಂಪನಿ ಮತ್ತು ವ್ಯಾಪಾರಸ್ಥರ ಮುಂದೆ ರೈತರ ಸಾಲಕ್ಕಾಗಿ ಕೈವೊಡ್ಡಬೇಕಾಯಿತು.

ವರದಿಗಳ ಪ್ರಕಾರ ಬಡ ಮತ್ತು ಮಧ್ಯಮ ರೈತರು ಪಡೆಯುವ ಒಟ್ಟು ಸಾಲದ ಶೇ 70 ರಷ್ಟು ಖಾಸಗಿ ಲೇವಾದೇವಿಗಾರರಿಂದ ಪಡೆದದ್ದಾಗಿರುತ್ತದೆ. ಸರ್ಕಾರಿ ಸಾಲ ದೊರೆಯದಿದ್ದಾಗ ಖಾಸಗಿ ಸಾಲ ನೀಡುವವರ ಡಿಮಾಂಡ್ ಸಹಜವಾಗಿ ಏರುತ್ತದೆ. ಸಾಲ ವಸೂಲಿಯೂ ಅಷ್ಟೇ ದರ್ಪದಿಂದ ನಡೆಯುತ್ತದೆ. ಮಾನಮರ್ಯಾದೆಗೆ ಅಂಜುವ ರೈತರು ಆತ್ಮಹತ್ಯೆಯಲ್ಲಿ ಪರಿಹಾರ ಕಂಡುಕೊಳ್ಳಲು ಮುಂದಾಗುತ್ತಾರೆ. ದೇಶದ ಚರಿತ್ರೆಯಲ್ಲಿ ಹಿಂದೆಂದೂ ರೈತರಿಗೆ ಇಂತಹ ಪರಿಸ್ಥಿತಿ ಬಂದಿರಲಿಲ್ಲ.

ಹಿಂದಿನ ಸರ್ಕಾರದ 'ಕಿಸಾನ್ ಕಾರ್ಡ್'ಗಳಿಂದ ಏನೂ ಪ್ರಯೋಜನವಾಗಲಿಲ್ಲ. ಸರ್ಕಾರ ನಿಗದಿಪಡಿಸಿದ ಮಿತಿಗಳಿಂದ ಹಾಗೂ ಬ್ಯಾಂಕುಗಳ ಧೋರಣೆಗಳಿಂದಾಗಿ ಬಹುತೇಕ ಬಡ ಮತ್ತು ಮಧ್ಯಮ ರೈತರಿಗೆ ಈ ಸೌಲಭ್ಯ ದೊರೆಯಲೇ ಇಲ್ಲ. ಸರ್ಕಾರ ಕೃಷಿ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಒದಗಿಸಲು ಮುಂದಾಗದೆ ರೈತರನ್ನು ಉಳಿಸಲು ಸಾಧ್ಯವಿಲ್ಲ. ಬ್ಯಾಂಕುಗಳ ಗ್ರಾಮೀಣ ಶಾಖೆಗಳನ್ನು ಮುಚ್ಚುವ ಪ್ರಕ್ರಿಯೆ ನಿಲ್ಲಬೇಕು. ಎಲ್ಲಾ ಸಾಂಸ್ಥಿಕ ಸಾಲದ ಶೇ 30 ರಷ್ಟಾದರೂ ಕೃಷಿ ಕ್ಷೇತ್ರಕ್ಕೆ ಹರಿದು ಬರಬೇಕು. ಸಹಕಾರಿ ಬ್ಯಾಂಕುಗಳನ್ನು ಬಲಪಡಿಸಿ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ವ್ಯವಸ್ಥೆ ಆಗಬೇಕು. ಕೃಷಿ ಕ್ಷೇತ್ರಕ್ಕೆ ಅತ್ಯಂತ ಕಡಿಮೆ ದರಗಳಲ್ಲಿ ಸಾಲ ಒದಗಿಸುವುದಾಗಬೇಕು. ಖಾಸಗಿ ಲೇವಾದೇವಿಗಾರರ ವ್ಯವಹಾರಗಳ ಮೇಲೆ, ಅವರು ವಿಧಿಸುವ ಬಡ್ಡಿ ದರಗಳ ಬಗ್ಗೆ ಹಾಗೂ ಸಾಲ ವಸೂಲಾತಿಗೆ ಅನುಸರಿಸುವ ಕ್ರಮಗಳ ಬಗ್ಗೆ ಕಟ್ಟುನಿಟ್ಟಾದ ನಿಯಂತ್ರಣ ಇರಬೇಕು. ಕೃಷಿ ಕೂಲಿಕಾರರಿಗೆ ಗೃಹ ಬಳಕೆಗೆ, ಅಲ್ಲದೆ ಹೈನುಗಾರಿಕೆ, ಕೋಳಿ ಸಾಕಣಿಕೆ ಇತ್ಯಾದಿ ಉಪಕಸುಬುಗಳನ್ನು ಕೈಗೊಳ್ಳಲು ಬ್ಯಾಂಕುಗಳಿಂದ ಸಾಲ ನೀಡಬೇಕು.

4. ವಿದ್ಯುತ್ ಸಮಸ್ಯೆ

ವಿದ್ಯುತ್ ಇಂದು ಜೀವನಾವಶ್ಯಕ ವಸ್ತು ಆಗಿದೆ. ಕೃಷಿಗೂ ವಿದ್ಯುತ್ ಅಗತ್ಯವಾಗಿದೆ. ವಿದ್ಯುತ್ ಬಳಕೆಗೂ ದೇಶದ ಅಭಿವೃದ್ಧಿಗೂ ಹತ್ತಿರದ ಸಂಬಂದವಿದೆ. ದೇಶಕ್ಕೆ ಬೇಕಾಗುವಷ್ಟು ವಿದ್ಯುತ್ತನ್ನು ಉತ್ಪಾದಿಸಿ ಅಗ್ಗದ ದರಗಳಲ್ಲಿ ಪೂರೈಸುವುದು ಸರ್ಕಾರದ ಆದ್ಯತೆಯಾಗಬೇಕು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಅಂತಹ ಒಂದು ನೀತಿಯನ್ನು ಅಂಗೀಕರಿಸಿದ ಸರ್ಕಾರ ವಿದ್ಯುತ್ ಉತ್ಪಾದನೆಗೆ ಸಾರ್ವಜನಿಕ ರಂಗದಲ್ಲೇ ಹಣ ಹೂಡುತ್ತಾ ಬಂದಿತ್ತು. ಆದರೆ ಈಗ ವಿದ್ಯುತ್ ರಂಗದ ಸುಧಾರಣೆಗಳ ಹೆಸರಿನಲ್ಲಿ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯ ಖಾಸಗೀಕರಣದತ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತರಾತುರಿಯ ಹೆಜ್ಜೆಗಳನ್ನಿಡುತ್ತಿವೆ. ವಿದ್ಯುತ್ ಕಾಯ್ದೆ 2003 ನ್ನು ಜಾರಿಗೆ ತರುವ ಮೂಲಕ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ರಾಜ್ಯಗಳ ಮೇಲೆ ವಿದ್ಯುತ್ ರಂಗದ ಖಾಸಗೀಕರಣಕ್ಕೆ ಒತ್ತಾಯವನ್ನು ಹೇರಿತು. ವಿದ್ಯುತ್ ಕ್ಷೇತ್ರದ ಸುಧಾರಣೆಗಳಿಗಾಗಿ 6000

ಪುಟ 12 ಕ್ಕೆ




ರೈತ-ಕೂಲಿಕಾರರು ಪ್ರತಿಭಟನೆಯ ಹಾದಿಯಲ್ಲಿ

ಪಂಚಾಯತ ನೌಕರರು ಹತ್ತಾರು ವರ್ಷಗಳಿಂದ ಸಂಘಟಿತರಾಗಿ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ರಾಜ್ಯಮಟ್ಟದಲ್ಲಿ ಹಲವಾರು ಪ್ರಬಲ ಹೋರಾಟ ನಡೆಸಿ ಕೆಲವು ಸವಲತ್ತು ಪಡೆದಿದ್ದಾರೆ. ಇನ್ನೂ ಅನೇಕ ಪ್ರಶ್ನೆಗಳು ಹಾಗೆ ಉಳಿದಿವೆ. ನೌಕರರ ಸಂಘನೆ-ಹೋರಾಟವೊಂದೇ ತಮ್ಮ ಸಂಕಷ್ಟ ಪರಿಹರಿಸಲು ಇರುವ ಮಾರ್ಗವೆಂದು ದೃಢವಾಗಿ ನಂಬಿರುವ ನೌಕರರ ಸಂಘವು ವಿಸ್ತರಿಸುತ್ತಿದ್ದ, ಚಳುವಳಿಯನ್ನು ಮುಂದಕ್ಕೆ ಕೊಂಡೊಯ್ಯಲು ರಾಜ್ಯ ಸಮ್ಮೇಳನ ಇತ್ತೀಚೆಗೆ ಸಂಘಟಿಸಿದ್ದು, ಅದರ ವರದಿ ಇಲ್ಲಿದೆ....

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ 4ನೇ ರಾಜ್ಯ ಸಮ್ಮೇಳನ

ಸಂಘಟನೆ ಮತ್ತು ಹೋರಾಟದತ್ತ....



ಉದ್ಘಾಟನ ಡಬ್ಲ್ಯು.ಆರ್.ವರದರಾಜನ್‌ರಿಂದ, ಚಿತ್ರದಲ್ಲಿ ವಿ.ಪಿ.ಕುಲಕರ್ಣಿ, ಬಳಿಗಾರ್, ಶ್ರೀರಾಮರೆಡ್ಡಿ, ಮಾನ್ವಡ ಮತ್ತು ಪ್ರಕಾಶ್


ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ದಿನಾಂಕ 03.09.2004, ಶುಕ್ರವಾರದಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ನಾಯಕತ್ವದಲ್ಲಿ ಗ್ರಾಮ ಪಂಚಾಯತ್ ನೌಕರರ 4ನೇ ರಾಜ್ಯ ಸಮ್ಮೇಳನ ನಡೆಯಿತು. ಸಿಐಟಿಯುನ ಅಖಿಲ ಭಾರತ ಕಾರ್ಯದರ್ಶಿಗಳಾದ ಡಬ್ಲ್ಯ್ಯು.ಆರ್. ವರದರಾಜನ್ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ವಡೆಯವರು ಅಧ್ಯಕ್ಷತೆಯನ್ನು ವಹಿಸಿದ್ದು ಮುಖ್ಯ ಅತಿಥಿಗಳಾಗಿ ಆರ್.ಡಿ.ಪಿ.ಆರ್ ಇಲಾಖೆಯ ಕಾರ್ಯದರ್ಶಿಗಳಾದ ವಿ.ಪಿ.ಬಳಿಗಾರ್ ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ವಿ.ಜೆ.ಕೆ.ನಾಯರ್ ಮತ್ತು ಬಾಗೇಪಲ್ಲಿ ಶಾಸಕರಾದ ಜಿ.ವಿ ಶ್ರೀರಾಮರೆಡ್ಡಿಯವರು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಗ್ರಾಮಪಂಚಾಯತ್ ನೌಕರರಿಗೆ ಉತ್ತಮ ವೇತನ ನಿಗಧಿಗೊಳಿಸುವುದು, ಖಾಯಂಗೊಳಿಸುವುದು ಒಳಗೊಂಡಂತೆ ಪಂಚಾಯತ್ ನೌಕರರನ್ನು ಇತರೆ ಸರ್ಕಾರಿ ನೌಕರರಂತೆ ಪರಿಗಣಿಸಿ, ಭವಿಷ್ಯನಿಧಿ, ಆರೋಗ್ಯ ನಿರ್ವಹಣೆಯೂ ಸೇರಿದಂತೆ ಅಗತ್ಯದ ಎಲ್ಲಾ ಸೌಲಭ್ಯಗಳನ್ನು ಒದಗಿಸುವಂತೆ ಸರ್ಕಾರದ ಮೇಲೆ ಒತ್ತಡ ತರಲು ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚಿಸಲಾಯಿತು.

ನೌಕರರನ್ನು ಬೀದಿಪಾಲಾಗಲು ಬಿಡುವುದಿಲ್ಲ

ಪ್ರಸ್ತಾವಿತ ಭಾಷಣ ಮಾಡಿದ ಗ್ರಾಮ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ವಿ.ಪಿ.ಕುಲಕರ್ಣಿ ಯವರು "ಹಲವು ವರ್ಷಗಳಿಂದ ಅಸಂಘಟಿತರಾಗಿಯೇ ಉಳಿದಿದ್ದ ಗ್ರಾಮ ಪಂಚಾಯತ್ ನೌಕರರನ್ನು ಸಂಘಟಿಸುವಲ್ಲಿ ಸಂಘವು ಮಹತ್ತರ ಪಾತ್ರ ವಹಿಸಿದೆ. ನಗರಗಳಲ್ಲಿ ಪುರಸಭೆ ನೌಕರರು ಕಾರ್ಯ ನಿರ್ವಹಿಸುವುದಕ್ಕೆ ಸರಿಸಮನಾಗಿ ಗ್ರಾಮೀಣ ಪ್ರದೇಶದಲ್ಲಿ ಕರ ವಸೂಲಿ ಮಾಡುವುದರಿಂದ ಹಿಡಿದು ಸಂಪೂರ್ಣ ಗ್ರಾಮೀಣಾಭಿವೃದ್ಧಿ ಕಾರ್ಯದಲ್ಲಿ ಪಂಚಾಯತ್ ನೌಕರರ ಪಾತ್ರ ಗಣನೀಯ. ಸರ್ಕಾರವು ಇಂತಹ ಸೇವೆಯಲ್ಲಿ ತೊಡಗಿರುವ ನೌಕರರಿಗೆ ಸರ್ಕಾರಿ ಸೌಲಭ್ಯಗಳನ್ನೊದಗಿಸುವ ಬಗ್ಗೆ ಚಿಂತಿಸುವ ಬದಲು ಕರ ವಸೂಲಿ ಕೆಲಸವನ್ನು ಸ್ತ್ರೀಶಕ್ತಿ ಸರ್ಕಾರೇತರ ಸಂಘಗಳಿಗೆ ಹೊರಗುತ್ತಿಗೆ ನೀಡುವ ಆದೇಶ ಹೊರಡಿಸಿ ಪಂಚಾಯತ್ ನೌಕರರನ್ನು ಬೀದಿಪಾಲು ಮಾಡುವ ಹುನ್ನಾರ ಮಾಡುತ್ತಿದೆ" ಎಂದು ತಿಳಿಸಿದರು.

ಆಳುವವರ ಕುಟಿಲೋಪಾಯಗಳ ಬಗ್ಗೆ ಎಚ್ಚರ

ಸಮ್ಮೇಳನ ಉದ್ಘಾಟಿಸಿದ ಡಬ್ಲ್ಯ್ಯು.ಆರ್. ವರದರಾಜನ್‌ರವರು ಮಾತನಾಡಿ "ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರೊಡನೆ ಸತ್ಯಾಗ್ರಹ ಮಾಡದಿದ್ದವರು ಇಂದು ರಾಜಕೀಯ ಲಾಭಕ್ಕಾಗಿ ಬಾವುಟದ ಹೆಸರಿನಲ್ಲಿ ಕರ್ನಾಟಕ ಬೀದಿಗಳಲ್ಲಿ ಸತ್ಯಾಗ್ರಹ ಮಾಡ್ತಿದ್ದಾರೆ. ದೇಶದ ಜನತೆ ಕರ್ನಾಟಕ ಮತ್ತು ಕೇಂದ್ರಗಳೆರಡೂ ಕಡೆ ಬಿಜೆಪಿಗೆ ಸೋಲುಣ್ಣಿಸಿ 'ಸೋನಿಯಾ-ವಿರೋಧಿ ಕಾರ್ಯಸೂಚಿ ಬೇಡ, ನಮ್ಮ ಕಾರ್ಯಸೂಚಿ ಏನಿದ್ದರೂ ಜಾತ್ಯಾತೀತತೆ ಮಾತ್ರ' ಎಂದು ಸರಿಯಾಗಿಯೇ ಪಾಠ ಕಲಿಸಿದ್ದಾರೆ. ದೇಶದ ಬಡವರು, ಕೂಲಿಕಾರರು, ಕಾರ್ಮಿಕರು, ರೈತರು ಮತ್ತು ಎಲ್ಲ ಹಿಂದುಳಿದ ಜನರು ಬಿಜೆಪಿಯನ್ನು ಹೊರದಬ್ಬಿ ಯುಪಿಎ ಸರ್ಕಾರವನ್ನು ಅಧಿಕಾರದ ಗದ್ದುಗೆಗೇರಿಸಿರುವುದು ಬರೇ ಜಾತ್ಯಾತೀತತೆ ಮತ್ತು ಕೋಮುವಾದಿ ದೃಷ್ಟಿಯಿಂದ ಮಾತ್ರವಲ್ಲ ಬಿಜೆಪಿ ಜಾರಿ ಮಾಡಿದ ವಿಶ್ವಬ್ಯಾಂಕ್ - ಬೆಂಬಲಿತ ಜನವಿರೋಧಿ ಆರ್ಥಿಕ ನೀತಿಗಳನ್ನು ಸಹ ಬದಲಿಸಲೆಂದು ಪ್ರಸಕ್ತ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದು 100 ದಿನಗಳಾದರೂ ಸಹ ಕನಿಷ್ಟ ಸಾಮಾನ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸದೆ



'ಸಂಘರ್ಷವೊಂದೇ ಪರಿಹಾರ'
ಕಾಂ. ವಿ.ಜೆ.ಕೆ.ನಾಯರ್

ಬಂಡವಾಳಶಾಹಿಪರ ಧೋರಣೆಗಳನ್ನು ಅನುಸರಿಸುತ್ತಿದೆ. ಸಿಐಟಿಯುನ ಬೇಡಿಕೆಗಳಾದ ಕನಿಷ್ಟ ವೇತನಕ್ಕಾಗಿ ಕೃಷಿ ಕೂಲಿಕಾರರ ಕಾಯಿದೆ, 37 ಕೋಟಿ ಬಡಜನತೆಯ ಭದ್ರತೆಗಾಗಿ ಅಸಂಘಟಿತ ಕಾರ್ಮಿಕರ ಕಾಯಿದೆಗಳನ್ನು ರಚಿಸದಿದ್ದರೂ ಸಹ ಈ ಒತ್ತಾಯಕ್ಕೆ ಮಣಿದು ಹಿಂದಿನ ಎನ್‌ಡಿಎ ಸರ್ಕಾರ ಕಾರ್ಮಿಕ ಆಯೋಗದ ಅಧ್ಯಯನ ಗುಂಪು ಶಿಫಾರಸು ಮಾಡಿದ ಕನಿಷ್ಟ ವೇತನವನ್ನು ಜಾರಿಗೊಳಿಸುವುದು ಪ್ರಾಯೋಗಿಕವಲ್ಲ ಎಂದು ನುಣುಚಿಕೊಂಡಿತು. ಇಂದಿನ ಯುಪಿಎ ಸರ್ಕಾರ ಸಹ ಭವಿಷ್ಯ ನಿಧಿಯ ಮೇಲಿನ ಬಡ್ಡಿದರವನ್ನು ತೀವ್ರವಾಗಿ ಕೆಳಗಿಳಿಸಿ ದುಡಿಯುವ ವರ್ಗಕ್ಕೆ ಕಂಟಕಪ್ರಾಯವಾಗಿದೆ. ಉದ್ಯಮಿಗಳ ಹಿಂದೆ ಬಿದ್ದು ಸಾಲ ನೀಡುವ ಬ್ಯಾಂಕುಗಳು ರೈತರಿಗೆ ಮತ್ತು ಬಡವರಿಗೆ ಏನೂ ನೀಡುವುದಿಲ್ಲ. ಗ್ರಾಮ ಪಂಚಾಯತ್ ನೌಕರರ ಸಂಘ ರಾಜ್ಯ ಸರ್ಕಾರದ ಕುಟಿಲೋಪಾಯಗಳನ್ನು ಚೆನ್ನಾಗಿ ಗುರುತಿಸಿದೆ. ಈ ನೌಕರರ ಕನಿಷ್ಟ ವೇತನದ ಬಗ್ಗೆ, ಸಾಮಾಜಿಕ ಭದ್ರತೆ, ಸರ್ಕಾರಿ ನೌಕರರ ಸೌಲಭ್ಯಗಳಿಗಾಗಿ ಸಂಘವು ನಡೆಸುವ ಎಲ್ಲಾ ಹೋರಾಟಕ್ಕೂ ಸಿಐಟಿಯು ಬೆಂಬಲ ನೀಡುತ್ತದೆ. ಸಂಘಟನೆಗಳ ಮೂಲಕ, ಚಳುವಳಿ ಮತ್ತು ಹೋರಾಟಗಳ ಮೂಲಕವೇ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯ. ಇಂದಿನ ಸಭೆ ಹೋರಾಟದ ರೂಪುರೇಷೆಗಳನ್ನು ರಚಿಸಲಿ ಎಂದು ಆಶಿಸಿದರು. ಇಂದು ಪಂಚಾಯತ್ ನೌಕರರ ಕೆಲಸವನ್ನು ಹೊರಗುತ್ತಿಗೆ ನೀಡಿ ಎನ್ನುವ ಸರ್ಕಾರಗಳು ನಾಳೆ ಅಧಿಕಾರವನ್ನೂ ಸಹ ಹೊರಗುತ್ತಿಗೆಗೆ ನೀಡುತ್ತವೆ ಎಂದು ಕಟಕಿಯಾಡಿದರು.

ನೌಕರರ ಹಿತರಕ್ಷಣೆ ಭರವಸೆ:


ಸರ್ಕಾರದ ನೀತಿ, ಧೋರಣೆಗಳನ್ನು ಬಿಟ್ಟು ಮಾತನಾಡಲು ಸಾಧ್ಯವಾಗುವುದಿಲ್ಲವೆಂದು ಕಾರ್ಯದರ್ಶಿಗಳಾದ ಬಳಿಗಾರರು ಪಂಚಾಯತ್ ನೌಕರರಿಗೂ ಭವಿಷ್ಯನಿಧಿ, ಕಲ್ಯಾಣನಿಧಿ ಮತ್ತು ಯಶಸ್ವಿನಿ ಯೋಜನೆಗಳ ಲಾಭಗಳನ್ನು ತಲುಪಿಸೋಣವೆಂದು ಸ್ತ್ರೀಶಕ್ತಿಯನ್ನು ಕರ ವಸೂಲಿಗಾಗಿ ನೇಮಿಸಿದರೂ ಸಹ ಗ್ರಾಮ ಪಂಚಾಯತ್ ನೌಕರರನ್ನು ಉತ್ತಮವಾಗಿ ಕಾರ್ಯ ನಿರ್ವಹಿಸಿದಲ್ಲಿ ಕೆಲಸದಿಂದ ತೆಗೆಯಲಾಗುವುದಿಲ್ಲವೆಂದರು.

ರಾಜಕೀಯ ಇಚ್ಛೆ ಶಕ್ತಿ ಅಗತ್ಯ:

ಶಾಸಕರಾದ ಶ್ರೀರಾಮರೆಡ್ಡಿಯವರು ಮಾತನಾಡಿ 'ಯಾವುದೇ ಒಂದು ವರ್ಗದ ಬೇಡಿಕೆಗಳಿಗೂ ರಾಜಕೀಯ ಇಚ್ಛಾಶಕ್ತಿಗೂ ನಿಕಟ ಸಂಬಂಧವಿದೆ. ರಾಜಕೀಯ ಬೇಡವೆಂದು ದೂರ ಸರಿದರೆ ಬೇಡಿಕೆಗಳು ಅವಷ್ಟಕ್ಕೆ ಅವೇ ಈಡೇರುವುದಿಲ್ಲ' ಎಂದರು. ಹಿಂದಿನ ಎಸ್.ಎಂ.ಕೃಷ್ಣ ಸರ್ಕಾರ ವಿಧಾನಸಭೆಯಲ್ಲಿ ಸದ್ದಿಲ್ಲದೆ ತಿದ್ದುಪಡಿ ವಿಧೇಯಕ ಅಂಗೀಕರಿಸಿದ್ದರಿಂದ ಸ್ತ್ರೀಶಕ್ತಿ ಗುಂಪುಗಳು ಕರವಸೂಲಿ ಮಾಡುವ ಅಧಿಕಾರ ಪಡೆದಿದೆ. ಇದನ್ನು ಸರಿಪಡಿಸಬೇಕೆಂದರೆ ವಿಧಾನಸಭೆಯಲ್ಲಷ್ಟೇ ಸಾಧ್ಯವಿರುವುದರಿಂದ ಈಗಿನ 224 ಶಾಸಕರಲ್ಲಿ 223 ಮಂದಿಯೂ ದುಡಿವ ಜನರ ಪ್ರತಿನಿಧಿಗಳಲ್ಲದ್ದರಿಂದೆ ತಕ್ಷಣಕ್ಕೆ ನ್ಯಾಯ ಸಿಗುವುದು ಅಸಾಧ್ಯವೆಂದರು. ಇದಕ್ಕಾಗಿ ಜನರು ಪ್ರಜ್ಞಾವಂತರಾಗಿ ಸಂಘಟಿತರಾಗಿ ರಾಜಕೀಯ ಶಕ್ತಿಯಾಗಿ ಬೆಳೆಯಬೇಕು ಎಂದರಲ್ಲದೆ ನೌಕರರ ಹಿತಗಳಿಗಾಗಿ ಶ್ರಮಿಸುವುದಾಗಿ ತಿಳಿಸಿದರು.

ಸಿಐಟಿಯುನ/ ನಾಯಕರಾದ ವಿ.ಜೆ... ನಾಯರ್‌ರವರು "ಕೇರಳ ಮತ್ತು ಪಶ್ಚಿ... ಬಂಗಾಳದಲ್ಲಿ ಕಾರ್ಮಿಕ ವರ್ಗ ಸಂಘಟಿತರಾಗಿ... ವುದರಿಂದ ಇತರೆ ರಾಜ್ಯಗಳಂತೆ ಪರಿಸ್ಥಿತಿ ... ಉಲ್ಬಣಗೊಂಡಿಲ್ಲ. ಅಲ್ಲಿನ ಕಾರ್ಮಿ... ವರ್ಗವೇನಿದ್ದರೂ ಕೇಂದ್ರ ಸರ್ಕಾರದ ನೀತಿ... ವಿರುದ್ಧ ಮಾತ್ರ ಸೆಣಸಬೇಕಿದೆ. ಆದರೆ ಬಹುಪಾ... ಉಳಿದ ರಾಜ್ಯಗಳಲ್ಲಿ ಕಾರ್ಮಿಕ ವರ್ಗವು ರಾ... ಮತ್ತು ಕೇಂದ್ರ ಸರ್ಕಾರಗಳೆರಡರ ವಿರುದ್ಧ... ಹೋರಾಡಬೇಕಿದೆ" ಎಂದರು. ಸಂಘ... ಅಧ್ಯಕ್ಷರಾದ ಮಾರುತಿ ಮಾನ್ವಡೆಯವರು ಸಂಘ... ಉದ್ದೇಶಗಳು, ಸಮಿತಿ ರಚನೆ, ತಾಲೂ... ಪ್ರತಿನಿಧಿಗಳ ಆಯ್ಕೆ ಮತ್ತು ಮುಂದಿನ ಹೋರಾ... ಸ್ವರೂಪವನ್ನು ಎಲ್ಲ ನೌಕರರಿಗೂ ತಿಳಿಸಿದ... ನೌಕರರು ಬಹಳ ಉತ್ಸುಕತೆಯಿಂದ ಮುಂ... ಬೇಡಿಕೆ ಹೊತ್ತ ಹೋರಾಟದ ಹಾದಿಯ ... ಚರ್ಚಿಸಿದರು.

● ಜ...



ನಿರೀಕ್ಷೆಗೆ ಮೀರಿ ಉತ್ಸಾಹದಿಂದ ಪಾಲ್ಗೊಂಡ ಪ್ರತಿನಿಧಿಗಳು

ಸಮ್ಮೇಳನದಲ್ಲಿ ಆಯ್ಕೆಯಾದ ನೂತನ ಸಮಿತಿ

ಅಧ್ಯಕ್ಷರು **ಮಾರುತಿ ಮಾನವ...**
ಪ್ರಧಾನ ಕಾರ್ಯದರ್ಶಿ **ಎಂ.ಬಿ.ನಾಡಗೌ...**
ಖಜಾಂಚಿ **ವ್ಹಿ.ಪಿ.ಕುಲಕರ್ಣಿ**

ಉಪಾಧ್ಯಕ್ಷರು : 1. ಭೀಮಸಿಕಲಾದ... ಬಿಜಾಪುರ. 2. ಗೋಪಾಲಕೃಷ್ಣ ಅರಳಹ... ಬೆಂಗಳೂರು 3. ನಾರಾಯಣ ಸ್ವಾಮಿ... ಕೋಲಾರ 4. ರಾಮಕೃಷ್ಣ.ಜಿ, ಮಂಡ್ಯ ... ಯಾದವಶೆಟ್ಟಿ.ಕೆ, ದ.ಕ. 6. ಪದ್ಮಾವ... ರಾಯಚೂರು 8. ಅಂಬವ್ವ ಗುಲ್ಬರ್ಗಾ ... ರಮೇಶ ಗೌಡಗೇರಿ, ಹಾವೇರಿ 1... ಗುರುಶಾಂತ ಬಿರದಾರ, ಬಿದರ 11. ಬೈರ... ದಾವಣಗೇರೆ 12. ಗಣಪತಿ ಕೇಶವಭಾಗವ... ಉ.ಕ.

ಸಹ ಕಾರ್ಯದರ್ಶಿಗಳು : ... ಅಲ್ಲಾಬಕಾಷ್, ತುಮಕೂರು 2. ಗೈಬುಸಾ... ಬೆಳಗಾಂ 3. ಧರ್ಮೇಶ್, ಹಾಸನ ... ಎಸ್.ವೈ. ಕುಂಬಾರ, ಗದಗ 5. ಎಸ್.ಎ... ಜೀವಣ್ಣನವರ, ಧಾರವಾಡ 6. ... ಬೆಂಗಳೂರು 7. ರಮೇಶ್ ಎಸ್... ಚಿತ್ರದುರ್ಗ 8. ಆರ್.ಎಸ್.ಬಸವರಾ... ಬಳ್ಳಾರಿ 9. ಮಂಜೂರ ಪಟೇಲ್ ... ಮಂಜುಳಾ, ತುಮಕೂರು 11. ಕೆ.ರವೀಂ... ಕೊಪ್ಪಳ 12. ಕೆ.ನಾರಾಯ... ರಾಯಚೂರು.

ನ್ಯಾಯಾಲಯದ ಮೆಟ್ಟಿಲೇರಿ ಬಸವಳಿವ ಜನಸಾಮಾನ್ಯರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ.ಬಂಗಾಳ ಸರ್ಕಾರ ತರುತ್ತಿರುವ ಮಸೂದೆ ನ್ಯಾಯದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಮಹತ್ವದ ಹೆಜ್ಜೆಯಾಗಿದೆ.

ಹೊಸ ಸನ್ನಿವೇಶದಲ್ಲಿ ಸಕಾರಾತ್ಮಕವಾಗಿ ಬಲಗೊಳಿಸಿ ಜಾರಿಗೆ ತರಲು ಅಲ್ಲಿನ ಸರ್ಕಾರ ಯೋಜನೆ ರೂಪಿಸಿದೆ. ನ್ಯಾಯಾಲಯದ ಮೆಟ್ಟಿಲು ತುಳಿಯಬೇಕಾದಲ್ಲಿ ಬಹುತೇಕ ಜನರಿಗೆ ಆರ್ಥಿಕ ಸಬಲತೆ ಇರುವುದಿಲ್ಲ. ಈ ವಿಭಾಗದ ಅನುಕೂಲತೆಗಾಗಿ 'ಮೊಕದ್ದಮೆ ಪೂರ್ವ ಸಂಧಾನ ಮಸೂದೆ-2004' ಜಾರಿಗೆ ತರಲು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಪ್ರಯತ್ನಿಸುತ್ತಿದೆ.

ಗಳಲ್ಲಿ ಮೊಕದ್ದಮೆಗಳ ಸಂಖ್ಯೆ ಕಡಿಮೆಯಾಗಿ ತಮ್ಮ ಆದಾಯಕ್ಕೆ ಕುಂದುಬರುತ್ತದೆ ಎಂಬುದು ವಕೀಲರ ಆತಂಕ. ಇದು ಹುರುಳಿಲ್ಲದ ಆತಂಕ. ಏಕೆಂದರೆ ಸಂಧಾನ ಪ್ರಕ್ರಿಯೆಗಳಲ್ಲಿ ವಕೀಲರು ಪ್ರತಿನಿಧಿಸಬಹುದು ಎಂದು ಮಸೂದೆ ಹೇಳುತ್ತದೆ. ಒಂದು ವೇಳೆ 'ಸಂಧಾನ'ದ ಮೂಲಕ ಸಮಸ್ಯೆ ಬಗೆಹರಿಯದೆ ಹೋದಲ್ಲಿ ವಿವಿಧ ಹಂತದ ನ್ಯಾಯಾಲಯಗಳಿಗೆ ಅಪೀಲು ಮಾಡುವ ಅವಕಾಶ

ಅಲ್ಲದೆ ಈಗಿರುವ ನ್ಯಾಯಾಲಯಗಳು ನಗರ ಮತ್ತು ಪಟ್ಟಣ ಕೇಂದ್ರಿತ. ತಾಲ್ಲೂಕು ಮಟ್ಟಕ್ಕಿಂತ ಕೆಳಗಡೆ ನ್ಯಾಯಲಯಗಳಲ್ಲಿ ಗ್ರಾಮೀಣ ಪ್ರದೇಶದ ಸಾಮಾನ್ಯ ರೈತನೊಬ್ಬ ನ್ಯಾಯಾಲಯದ ಕಟ್ಟೆ ಹತ್ತಬೇಕೆಂದರೆ, ಸಾರಿಗೆ ವೆಚ್ಚ, ನ್ಯಾಯಾಲಯಕ್ಕೆ ಸಂಬಂಧ ಪಟ್ಟ ಖರ್ಚು, ಉಳಿಕೊಳ್ಳುವ ಮತ್ತು ಊಟದ ಖರ್ಚು ಇತ್ಯಾದಿ ಒಟ್ಟು ಸೇರಿಸಿದರೆ, ಆ ರೈತನ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಅದರಲ್ಲೂ ನ್ಯಾಯ ದೊರಕುತ್ತದೆ ಎಂಬ ಭರವಸೆ ಇಲ್ಲ. ಎದುರಾಳಿ ಬಲಾಢ್ಯನಾದರೆ, ಕೆಳ ನ್ಯಾಯಾಲಯದಿಂದ ಮೇಲಿನ ನ್ಯಾಯಾಲಯಕ್ಕೆ ಅಪೀಲು ಮಾಡುತ್ತಾನೆ. ಆ ಖರ್ಚನ್ನು ಭರಿಸುವುದು ರೈತನಿಗೆ ಸಾಧ್ಯವಿಲ್ಲದ ಮಾತು. ಮಾತ್ರವಲ್ಲ, ದೀರ್ಘಾವಧಿವರೆಗೆ ನ್ಯಾಯ ದೊರಕುವುದಿಲ್ಲ.

ಪಶ್ಚಿಮ ಬಂಗಾಳದಲ್ಲೊಂದು ಪ್ರಯೋಗ

ಕೋರ್ಟಿನ ಮೆಟ್ಟಿಲೇರುವ ಮುನ್ನ ಸಂಧಾನಕ್ಕೆ ಯತ್ನ

ದೇಶದಾದ್ಯಂತ ಆಗಸ್ಟ್ 3 ರ ಪತ್ರಿಕೆಗಳಲ್ಲಿ ಬಂಗಾಳ ಬಂದ್ ಯಶಸ್ವಿ ಎಂದು ಕೆಲವರು ಬಣ್ಣಿಸಿದರೆ, ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ಎಂದು ಹಲವು ಪತ್ರಿಕೆಗಳು ವರದಿ ಮಾಡಿದ್ದವು. ಆದರೆ ಈ 'ಬಂದ್' ಪರ ಮತ್ತು ವಿರೋಧದಲ್ಲಿ ಅಡಗಿರುವ ಸಮಸ್ಯೆ ಯಾವುದು ಎಂಬುದನ್ನು ಬಹುತೇಕ ಪತ್ರಿಕೆಗಳು ಚರ್ಚಿಸಿಲ್ಲ.


27 ವರ್ಷಗಳಿಂದ ಸತತವಾಗಿ ಅಧಿಕಾರದಲ್ಲಿರುವ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು 'ಮೊಕದ್ದಮೆ ಪೂರ್ವ ಸಂಧಾನ ಮಸೂದೆ-2004 (Pre-letigation conciliation Bill-2004) ನ್ನು ಅಲ್ಲಿನ ವಿಧಾನಸಭೆಯಲ್ಲಿ ಮಂಡಿಸಿತ್ತು. ಅದನ್ನು ಕಾಂಗ್ರೆಸ್ ಶಾಸಕರೇ ಅಧ್ಯಕ್ಷರಾಗಿರುವ ಸ್ಥಾಯಿ ಸಮಿತಿಯಲ್ಲಿ ಚರ್ಚಿಸಿ, ಅದರ ಅಭಿಪ್ರಾಯವನ್ನು ಪಡೆಯುವ ಮೊದಲೇ ಮಮತಾ ಬ್ಯಾನರ್ಜಿ ನೇತೃತ್ವದ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ ಈ ಮಸೂದೆಯ ವಿರುದ್ಧ ಬಂದ್ ಕರೆ ನೀಡಿತ್ತು. ಇದೊಂದು ಜನವಿರೋಧಿ ಮಸೂದೆ ಎಂದು ಬಣ್ಣಿಸಿತ್ತು. ಆದರೆ ಸರಿಯಾಗಿ ವಿಶ್ಲೇಷಿಸಿದರೆ ಗ್ರಾಮೀಣ ಮತ್ತು ನಗರ ಪ್ರದೇಶದ ಬಡ ಜನರಿಗೆ ನ್ಯಾಯ ದೊರಕಿಸಿ ಕೊಡುವತ್ತ, ಮಹತ್ವದ ಹೆಜ್ಜೆ ಈ ಮಸೂದೆ ಎಂಬುದು ಅರ್ಥವಾಗುತ್ತದೆ.

ಮೊಕದ್ದಮೆ ಪೂರ್ವ ಸಂಧಾನ ಮಸೂದೆ ಎಂದರೇನು? ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ನಡೆದು ಬಂದ ಒಂದು ಪದ್ಧತಿ ಏನೆಂದರೆ 'ಪಂಚಾಯತಿ ಕಟ್ಟೆ'ಗಳ ಮೂಲಕ ತಮ್ಮ ಗ್ರಾಮದ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ವಿಧಾನ. ಈ ಪರಿಕಲ್ಪನೆಯ ರಾಜಿ ಸಂಧಾನದ ವ್ಯವಸ್ಥೆಯನ್ನು

ಅಂದರೆ ನ್ಯಾಯಾಲಯದಲ್ಲಿ ಯಾವುದೇ ಮೊಕದ್ದಮೆಗಳನ್ನು ಹೂಡುವ ಮೊದಲು, ಸಂಧಾನ ಪ್ರಕ್ರಿಯೆಗಳಲ್ಲಿ ಭಾಗವಹಿಸಿ ಅದನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸುವುದು. ಕೈಗಾರಿಕಾ ವಿವಾದ ಕಾನೂನಿನ ಅಡಿಯಲ್ಲಿ ಕಾರ್ಮಿಕರಿಗೆ ಇಂತಹ ಒಂದು ವ್ಯವಸ್ಥೆ ಈಗಾಗಲೇ ದೊರತಿದೆ. ಇದರಿಂದ ಮೊಕದ್ದಮೆ ಹೂಡಲು ಬೇಕಾದ ವೆಚ್ಚವನ್ನು ಕಡಿಮೆ ಮಾಡುವುದು ಮಾತ್ರವಲ್ಲದೆ ವಿವಾದಗಳ ಸಂಖ್ಯೆಯನ್ನು ಕಡಿತಗೊಳಿಸಲು ಸಾಧ್ಯವಿದೆ.

ಕಾರ್ಮಿಕ ನ್ಯಾಯಾಲಯಗಳು ಅನುಸರಿಸುವ ರಾಜಿ ಪ್ರಕ್ರಿಯೆಗಳು ಕೂಡಾ ನಗರ ಕೇಂದ್ರೀಕೃತವಾಗಿವೆ. ಆದರೆ ಪಶ್ಚಿಮ ಬಂಗಾಳದ ಸರ್ಕಾರವು ತರಲು ಉದ್ದೇಶಿಸಿರುವ ಮಸೂದೆ ಪ್ರಕಾರ ಹೋಬಳಿ ಮಟ್ಟದವರೆಗೂ (Block level) ಅಂತಹ ನ್ಯಾಯಾಲಯಗಳು ಇರುತ್ತವೆ.

ದೇಶದಾದ್ಯಂತ ವಿವಿಧ ನ್ಯಾಯಾಲಯಗಳಲ್ಲಿ



ಜನರ ಕೈಗೆ ಅಧಿಕಾರ - ಸಾಕಾರ

2 ಕೋಟಿ ಮೊಕದ್ದಮೆಗಳು ಇತ್ಯರ್ಥವಾಗದೇ ಉಳಿದಿವೆ. ಅದರಲ್ಲಿ ಬಂಗಾಳದ ಪಾಲು 15 ಲಕ್ಷ. ಇಷ್ಟೊಂದು ಮೊಕದ್ದಮೆಗಳ ಬಾಕಿಯಿಂದಾಗಿ ಹಾಗೂ ವ್ಯವಸ್ಥೆಯಲ್ಲಿನ ದೋಷಗಳಿಂದ ತೀರ್ಪು ನೀಡುವಲ್ಲಿ ನಿಧಾನವಾಗುತ್ತದೆ. ನ್ಯಾಯ ಸಿಗುವುದು ನಿಧಾನವಾದರೆ, ನ್ಯಾಯವನ್ನು ಅಲ್ಲಗಳೆದಂತೆಯೇ.

ವಕೀಲರ ಆತಂಕ? : ಪಶ್ಚಿಮ ಬಂಗಾಳ ಸರ್ಕಾರವು ಜಾರಿಗೆ ತರಬೇಕೆಂದು ಉದ್ದೇಶಿಸಿರುವ ಮಸೂದೆಯನ್ನು ಕೇಂದ್ರ ಸರ್ಕಾರದ ಒಪ್ಪಿಗೆಗೆ ಕಳಿಸಿದ್ದು 2002 ರಲ್ಲಿ ಮತ್ತು ಒಪ್ಪಿಗೆ ನೀಡಿದ್ದು 2003 ರ ಡಿಸೆಂಬರ್ 26 ರಂದು ತೃಣಮೂಲ ಕಾಂಗ್ರೆಸ್ ಎನ್‌ಡಿಎ ನ ಭಾಗವಾಗಿದೆ. ಆಗ ಅದನ್ನು ವಿರೋಧ ಮಾಡದೆ, ಈಗ ವಿರೋಧ ಮಾಡುತ್ತಿರುವುದು ಅಪಹಾಸ್ಯ. ಈ ಮಸೂದೆಯ ವಿರುದ್ಧ ಹಲವಾರು ವಕೀಲರು ಆತಂಕ ವ್ಯಕ್ತಪಡಿಸಿದ್ದಾರೆ. ಇದು ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಬಲ ಬಂದಂತಾಗಿದೆ. ಉದ್ದೇಶಿತ ಮಸೂದೆಯಿಂದಾಗಿ ನ್ಯಾಯಾಲಯ

ಮಸೂದೆಯಲ್ಲಿದೆ. ಆದ್ದರಿಂದ ವಕೀಲ ಸಮುದಾಯ ಆತಂಕ ಪಡುವ ಅಗತ್ಯವಿಲ್ಲ.

ಇಲ್ಲಿ ಇನ್ನೊಂದು ಅಂಶ. ನ್ಯಾಯಾಲಯಗಳಲ್ಲಿ ಮೊಕದ್ದಮೆಗಳ ಸಂಖ್ಯೆ ಕಡಿಮೆ ಆದಲ್ಲಿ ಸಾಮಾಜಿಕ ಕಳಕಳಿಯುಳ್ಳವರು ಸಂತೋಷಪಡಬೇಕು.

ಅಷ್ಟಕ್ಕೂ ಭಾರತದಲ್ಲಿ ನ್ಯಾಯಾಲಯದ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಜನಸಂಖ್ಯೆ ಕೇವಲ 0.17 ಶೇ ಮಾತ್ರ. ಅಂದರೆ ವಿವಾದವಿರುವ ಎಲ್ಲಾ ಜನರು ನ್ಯಾಯಾಲಯಗಳಿಗೆ ಮೊರೆ ಹೋಗುತ್ತಿಲ್ಲ. ಬದಲಾಗಿ ವಿವಾದಗಳು ಬಗೆಹರಿಯುತ್ತದೆ ಎಂಬ ಮನವರಿಕೆ ಜನರಿಗೆ ಆದಲ್ಲಿ ಇನ್ನಷ್ಟು ಜಾಸ್ತಿ ಜನರು ನ್ಯಾಯಾಲಯಗಳಿಗೆ ಸ್ಪಂದಿಸುತ್ತಾರೆ. ವಕೀಲರ ಆತಂಕ ದೂರವಾಗುತ್ತದೆ.

ಗ್ರಾಮ ರಾಜ್ಯದ ಕಲ್ಪನೆ : 'ಗ್ರಾಮ ರಾಜ್ಯವೇ ರಾಮರಾಜ್ಯ' ಎಂಬುದು ಮಹಾತ್ಮಗಾಂಧಿಯವರ ಕನಸು. ದೇವಸ್ಥಾನ ಕಟ್ಟಿದರೆ ಮಾತ್ರ ರಾಮರಾಜ್ಯ ಸ್ಥಾಪನೆ ಸಾಧ್ಯ ಎಂದು ಕೋಮುವಾದಿಗಳ ಕೂಗು. ಅಧಿಕಾರದ ವಿಕೇಂದ್ರೀಕರಣವೇ ಗ್ರಾಮ ರಾಜ್ಯದ ಕಲ್ಪನೆಗೆ ಪೂರಕ ಹಾಗೂ ಆ ಮೂಲಕ ಜನ ಸಾಮಾನ್ಯರಿಗೂ ನ್ಯಾಯವನ್ನು ಒದಗಿಸುವ ಹಂತಕ್ಕೆ ಕೊಂಡೊಯ್ಯಲು ಸಾಧ್ಯ.

ಪಶ್ಚಿಮ ಬಂಗಾಳದಲ್ಲಿ ಬಹುತೇಕ ಆರ್ಥಿಕ ಚಟುವಟಿಕೆಗಳು ಸ್ಥಳೀಯ ಸಂಸ್ಥೆಗಳ ಕೈಗೆ ದೊರಕಿವೆ. ಅಲ್ಲಿ ಗ್ರಾಮೀಣ ಅಭಿವೃದ್ಧಿಗೆ ಯೋಜನೆಯ ಶೇ 50 ರಷ್ಟನ್ನು ಮೀಸಲಾಗಿಟ್ಟಿದ್ದಾರೆ. ಆರ್ಥಿಕ ಚಟುವಟಿಕೆಗಳು ಗ್ರಾಮೀಣ ಮಟ್ಟಕ್ಕೆ ವಿಸ್ತರಿಸಿದ್ದರೂ, 8 ಕೋಟಿ ಜನಸಂಖ್ಯೆ ಹೊಂದಿರುವ ಬಂಗಾಳದಲ್ಲಿ ದೇಶದ ಎಲ್ಲೆಡೆ ಇರುವಂತೆ ಆರ್ಥಿಕ ಅಸಮಾನತೆ ಮುಂದುವರಿದೇ ಇದೆ. 27 ವರ್ಷಗಳಿಂದ ಎಡರಂಗ ಸರ್ಕಾರ ಅಧಿಕಾರದಲ್ಲಿದ್ದರೂ ರಾಜ್ಯ ಸರ್ಕಾರಗಳಿಗೆ ಇರುವ ಸೀಮಿತ ಅಧಿಕಾರದಲ್ಲಿ ಪಟ್ಟಭದ್ರ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ಮಟ್ಟ ಹಾಕಲು ಸಾಧ್ಯವಾಗಿಲ್ಲ. ಇಡೀ ದೇಶದಲ್ಲಿ ಬೃಹತ್ತಾದ ಜನ ಚಳುವಳಿಯಿಂದ ಮಾತ್ರವೇ ಇಂತಹ ಬದಲಾವಣೆ ಸಾಧ್ಯ. ಅಧಿಕಾರ ವಿಕೇಂದ್ರೀಕರಣ ನಡೆದು ಹಲವಾರು ಸ್ಥಳೀಯ ಸಂಸ್ಥೆಗಳಲ್ಲಿ ಎಡಪಕ್ಷಗಳೇ ಅಧಿಕಾರದಲ್ಲಿದ್ದರೂ ಭಾರತದ ಸಂವಿಧಾನದಲ್ಲಿ ಅಡಕವಾಗಿರುವ ಆಸ್ತಿ ಹಕ್ಕಿನ ಭಾಗವಾಗಿ ಬಂಡವಾಳಶಾಹಿ - ಭೂಮಾಲಕ ಶೋಷಣಾ ವ್ಯವಸ್ಥೆ ಮುಂದುವರೆದಿದೆ.

27 ವರ್ಷಗಳಿಂದ ರಾಜ್ಯದಲ್ಲಿ ಎಡರಂಗ ಸರ್ಕಾರ ಆಡಳಿತ ನಡೆಸುತ್ತಿದ್ದರೂ 5000 ಕೋಟಿ ರೂ. ಆಸ್ತಿ ಹೊಂದಿರುವ ಒಂದು ಬಿರ್ಲಾ ಕುಟುಂಬ ಕಲ್ಕತ್ತದಲ್ಲೇ ವಾಸವಾಗಿತ್ತು. ಆ ಕುಟುಂಬದೊಂದಿಗೆ ತನಗೆ ನಿಕಟ ಸಂಪರ್ಕವಿರುವುದರಿಂದ 'ವಿಲ್' ಕುರಿತ ಮೊಕದ್ದಮೆ ತನ್ನ ನ್ಯಾಯಾಲಯದಲ್ಲಿ ಬೇಡ ಎಂದು ಇತ್ತೀಚಿಗೆ ನ್ಯಾಯಾಧೀಶರೊಬ್ಬರು ಹೇಳಿರುವುದು ಸದ್ಯದ ಒಂದು ಮುಖವನ್ನು ತೋರಿಸುತ್ತದೆ.

ಪಶ್ಚಿಮ ಬಂಗಾಳದಲ್ಲಿ ಬಹುತೇಕ ಕೃಷಿಕೂಲಿಕಾರರು, ಸಣ್ಣ ಮಧ್ಯಮ ರೈತರು, ಕಾರ್ಮಿಕ ಪ್ರತಿನಿಧಿಗಳು, ಮಹಿಳೆಯರು, ಶಿಕ್ಷಕರು, ಶೋಷಿತರ ಪರವಾಗಿ ಚಿಂತಿಸುವ ಮಧ್ಯಮ ವರ್ಗದವರು ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾಗಿರುತ್ತಾರೆ. ಆದ್ದರಿಂದ ಅಲ್ಲಿನ ಜನಪ್ರತಿನಿಧಿಗಳು ಆಲೋಚನೆ ಮಾಡುವ ವಿಧಾನವೇ ಭಿನ್ನವಾಗಿರುತ್ತದೆ. ಅದು ಸಾಮಾನ್ಯ ಜನರ ಪರವಾಗಿರುತ್ತದೆ.

ಕೆಲವೊಂದು ಸ್ಥಳೀಯ ಸಂಸ್ಥೆಗಳು ಪಟ್ಟಭದ್ರ ಹಿತಾಸಕ್ತಿಗಳ ಆಡಳಿತದಲ್ಲಿದ್ದರೂ, ಅವರನ್ನು ಪ್ರಬಲವಾಗಿ ಪ್ರಶ್ನಿಸುವ ಚಳುವಳಿಯಿಂದಾಗಿ, ಅವರ ಆಟ ಅಷ್ಟಾಗಿ ನಡೆಯುವುದಿಲ್ಲ.

ಈ ನಿಟ್ಟಿನಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ, ಮೊಕದ್ದಮೆ ಪೂರ್ವ ಸಂಧಾನ ಮಸೂದೆ ಸ್ವಾಗತಾರ್ಹ ಹೆಜ್ಜೆ.

- ಬಾಲಕೃಷ್ಣ ಶೆಟ್ಟಿ

ಮಮತಾ ಬ್ಯಾನರ್ಜಿ ವಿರೋಧ

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ (ಐ) ಪಕ್ಷವು ಈ ಮಸೂದೆಯನ್ನು ವಿರೋಧಿಸಿವೆ. ಈ ಪಕ್ಷಗಳು ಬೇರೆ ಬೇರೆ ಕಾರಣಗಳನ್ನು ನೀಡುತ್ತವಾದರೂ ಗ್ರಾಮೀಣ ಪ್ರದೇಶದ ಪಟ್ಟಭದ್ರ ಹಿತಾಸಕ್ತಿಗಳು ಈ ಪಕ್ಷಗಳ ಬೆಂಬಲಿಗರು. ಪಂ.ಬಂಗಾಳದಲ್ಲಿ ಜನಸಮೂಹದ ಪ್ರಬಲ ಪ್ರಗತಿಪರ ಚಳುವಳಿಗಳಿಂದಾಗಿ ಮತ್ತು ಆ ಮೂಲಕವಾಗಿ ಶೋಷಿತ ಸಮುದಾಯದ ಹಿತಾಸಕ್ತಿಯನ್ನು ಪ್ರತಿಪಾದಿಸುವ ಜನರೇ ಬಹುತೇಕ ಜನಪ್ರತಿನಿಧಿಗಳಾಗಿರುವುದರಿಂದ ಪಟ್ಟಭದ್ರ ಹಿತಾಸಕ್ತಿಗಳಿಗೆ ತಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ತಮ್ಮಲ್ಲಿರುವ ಆರ್ಥಿಕ ಬಲದಿಂದ, ಸಾಮಾಜಿಕ ಸಂಪರ್ಕಗಳಿಂದ ನ್ಯಾಯಾಲಯಗಳ ಮೂಲಕ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದರೆ 'ಮೊಕದ್ದಮೆ ಪೂರ್ವ ಸಂಧಾನ ಮಸೂದೆ' ಇಂತಹ ಪ್ರಯತ್ನಗಳಿಗೆ ಲಗಾಮು ಹಾಕಲಿದೆ.

ಸಂಧಾನ ಮಂಡಳಿ ರಚನೆ


ಮೂವರು ಸದಸ್ಯರಿರುವ ಸಂಧಾನ ಮಂಡಳಿಯನ್ನು ಅಲ್ಲಿನ ಪಂಚಾಯತ್ ಸಮಿತಿ ಪಶ್ಚಿಮ ಬಂಗಾಳ ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಚರ್ಚಿಸಿ ರಚಿಸುತ್ತದೆ (ಪಂಚಾಯತ್ ಸಮಿತಿ ಎಂದರೆ, ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ನಡುವಣ ಪ್ರಾದೇಶಿಕ ಮಟ್ಟದ ಸಮಿತಿ, ಕರ್ನಾಟಕದ ಹಿಂದಿನ ಮಂಡಲ ಪಂಚಾಯತ್‌ಗಳಿಗೆ ಹೋಲಿಸಬಹುದು)

ಸಂಧಾನ ಮಂಡಳಿಯ ಮೂವರು ಸದಸ್ಯರಲ್ಲಿ ಒಬ್ಬರು ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರಿರುತ್ತಾರೆ. ಅಧ್ಯಕ್ಷರಿಗೆ ಸಂಧಾನಕಾರ (Conciliation)ಎಂದು ಕರೆಯುತ್ತಾರೆ. ಇವರು ಆಯಾ ಪಂಚಾಯತ್ ಸಮಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ವಾಸವಾಗಿರುವ ಹೆಸರಾಂತ ಪ್ರಾಮಾಣಿಕ ವ್ಯಕ್ತಿಯಾಗಿರುತ್ತಾರೆ.

ಸದಸ್ಯರಿಬ್ಬರಲ್ಲಿ, ಒಬ್ಬರು ಆ ಪ್ರದೇಶದ ವಕೀಲರು ಹಾಗೂ ಇನ್ನೊಬ್ಬರು ಸಂಧಾನ ಪ್ರಕ್ರಿಯೆಯಲ್ಲಿ ಪರಿಣತರಾದ ಸಾಮಾಜಿಕ ಕಾರ್ಯಕರ್ತರು.

ಪಂಚಾಯತ್ ಸಮಿತಿಯು ಸಂಧಾನ ಮಂಡಳಿಯ ಸದಸ್ಯರಾಗಲು ಅರ್ಹತೆ ಉಳ್ಳವರ ಪಟ್ಟಿಯನ್ನು ತಯಾರಿಸುತ್ತದೆ ಮತ್ತು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಒಪ್ಪಿಗೆ ಪಡೆಯುತ್ತದೆ. ಸದಸ್ಯರ ಅವಧಿ 2 ವರ್ಷ. ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಒಂದೇ ಪಂಚಾಯತ್ ಸಮಿತಿಯ ಅಡಿಯಲ್ಲಿ, ಗ್ರಾಮ ಪಂಚಾಯತಿಗೊಂದರಂತೆ ಅಥವಾ 2-3 ಗ್ರಾಮ ಪಂಚಾಯತುಗಳನ್ನು ಸೇರಿಸಿ, ಒಂದಕ್ಕಿಂತ ಹೆಚ್ಚು ಸಂಧಾನ ಮಂಡಳಿಗಳನ್ನು ರಚಿಸುವ ಅವಕಾಶವಿದೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಕ್ಯೂಬಾ : ಜನಾರೋಗ್ಯ ವ್ಯವಸ್ಥೆ ಅಲ್ಲಿ - ಇಲ್ಲಿ

ಯಾವುದೇ ದೇಶದ ಆರೋಗ್ಯ ವ್ಯವಸ್ಥೆಯ ಸಾಧನೆಯನ್ನು ಅಳೆಯಬೇಕಾದರೆ ಅಲ್ಲಿನ ಜನಾರೋಗ್ಯ ವ್ಯವಸ್ಥೆಯ ಸಾಧನೆ ಹಾಗೂ ಸೌಲಭ್ಯಗಳು ಮುಖ್ಯವಾಗುತ್ತವೆ. ಸಾಮಾನ್ಯವಾಗಿ ಅಮೇರಿಕಾ ಹಾಗೂ ಮುಂದುವರೆದ ರಾಷ್ಟ್ರಗಳು ಆರೋಗ್ಯ ಸಾಧನೆಯಲ್ಲಿ ಮುಂದಿವೆ ಎಂಬುದು ಎಲ್ಲರ ನಂಬಿಕೆ. ಆದರೆ ಆರೋಗ್ಯ ಸಾಧನೆಯಲ್ಲಿ ದಿಟ್ಟಹೆಜ್ಜೆ ಇಟ್ಟು ಅದ್ಭುತ ಸಾಧಿಸಿರುವ ದೇಶ ಕ್ಯೂಬಾ.

ಜಗತಿನ ಅನೇಕ ರಾಷ್ಟ್ರಗಳಿಗೆ '2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ' ಎಂಬ ವಿಶ್ವಸಂಸ್ಥೆಯ ಘೋಷಣೆಯನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ. ಆದರೆ ಆರ್ಥಿಕ ದಿಗ್ಬಂದನ ಹಾಗೂ ಸಂಕಷ್ಟಗಳನ್ನು ಎದುರಿಸುತ್ತಿರುವ ಪುಟ್ಟ ದೇಶ ಆರೋಗ್ಯ ಕ್ಷೇತ್ರದಲ್ಲಿ ಮಹತ್ತರ ಸಾಧನೆಯನ್ನು ಮಾಡಿದೆ ಹಾಗೂ ಕೆಲವು ಕ್ಷೇತ್ರಗಳಲ್ಲಿ ವಿಶ್ವದಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದರೆ ಆಶ್ಚರ್ಯವಾಗಬಹುದು.

ಯಾವುದೇ ರಾಷ್ಟ್ರ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಜಾರಿಗೆ ತಂದಲ್ಲಿ ಜನಾರೋಗ್ಯ ಸಾಧಿಸಲು ಸಾಧ್ಯ ಎಂಬ ಸತ್ಯವನ್ನು ವಿಶ್ವ ಆರೋಗ್ಯ ಸಂಸ್ಥೆ 1978ರಲ್ಲಿ ಹೇಳಿದೆ. ಅದನ್ನು ಸಾಧಿಸಲು ಎಲ್ಲ ದೇಶಗಳಿಗೆ ಕೊಟ್ಟ ಕರೆಯೇ **ಆಲ್ಮಾ ಆಟ ಘೋಷಣೆ.** ಆದರೆ ಕ್ಯೂಬಾ 1959ರ ಕ್ರಾಂತಿಯ ನಂತರ ತನ್ನ ಆರೋಗ್ಯ ಕ್ಷೇತ್ರದ ಬಗ್ಗೆ ಕೆಲವು ಮೂಲಭೂತ ತೀರ್ಮಾನಗಳನ್ನು ತೆಗೆದುಕೊಂಡು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಜಾರಿ ಮಾಡಿ ಹಲವಾರು ದೇಶಗಳು ಸಾಧಿಸದ ಗುರಿಯನ್ನು ಇಸವಿ 2000ಕ್ಕಿಂತ ಮೊದಲೇ ಸಾಧಿಸಿ, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಯುನಿಸೆಫ್‌ನಿಂದ ಪ್ರಶಂಸೆಯನ್ನು ಪಡೆದಿದೆ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ವಿಶೇಷತೆ : ಈ ವ್ಯವಸ್ಥೆ ಸುಗಮವಾಗಿ ಕೆಲಸ ಮಾಡಲು ವೈದ್ಯರು, ಆರೋಗ್ಯ ಕೇಂದ್ರಗಳು, ಔಷಧಿಗಳು ಹಾಗೂ ಇವುಗಳಿಗೆ ಪೂರಕವಾಗುವ ದ್ವಿತೀಯ ಹಾಗೂ ತೃತೀಯ ಆರೋಗ್ಯ ವ್ಯವಸ್ಥೆ ಇರುವುದು ಅತ್ಯಗತ್ಯ. ಚಿಕಿತ್ಸೆಯನ್ನು ಸಮಾನತೆಯ ಆಧಾರದ ಮೇಲೆ, ಎಲ್ಲ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು. ಪ್ಚಿತವಾಗಿ ನೀಡಿದಾಗ ಮಾತ್ರ, ಅವ್ಯವಸ್ಥೆ ಪರಿಣಾಮಕಾರಿಯಾಗಲು ಸಾಧ್ಯ.

ಚಿಕಿತ್ಸಾ ಕೇಂದ್ರಗಳು ವ್ಯಾಪಕವಾಗಿವೆ. ಅಲ್ಲಿ ಎಲ್ಲರಿಗೂ ಯಾವುದೇ ತೊಂದರೆಗೂ ಉಚಿತ ಚಿಕಿತ್ಸೆ ದೊರಕುತ್ತದೆ. ಸುಮಾರು 150 ಕುಟುಂಬಗಳಿಗೆ ಒಬ್ಬ ವೈದ್ಯನನ್ನು ನೇಮಿಸಿರುತ್ತಾರೆ. ಅಂದರೆ ಒಬ್ಬ ವೈದ್ಯ 700ರಿಂದ 800 ಜನರ ಜವಾಬ್ದಾರಿ ಹೊತ್ತಿರುತ್ತಾನೆ. ಅವನ ಹತ್ತಿರ ಎಲ್ಲ ವ್ಯಕ್ತಿಗಳ ಆರೋಗ್ಯ ದಾಖಲೆ ಇರುತ್ತದೆ. ಈ ವೈದ್ಯ, ರೋಗ ಚಿಕಿತ್ಸೆಯಲ್ಲದೇ ರೋಗ ಪ್ರತಿಭಂದನೆ, ಹಾಗೂ ರೋಗ ಉಂಟಾಗಬಹುದಾದ ಸನ್ನಿವೇಶಗಳನ್ನು ಊಹಿಸಿ (anticipatory care) ಚಿಕಿತ್ಸೆ ನೀಡುತ್ತಾನೆ. ಅಗತ್ಯ ಬಿದ್ದರೆ ರೋಗಿಯ ಮನೆಗೆ ಹೋಗಿ, ಚಿಕಿತ್ಸೆ ನೀಡುತ್ತಾನೆ. ಈ ವೈದ್ಯ ಚಿಕಿತ್ಸೆ ಮಾಡಲು ಸಾಧ್ಯವಿಲ್ಲದಿದ್ದರೆ ಆಸ್ಪತ್ರೆ ವೈದ್ಯರ ಹತ್ತಿರ ರೋಗಿಯನ್ನು ಕಳುಹಿಸಿ ಚಿಕಿತ್ಸೆ ದೊರಕಿಸಿ ಕೊಡುತ್ತಾನೆ. ಅವನ ಸಹಾಯಕ್ಕೆ ಪ್ರಯೋಗಾಲಯಗಳು ಆಸ್ಪತ್ರೆಗಳು ಸದಾ ಸಿದ್ಧವಿರುತ್ತವೆ. ಅಲ್ಲಿಯೂ ಉಚಿತ ಚಿಕಿತ್ಸೆ ದೊರಕುತ್ತದೆ. ಆರೋಗ್ಯದ ಒಟ್ಟು ಜವಾಬ್ದಾರಿ ಕುಟುಂಬ ವೈದ್ಯನದು, ಹಾಗೂ ಅವನು ಅವರ ಮಧ್ಯೆಯೇ ವಾಸಿಸುತ್ತಾನೆ. ಇದಕ್ಕೆ ತದ್ವಿರುದ್ಧವಾಗಿ ನಮ್ಮ ದೇಶದಲ್ಲಿ ಚಿಕಿತ್ಸೆಗೆ ಹಣ ಕೊಡಬೇಕಾಗುತ್ತದೆ ಹಾಗೂ ಕುಟುಂಬ ವೈದ್ಯ ಎಂಬ ಪರಿಕಲ್ಪನೆಯೂ ಅಸ್ಪಷ್ಟವಾಗಿದೆ. ಕೇವಲ ಚಿಕಿತ್ಸೆ ಮಾಡುವ ವೈದ್ಯ, ಆರೋಗ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾನೆಯೇ?



ಆರೋಗ್ಯ ಕ್ಷೇತ್ರದ ಸಾಧನೆಯನ್ನು ಫ್ರೀಡೆಲ್ ಕ್ಯಾಸ್ಟ್ರೋ ಬಹಳ ಹೆಮ್ಮೆಯಿಂದ ಹೇಳುತ್ತಾರೆ. "ಮಗು ತಾಯಿಯ ಹೊಟ್ಟೆಯಲ್ಲಿರುವಾಗಲೇ ನಮ್ಮ ದೇಶದಲ್ಲಿ ಆರೋಗ್ಯದ ಕಾಳಜಿ ಆರಂಭವಾಗುತ್ತದೆ. ನಂತರ ಸತತ 75 ವರ್ಷ ಆರೋಗ್ಯವಂತ ಜೀವನ".

ಕುಟುಂಬ ವೈದ್ಯ: ಆರೋಗ್ಯ ವ್ಯವಸ್ಥೆಯ ಕೇಂದ್ರಬಿಂದು ಕುಟುಂಬವೈದ್ಯ. ಸಮಾಜದ ಬಗ್ಗೆ ಕಾಳಜಿ ಇರುವ, ಜನಪರ ಚಟುವಟಿಕೆಗಳಲ್ಲಿ ಭಾಗವಹಿಸುವ ಯುವಜನರನ್ನು ಸಮಾಜ ಗುರುತಿಸಿ, ಅವನಿಗೆ ತರಬೇತಿ ನೀಡಲು ಶಿಫಾರಸು ಮಾಡುತ್ತದೆ. ಅಂಥ ವ್ಯಕ್ತಿಗಳಿಗೆ ವೈದ್ಯಕೀಯ ತರಬೇತಿ ನೀಡಲಾಗುತ್ತಿದೆ. ನಂತರ ಮೂರು ವರ್ಷ ಕುಟುಂಬ ವೈದ್ಯಕೀಯದಲ್ಲಿ ತರಬೇತಿ ನೀಡಿ ಕುಟುಂಬಗಳ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಿ, ಸೇವೆ ನೀಡಲು ತಯಾರು ಮಾಡಲಾಗುತ್ತಿದೆ. (ಭಾರತದಲ್ಲಿ ಕುಟುಂಬ ವೈದ್ಯಕೀಯದ ತಯಾರಿಗೆ ಯಾವ ಕೋರ್ಸುಗಳೂ ಇಲ್ಲ.) ಕ್ಯೂಬಾದಲ್ಲಿ ಇಂತಹ ತರಬೇತಿ ಪಡೆದ ವೈದ್ಯರು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಕ್ಯೂಬಾ ದೇಶದ ವೈದ್ಯರನ್ನು ಸ್ಪೇನ್, ಬ್ರೆಝಿಲ್, ಕೆನಡಾ, ಸೌಥ್ ಆಫ್ರಿಕಾ ಮುಂತಾದ ದೇಶಗಳಿಗೆ ಕಳುಹಿಸಿ ಅವರ ಸೇವೆಯನ್ನು ಆಯಾ ದೇಶಕ್ಕೆ ಒದಗಿಸುತ್ತಿದೆ. ಈ ವೈದ್ಯರುಗಳಿಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಬೇಡಿಕೆ ಇದ್ದರೂ, ಅಪಾರ ಹಣ ದೊರಕುತ್ತಿದ್ದರ ಈ ವೈದ್ಯರು ತಮ್ಮ ದೇಶದ ಆದೇಶದಂತೆ ಮಾತ್ರ ದುಡಿಯಲು ಮುಂದೆ ಬರುತ್ತಿರುವುದು ಪ್ರಶಂಸನೀಯವಲ್ಲವೇ?

ಕ್ಯೂಬಾದಲ್ಲಿ ವೈದ್ಯ/ ವ್ಯಕ್ತಿ ಅನುಪಾತ 1:255 ಆದರೆ ಅಮೇರಿಕಾದಲ್ಲಿ 1:450. ಕ್ಯೂಬಾದಲ್ಲಿ ಸಮಾಜದ ಕೆಳಸ್ಥರದ ಜನರಿಗೂ ಹಾಗೂ ಮಹಿಳೆಯರಿಗೂ ವೈದ್ಯನಾಗಲು ಸಮಾನ ಅವಕಾಶಗಳಿರುವುದರಿಂದ, ಅಲ್ಲಿ ಮಹಿಳಾ ವೈದ್ಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ನಮ್ಮ ದೇಶದಲ್ಲಿ ಪ್ರವೇಶ ಪಡೆಯಲು ಹಣವಂತನಾಗಿರಬೇಕು, ಕೆಲಸ ಪಡೆಯಲು ಹಣ ಕೊಡಬೇಕು ಹಾಗೂ ಕೆಲಸ ದೊರಕಿದ ಮೇಲೂ ಹಣ ಹೀರಲು ತಯಾರಿರಬೇಕು! ಜಾತಿ ಪ್ರಶ್ನೆ ವೈದ್ಯಕೀಯ ಪ್ರವೇಶದ ಸಮಯದಲ್ಲಿ ಬಹಳ ಮುಖ್ಯವಾಗುತ್ತಿದೆ.

ದ್ವಿತೀಯ ಹಾಗೂ ತೃತೀಯ ಆರೋಗ್ಯ ಸೇವೆಗಳು : ಪ್ರಾಥಮಿಕ ಆರೋಗ್ಯ ಸೇವೆಗೆ ಪೂರಕವಾದ ಸೇವೆಗಳನ್ನು ದ್ವಿತೀಯ ಹಾಗೂ ತೃತೀಯ ಆರೋಗ್ಯ ವ್ಯವಸ್ಥೆಗಳು. ಆದರೆ ಭಾರತದಲ್ಲಿ ಈ ವ್ಯವಸ್ಥೆಗಳು ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡುತ್ತ, ತಾಂತ್ರಿಕತೆ ಬಗ್ಗೆ ಜನರಲ್ಲಿ ಭ್ರಮೆ ಹುಟ್ಟಿಸಿ ತಮ್ಮಲ್ಲಿಗೆ ಸೆಳೆದುಕೊಳ್ಳುತ್ತಿದೆ. ಕ್ಯೂಬಾದಲ್ಲಿನ ದ್ವಿತೀಯ ಹಾಗೂ ತೃತೀಯ ಆರೋಗ್ಯ ವ್ಯವಸ್ಥೆಗಳ ಎರಡು ವಿಶೇಶ ಸನ್ನಿವೇಶಗಳನ್ನು ತಿಳಿಯೋಣವೇ?

ಕಸಿ ಶಸ್ತ್ರ ಚಿಕಿತ್ಸೆ:- (transpant surgery) ದ್ವಿತೀಯ ಹಾಗೂ ತೃತೀಯ ಆರೋಗ್ಯ ವ್ಯವಸ್ಥೆಯ ಒಂದು ಮುಖ್ಯ ಕಾರ್ಯ. ಕಾರ್ನಿಯ, ಮಜ್ಜೆ (bone marrow), ಹೃದಯ, ಮೂತ್ರಕಾಂಡ, ಪ್ಯಾನ್ಕ್ರಿಯಾಸ್(pancreas) ಲಿವರ್ ಮುಂತಾದ ಅಂಗಾಂಗಗಳ ಶಸ್ತ್ರ ಚಿಕಿತ್ಸೆಯನ್ನು ಕ್ಯೂಬಾದಲ್ಲಿ ಮಾಡಲಾಗುತ್ತಿದೆ. ಈ ಚಿಕಿತ್ಸೆಗಳ ಬಗ್ಗೆ ಜನರಿಗೆ ಮಾಹಿತಿ ಕೊಡಲಾಗಿದೆ, ಆದ್ದರಿಂದ ಜನರು ಅಂಗಾಂಗಗಳ ದಾನ ಮಾಡಲು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರುತ್ತಿದ್ದಾರೆ. ಆದರೆ ಇತರೇ ದೇಶಗಳಲ್ಲಿಯಂತೆ ಅಂಗಾಂಗಗಳ ವ್ಯಾಪಾರ ಎಂದೂ ನಡೆದಿಲ್ಲ! ಈ ಶಸ್ತ್ರಚಿಕಿತ್ಸೆಗಳಿಗೆ ವಿಶೇಷ ಆಸ್ಪತ್ರೆಗಳಿವೆ ಹಾಗೂ ಈ ಚಿಕಿತ್ಸೆಗಳನ್ನು ಸಂಪೂರ್ಣ ಉಚಿತವಾಗಿ ಮಾಡಲಾಗುತ್ತಿದೆ. ನಿಮಗೆ ಕಸಿ ಶಸ್ತ್ರ ಚಿಕಿತ್ಸೆ ಅಗತ್ಯವಿದ್ದರೆ ಅಲ್ಲಿ ಮಾಡಿಸಿಕೊಳ್ಳಿ! ಆದರೆ ಅದು ನಿಮಗೆ ಉಚಿತವಿಲ್ಲ!

ಈಗಿನ ದಿನಗಳಲ್ಲಿ ಏಡ್ಸ್ ರೋಗದ ಹಾವಳಿ ಎಲ್ಲೆಲ್ಲೂ ಕಂಡುಬರುತ್ತಿದೆ. ಕ್ಯೂಬಾ ಅದಕ್ಕೆ ಹೊರತೇನಲ್ಲ.

ಏಡ್ಸ್ ರೋಗವೆಂದಾಕ್ಷಣ, ಅದನ್ನು ಪತ್ತೇಹಚ್ಚುವುದೇ ಮುಖ್ಯ ಸವಾಲು. ಕ್ಯೂಬಾ ಈ ಸವಾಲನ್ನು ಸಂಪೂರ್ಣವಾಗಿ ಎದುರಿಸಿದೆ. ಕ್ಯೂಬಾದಲ್ಲಿ ರಕ್ತಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಗುತ್ತಿದೆ. ಈ ಪರೀಕ್ಷೆಗಳು ಕೆಲವರಿಗೆ ಕಡ್ಡಾಯ. ಉದಾ. ಲೈಂಗಿಕ ಕಾಯಿಲೆಯಿಂದ ಬಳಲುತ್ತಿರುವವರು, ಆಸ್ಪತ್ರೆಗೆ ದಾಖಲಾದ ಎಲ್ಲ ರೋಗಿಗಳು, ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವವರು, ಗರ್ಭಿಣಿ ಮಹಿಳೆಯರು, ಕೈದಿಗಳು, ಆರೋಗ್ಯ

ಪುಟ 11 ಕ್ಕೆ

ಉಳ್ಳವರು ಅರಮನೆ ಕಟ್ಟುವರು, ಬಡವರು ಬೀದಿಯಲ್ಲೇ ಬದುಕುವರು

ಇದು ಉದಾರೀಕರಣದ ಕಾಲದ ಉಳ್ಳವರ ಕತೆ. ಬಡವ ಶ್ರೀಮಂತರ ನಡುವಿನ ಅಂತಹ ಹೇಗೆ ಕಣ್ಣಿಗೆ ರಾಚುತ್ತಿದೆ ಎಂಬುದನ್ನು ಉಳ್ಳವರು ಮನೆ ಕಟ್ಟಿಸಿಕೊಳ್ಳುವುದರಲ್ಲಿ ಕಾಣಬಹುದು. ಕಳೆದ ವರ್ಷದಲ್ಲಿ 1690 ಶ್ರೀಮಂತರು ಒಂದು ಕೋಟಿಗೂ ಹೆಚ್ಚಿನ ಸಾಲವನ್ನು ಮನೆ ಕಟ್ಟುವ ಸಲುವಾಗಿ ತೆಗೆದುಕೊಂಡಿದ್ದಾರಂತೆ. ಒಂದು ಕೋಟಿ ರೂಪಾಯಿ ಮನೆಗಾಗಿ ಸಾಲವನ್ನೇ ಪಡೆದಿದ್ದರೆ ಮನೆ ಕಟ್ಟುವ ಒಟ್ಟು ಖರ್ಚು ಎಷ್ಟಿರಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.

ದೆಹಲಿ, ಮುಂಬೈ ಮತ್ತು ಬೆಂಗಳೂರುಗಳಲ್ಲೇ ಈ ಅರಮನೆಗಳೆಲ್ಲಾ ಬಹುತೇಕ ಬರುತ್ತಿರುವುದು / ಬಂದಿರುವುದು.ದೊಡ್ಡ ಸಂಬಳದವರು ಮತ್ತು ವ್ಯಾಪಾರಸ್ಥರು ಇಂತಹ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಕೆಳಗಿನ ಕೋಷ್ಟಕ ನೋಡಿದರೆ ಇಲ್ಲಿನ ಐಷರಾಮಿತನ ಗೊತ್ತಾಗುತ್ತದೆ.

ಸಾಲದಮಿತಿಗಳು

1.	1-4 ಕೋಟಿ ರೂಪಾಯಿಗಳು	819
2.	4-6 ಕೋಟಿ ರೂಪಾಯಿಗಳು	171
3.	6-10 ಕೋಟಿ ರೂಪಾಯಿಗಳು	92
4.	10-25 ಕೋಟಿ ರೂಪಾಯಿಗಳು	74
5.	25 ಕ್ಕೂ ಹೆಚ್ಚು	22
	ಒಟ್ಟು	1178

ಇದರಲ್ಲೇನು ವಿಶೇಷ ಎಂದು ನೀವು ಕೇಳಲಾರಿರಿ. ಯಾಕೆಂದರೆ ಆಂಧ್ರಪ್ರದೇಶದಲ್ಲಿ, ರಾಜಸ್ತಾನ ಹಾಗೂ ಇತರ ಹಲವೆಡೆ ಜನ ಉಪವಾಸ ಸಾಯುತ್ತಿರುವ ಸುದ್ದಿಗಳು ಬರುತ್ತಲೇ ಇವೆ. ಅಂದರೆ ಇಂತಹ ಐಷರಾಮಿತನ ಒಂದು ಕಡೆ ನಡೆಯುತ್ತಿದ್ದರೆ ಇನ್ನೊಂದೆಡೆ ಬಡತನ



ಜನರನ್ನು ಕಿತ್ತು ತಿನ್ನುತ್ತಿದೆ. ಉದಾರೀಕಣ, ಜಾಗತೀಕರಣ ಮತ್ತು ಖಾಸಗೀಕರಣ ದೇಶದ ಜನತೆಗೆ ಅಭಿವೃದ್ಧಿಯನ್ನು ತರುವುದೇ ನಿಜವಾಗಿದ್ದರೆ ಉದಾರೀಕರಣವನ್ನು ಅಪ್ಪಿಕೊಂಡ ಒಂದು ದಶಕದ ನಂತರ ಜನ ಬಡತನದ ಬೇಗೆಯಿಂದ ಸಾಯುವಂತಾಗಬಾರದಿತ್ತಲ್ಲವೆ? ಉದಾರೀಕರಣ ಶ್ರೀಮಂತರನ್ನು ಶ್ರೀಮಂತಗೊಳಿಸುತ್ತಲೇ ಹೋಗಿ ಬಡವರ ಬಡತನವನ್ನು ಹೆಚ್ಚಿಸುತ್ತಲೇ ಇಬ್ಬರ ನಡುವಿನ ಅಂತರವನ್ನು ಹೆಚ್ಚಿಸುತ್ತಲೇ ಹೋಗಿರುವುದು ಸ್ಪಷ್ಟ. ಅದರ ಪರಿಣಾಮ ಇದು.

ಉತ್ಪಾದಕ ಆಸ್ತಿಗಳ ಹೂಡಿಕೆ ಮಾಡಿ ಅಭಿವೃದ್ಧಿ ಹೊಂದಲು ಸಾಲ ಸಿಗುವುದು ಕಷ್ಟವಾದರೂ ಐಷರಾಮಿ ಮನೆಗಳಿಗೆ ಬೇಕಾದಷ್ಟು ಸಾಲ ದೊರೆಯುತ್ತದೆ.

ಜೈ ಉದಾರೀಕರಣ ಅನ್ನುತ್ತಾರಲ್ಲ!

ಜನಸಾಮಾನ್ಯರೇಕೆ ಹೂಡಿಕೆ ಮಾಡುತ್ತಿಲ್ಲ?

ಉದಾರೀಕರಣದ ಲಾಭಗಳು ಹನಿ ಹನಿಯಾಗಿ ತೊಟ್ಟಿಕುತ್ತಾ ದೇಶದ ಬಹುತೇಕ ಜನರವರೆಗೆ ಹರಿಯುತ್ತದೆ ಎಂಬುದು ಉದಾರೀಕರಣ ವಾದಿಗಳ ಮಾತು. ಆದರೆ ಅಂತಹುದು ಏನು ಆಗುತ್ತಿಲ್ಲ.

ಜನಸಾಮಾನ್ಯರು ಕಂಪನಿಗಳಲ್ಲಿ ಎಷ್ಟು ಹೂಡಿಕೆ ಮಾಡುತ್ತಿದ್ದಾರೆ, ಎಷ್ಟು ಉಳಿತಾಯ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ನಡೆಸಿದ ಸರ್ಕಾರಿ ಸಮೀಕ್ಷೆಯ ಪ್ರಕಾರ 2003-04 ರಲ್ಲಿ ಈ ಹೂಡಿಕೆ ಹೆಚ್ಚಾಗಿಲ್ಲ. 1999-2000 ರ ಸಾಲಿನಲ್ಲಿ ಈ ಹೂಡಿಕೆ 18199 ಕೋಟಿ ರೂಪಾಯಿಗಳಷ್ಟಿದ್ದದ್ದು 2003-04 ರ ಸಾಲಿನಲ್ಲಿ ಬರಿ 5847 ಕೋಟಿ ರೂಪಾಯಿಗಳಿಗೆ ಇಳಿದಿದೆ. ಇದೇ ರೀತಿ ಕುಟುಂಬಗಳು ಸಾಲ ತೆಗೆದುಕೊಳ್ಳುವ ಪ್ರಮಾಣವೂ ಕಡಿಮೆಯಾಗಿದೆಯಂತೆ. ಇತ್ತೀಚಿನ ವರ್ಷಗಳಲ್ಲಿ ಮನೆ ಬಳಕೆ ವಸ್ತುಗಳು / ಮನೆ ಕಟ್ಟಲು ಮತ್ತು ಇಂತಹ ಸಾಲಗಳ ಪ್ರಮಾಣ ಬಹಳ ದೊಡ್ಡ ಪ್ರಮಾಣದಲ್ಲಿ ಏರುತ್ತಲೇ ಇತ್ತು. 2001-02 ರಲ್ಲಿ ಈ ಸಾಲಗಳ ಬೆಳವಣಿಗೆ ಶೇ 70 ರಷ್ಟಿತ್ತು. ಕಳೆದ ಸಾಲಿನಲ್ಲಿ ಅಂದರೆ 2003-04 ರಲ್ಲಿ ಇದು ಶೇ 25 ಕ್ಕೆ ಇಳಿದಿದೆಯಂತೆ.

ಇಂತಹ ಪರಿಸ್ಥಿತಿ ಯಾಕೆ ಎಂಬ ಪ್ರಶ್ನೆಗೆ ಉತ್ತರವನ್ನು ಬಹಳ ಕಷ್ಟಪಟ್ಟು ಹುಡುಕಬೇಕಾದದ್ದಿಲ್ಲ. ಉದಾರೀಕರಣ ಶ್ರೀಮಂತರನ್ನು ಹೆಚ್ಚೆಚ್ಚು ಶ್ರೀಮಂತಗೊಳಿಸುತ್ತಿದೆ. ಮಧ್ಯಮ ಮತ್ತು ಕೆಳವರ್ಗಗಳ ಜನ ಸಾಮಾನ್ಯರು ತಮ್ಮ ನಿಜ ಆದಾಯದಲ್ಲಿ ತೀವ್ರ ಕುಸಿತ ಕಾಣುತ್ತಿದ್ದಾರೆ. ಇಂತಹ ಪರಿಸ್ಥಿತಿಯಿಂದಾಗಿ ಅವರು ತೀವ್ರ ಅಭದ್ರತೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಹೂಡಿಕೆಗೆ ಮುಂದಾಗುವ ಪ್ರಶ್ನೆಯೇ ಇಲ್ಲ. ಇದಲ್ಲದೆ ಈ ಸಮೀಕ್ಷೆಯ ಪ್ರಕಾರ ಜನ ಸಾಮಾನ್ಯರು ಹಿಂದೆಂದಿಗಿಂತ ಹೆಚ್ಚು ನಗದನ್ನೇ ತಮ್ಮ ಕೈಗಳಲ್ಲಿ ಉಳಿಸಿಕೊಳ್ಳುತ್ತಿದ್ದಾರಂತೆ. ಇಲ್ಲವೇ ಈ ಹಣವನ್ನು ಬ್ಯಾಂಕುಗಳಲ್ಲಿ ಇಡುತ್ತಿದ್ದಾರೆ.

ಉದಾರೀಕರಣದ ಆರ್ಥಿಕ ನೀತಿಗಳು ಜನರಿಗೆ ಏನು ಮಾಡುತ್ತಿವೆ ಎನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಬೇಕೆ?

ಭಾರತ - ಪಾಕ್ ಶಾಂತಿ : ದಕ್ಷಿಣ ಏಷ್ಯಾದ ಸಮೃದ್ಧಿಗೆ ಅಗತ್ಯ

ಶರತ್ ಚಂದ್ರ

ನ್ಯೂಯಾರ್ಕ್‌ನಲ್ಲಿ ನಮೋಹನ್‌ಸಿಂಗ್-ಮುಶರಫ್ ಮಾತುಕತೆಯ ಹಿನ್ನೆಲೆಯಲ್ಲಿ, ಭಾರತ-ಪಾಕ್ ಸಂಬಂದಗಳ ಸುಧಾರಣೆಯ ಪ್ರಕ್ರಿಯೆ ಪುನಃ ಚಿಗುರಿಕೊಂಡಿದೆ. ಇದನ್ನು ಮುಂದೆ ಒಯ್ಯುವ, ಈಗಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಬಗೆ-ಮಹತ್ವದ ಬಗ್ಗೆ ಸುರ್‌ಜೀತ್ ವಿವರಿಸುತ್ತಾರೆ. ಭಾರತ-ಇರಾನ್ ತೈಲ ಪೈಪ್‌ಲೈನ್ ಪಾಕಿಸ್ತಾನದಲ್ಲಿ ಹಾದು ಹೋಗುವ ಬಗ್ಗೆ ಪಾಕ್ ಧೋರಣೆ ಅವರು ಟೀಕಿಸುತ್ತಾರೆ. ದಕ್ಷಿಣ ಏಶ್ಯಾದ ಸಮೃದ್ಧಿಗೆ ಭಾರತ-ಪಾಕ್ ಶಾಂತಿ ಅಗತ್ಯ ಎಂದು ವಾದಿಸುವ ಸುರ್‌ಜೀತ್ ಲೇಖನದ ಸಾರಾಂಶ.

ಭಾರತ ಮತ್ತು ಪಾಕಿಸ್ತಾನದ ನಡುವೆ ಶಂತ ಮತ್ತು ಸಾಮಾನ್ಯ ಸಂಬಂಧ ಏರ್ಪಡಿಸಬೇಕೆಂದು, ಹಿಂದೆಂದಿಗಿಂತಲೂ ಹೆಚ್ಚಾಗಿ ಎರಡೂ ದೇಶಗಳ ಜನತೆ ಬಯಸುತ್ತಾರೆ. ಮಾತ್ರವಲ್ಲ ಈಗ ಎರಡೂ ದೇಶಗಳ[illegible] ಅಣ್ವಸ್ತ್ರ ಹೊಂದಿರುವ ದೇಶಗಳಾದ್ದರಿಂದ, ಇಡೀ ಜಗತ್ತಿನ ಜನತೆ ಸಹ ಇದನ್ನೇ ಬಯಸುತ್ತಾರೆ.

ಬಂಧಿತ ಮೀನುಗಾರರ, ಯುದ್ಧ ಕೈದಿ ಸೈನಿಕರ ಬಿಡುಗಡೆ-ವಿನಿಮಯ, ಭಾರತದಲ್ಲಿ ಹಲವು ಪಾಕಿಸ್ತಾನಿ ಮಕ್ಕಳ ಹೃದ್ರೋಗ ಚಿಕಿತ್ಸೆ, ಎರಡು ದೇಶಗಳ ಜನತೆಯ ನಡುವೆ ಹೆಚ್ಚಿದ ನೇರ ಸಂಪರ್ಕ - ಇವೆಲ್ಲಾ ಅತ್ಯಂತ ಸಕಾರಾತ್ಮಕ ಬೆಳವಣಿಗೆಗಳು. ಪಾಕಿಸ್ತಾನದ ವಿದೇಶಮಂತ್ರಿ ನವದೆಹಲಿ ಭೇಟಿ ಈ ಪ್ರಕ್ರಿಯೆಯನ್ನು ಮುಂದಕ್ಕೆ ಒಯ್ದಿದೆ. ಶ್ರೀನಗರ - ಮುಜಪ್ಫರಾಬಾದ್ ನಡುವೆ ಬಸ್ ಸಂಚಾರ ಆರಂಭಕ್ಕೆ ಅನುವಾಗುವ ಕ್ರಮಗಳು ಇನ್ನಷ್ಟು ಹುರುಪು ಕೊಟ್ಟಿವೆ.

ತೈಲ ಪೈಪ್‌ಲೈನ್ - ವಿಚಿತ್ರ ಹೇಳಿಕೆ

ಆದರೆ ಇತ್ತೀಚಿನ ಪಾಕ್ ಹೊಸ ಪ್ರಧಾನಿಯ ಪೈಪಲೈನ್ ಬಗೆಗಿನ ಹೇಳಿಕೆ ಈ ಪ್ರಕ್ರಿಯೆಗೆ ಹಾನಿ ಉಂಟು ಮಾಡಿದೆ. ಕಾಶ್ಮೀರ ಸಮಸ್ಯೆ ಬಗೆಹರಿಸದೆ ಭಾರತ- ಇರಾನ್ ಪೈಪ್‌ಲೈನ್ ಪಾಕಿಸ್ತಾನದ ಮೂಲಕ ಹಾದು ಹೋಗುವ ಬಗ್ಗೆ ಮಾತುಕತೆ ಕಾಶ್ಮೀರ ಸಮಸ್ಯೆ ಪರಿಹಾರದ ಮೇಲೆ ಅವಲಂಬಿಸಿದೆ ಎಂದು ಪಾಕ್ ಪ್ರಧಾನಿ ಹೇಳಿದ್ದರು. ಹಿಂದೆ ಎರಡೂ ದೇಶಗಳು ಎಲ್ಲಾ ಮಾತುಕತೆಗಳಿಗೆ ಶರತ್ತುಗಳ ಪಟ್ಟಿಯನ್ನೇ ಇಡುತ್ತಿದ್ದವು. ಇತ್ತೀಚಿಗೆ ಶರತ್ತು- ರಹಿತ ಮಾತುಕತೆ ಆರಂಭವಾದ್ದರಿಂದಲೇ ಇಷ್ಟು ಪ್ರಗತಿಕಾಣಲು ಸಾಧ್ಯವಾಗಿದೆ. ಪಾಕ್‌ಪ್ರಧಾನಿಯ ಹೇಳಿಕೆ ಶರತ್ತು ಒಡ್ಡುವ ಹಳೆ ಚಾಳಿಗೆ ಮರಳುವ ಸೂಚನೆ.

ತೈಲ ಪೈಪ್‌ಲೈನ್ ಬಗ್ಗೆ ಪಾಕ್ ಪ್ರದಾನಿ ಹೇಳಿಕೆ ಅತಾರ್ಕಿಕ ಸಹ. ಪಾಕ್ ವಿದೇಶ ಮಂತ್ರಿ ದೆಹಲಿ ಭೇಟಿಯಲ್ಲಿ ಈ ಬಗ್ಗೆ ಪ್ರಸ್ತಾವದ ವಿವರಗಳನ್ನು ಚರ್ಚಿಸುವ ಹಂತಕ್ಕೆ ಬಂದಿತ್ತು. ಅಲ್ಲದೆ ಆರ್ಥಿಕವಾಗಿ ಇದು ಪಾಕಿಸ್ತಾನದ ದೃಷ್ಟಿಯಿಂದಲೂ ಉತ್ತಮ ಪ್ರಸ್ತಾಪ. ಈಗ ಚರ್ಚೆಯಲ್ಲಿರುವ ಪ್ರಸ್ತಾವದ ಪ್ರಕಾರ ಪಾಕಿಸ್ತಾನ ಪ್ರತಿ ವರ್ಷ 80 ಮಿಲಿಯನ್ ಡಾಲರು (ಸುಮಾರು 360 ಕೋಟಿ ರೂ.) ರಾಯಲ್ಟಿಯಾಗಿ ಪಡೆಯುತ್ತದೆ. ಈಗಿನ ಪಾಕಿಸ್ತಾನದ ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ ಇದು ಒಳ್ಳೆಯ ಪ್ರಸ್ತಾವ. ಪಾಕಿಸ್ತಾನದ ದೃಷ್ಟಿಯಿಂದಲೂ ಈ ಪ್ರಸ್ತಾವ ಮುಂದಕ್ಕೆ ಹೋಗದಿದ್ದರೆ ಭಾರತದ ಬೆಳವಣಿಗೆ ಮೇಲೆ ಪರಿಣಾಮ ಬೀಳುತ್ತದೆ ಎಂದು ಪಾಕ್ ಪ್ರಧಾನಿ ಹೇಳಿದ್ದು ಇನ್ನಷ್ಟು ಬೇಜವಾಬ್ದಾರಿ ಹೇಳಿಕೆ. ಇರಾನ್‌ನಿಂದ ಭಾರತಕ್ಕೆ ಹಾಕುವ ಈ ತೈಲ ಪೈಪ್‌ಲೈನ್ ಹಲವು ಮಧ್ಯ ಏಶ್ಯಾ (ಮಾಜಿ ಸೋವಿಯೆತ್ ಒಕ್ಕೂಟದ ದೇಶಗಳು) ದೇಶಗಳನ್ನು ಹಾದು ಭಾರತಕ್ಕೆ ಬರುತ್ತದೆ. ಇದಕ್ಕೆ ಎರಡು ಆಯ್ಕೆಗಳಿವೆ ಭಾರತದ ಮುಂದೆ. ಒಂದನೆಯದು ಪಾಕಿಸ್ತಾನದ ಮೂಲಕ ಹಾಯಿಸುವುದು. ಇನ್ನೊಂದು ಅರೇಬಿಯನ್ ಸಮುದ್ರದ ಮೂಲಕ ತರುವುದು. ಮೊದಲನೆಯದು ಖರ್ಚು, ತಾಂತ್ರಿಕತೆ ಎರಡೂ ದೃಷ್ಟಿಯಿಂದಲೂ ಉತ್ತಮ ಆಯ್ಕೆ. ಆದರೆ ಭಾರತಕ್ಕೆ ತೀರಾ ಅನುಕೂಲಗಳ ಆಧಾರದ ಮೇಲೆ ಸಂಬಂಧ ಉತ್ತಮ ಪಡಿಸಲು ಇದೊಂದು ಮಹದವಕಾಶ. ಇದಲ್ಲದೆ ವಿದೇಶ ಮಂತ್ರಿಯ ಜತೆ ಚರ್ಚೆಗೆ ಬಂದ ಪ್ರಸ್ತಾವವನ್ನು ಪ್ರಧಾನಿ ಸಾರಾಸಗಟಾಗಿ ತಿರಸ್ಕರಿಸಿ ಪಾಕಿಸ್ತಾನದ ಉಳಿದ ವಲಯಗಳ ಬಗ್ಗೆ ಅಪನಂಬಿಕೆ ಹುಟ್ಟಿಸುವುದು ಇನ್ನಷ್ಟು ಗಂಭೀರ ಸಂಗತಿ. ಪಾಕ್ ಪ್ರಧಾನಿಯವರ ಈ ಹೇಳಿಕೆಗೆ ನಕಾರಾತ್ಮಕ ಪ್ರತಿಕ್ರಿಯೆ ನೀಡಿ, ವಾತಾವರಣ ಇನ್ನಷ್ಟು ಕೆಡಿಸಲಿಲ್ಲ ಎಂಬುದೇ ಸಮಾಧಾನದ ಸಂಗತಿ.

ಪಾಕಿಸ್ತಾನದಲ್ಲಿ ಅತೃಪ್ತಿ

ಎರಡು ನೆರೆಹೊರೆಯ ದೇಶಗಳ ನಡುವೆ ತಾಂತ್ರಿಕ ಕಾರಣಗಳಿಗಾಗಿ ಸಮಸ್ಯೆಗಳಿರುವುದು ಚರಿತ್ರೆಯಲ್ಲಿ ಹೊಸದೇನಲ್ಲ. ಇಂತಹ ಸಮಸ್ಯೆಗಳ ಮತ್ತು ಅದನ್ನು ಪರಿಹಾರ ಮಾಡಿದ ರೀತಿ ಬಗ್ಗೆ ಚಾರಿತ್ರಿಕ ಉದಾಹರಣೆಗಳು ಹೇರಳ ಇವೆ. ಭಾರತ-ಚೀನಾ, ಇಂಡೋನೇಶ್ಯಾ- ಮಲೇಶ್ಯಾ, ಫ್ರಾನ್ಸ್ - ಜರ್ಮನಿ, ಚೀನಾ - ಸೋವಿಯತ್ ಒಕ್ಕೂಟ, ಚೀನಾ - ವಿಯೆಟ್‌ನಾಮ್- ಇವೆಲ್ಲಾ ಇಂತಹ ಉದಾಹರಣೆಗಳು. ಈ ಎಲ್ಲಾದರಲ್ಲಿ ಸಮಾನ ಅಂಶವೆಂದರೆ ಅತ್ಯಂತ ಕ್ಲಿಷ್ಟ- ಕೇಂದ್ರೀಯ ಸಮಸ್ಯೆ ಬಿಟ್ಟು, ಉಳಿದ ಎಲ್ಲಾ ಅಂಶಗಳಲ್ಲಿ ಸುಧಾರಣೆ ತಂದು ಪರಸ್ಪರ - ನಂಬಿಕೆ ಕಾಯ್ದುಕೊಳ್ಳುವುದು ಮೊದಲ ಹಂತ. ಕ್ಲಿಷ್ಟ ಸಮಸ್ಯೆ ಬಗೆಹರಿಸಲು ಇದು ಸರಿಯಾದ ವಾತಾವರಣ ಮೂಡಿಸುವುದು. ಸಂಬಂಧ ಇನ್ನಷ್ಟು ಕೆಡದಂತೆ ತಡೆಯುತ್ತದೆ. ಭಾರತ - ಚೀನಾ ಸಂಬಂಧದಲ್ಲಿ ಗಡಿಯ ಪ್ರಶ್ನೆ ಕ್ಲಿಷ್ಟ ಅಂಶಗಳ ಬಗ್ಗೆ ಸರಿಯಾದ ನಂಬಿಕೆ ಹುಟ್ಟಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಇದೇ ಭಾರತ-ಪಾಕ್ ಸಂಬಂಧ ಸುಧಾರಿಸಲು ಇರುವ ಒಂದೇ ರೀತಿ.



ಸಂಬಂಧ ಸುಧಾರಣೆ - ಚಿಗುರಿದ ಆಸೆ

ಆದರೆ ಈ ಅತ್ಯಂತ ತಾರ್ಕಿಕ ನೀತಿ ಬಿಟ್ಟು ಆಗಾಗ ಪಾಕಿಸ್ತಾನದ ಆಳರಸರು ಆಚೀಚೆ ಹೊರಳುವುದರ ಕಾರಣವೇ ಬೇರೆ. ಈಗಿನ ಮಿಲಿಟರಿ ಆಡಳಿತದ ಬಗ್ಗೆ ಪಾಕಿಸ್ತಾನದ ಜನರಲ್ಲಿ ಏಳುತ್ತಿರುವ ತೀವ್ರ ಅತೃಪ್ತಿಯೇ ಇದಕ್ಕೆ ಕಾರಣ. ಅಧ್ಯಕ್ಷ ಪರವೇಝ್ ತನ್ನ ಮಿಲಿಟರಿ ಜನರಲ್ ಪಾತ್ರ ಬಿಟ್ಟುಕೊಡಬೇಕೆಂಬ ಪ್ರಜಾಸತ್ತಾತ್ಮಕ ಒತ್ತಾಯಕ್ಕೆ ಆತ ಒಪ್ಪಿ ಹಲವು ಬಾರಿ ಅದನ್ನು ಈಡೇರಿಸುವ ಆಶ್ವಾಸನೆ ಕೊಟ್ಟಿದ್ದರೂ, ಇಂದಿಗೂ ಜಾರಿಯಾಗಿಲ್ಲ.

ಚುನಾಯಿತ ಸಿವಿಲ್ ನಾಯಕರನ್ನು ನಡೆಸಿಕೊಂಡಿರುವ ರೀತಿ, ಪ್ರಧಾನಿಗಳನ್ನು ಆಗಾಗ್ಗೆ ಯಾವುದೇ ಕಾರಣವಿಲ್ಲದೆ ಬದಲಾಯಿಸುವುದು - ಇವೂ ಅತೃಪ್ತಿ ಹೆಚ್ಚಲು ಕಾರಣವಾಗಿದೆ. ಮಿಲಿಟರಿ ನಾಯಕರ ಭ್ರಷ್ಟಾಚಾರ ಪುನಃ ಮಿತಿ ಮೀರಿದೆ. ನಿವೃತ್ತ, ಹಾಲಿ ಮಿಲಿಟರಿ ಅಧಿಕಾರಿಗಳು ದೇಶವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಕಂಪನಿಗಳು, ಎನ್‌ಜಿಓಗಳು, ಕಾಲೊನಿಗಳು, ಸಹಕಾರಿಗಳು, ಹೌಸಿಂಗ್ ಸೊಸೈಟಿಗಳು - ಹೀಗೆ ಎಲ್ಲೆಲ್ಲೂ ಯಾವುದೇ ರೀತಿಯ ಕೊಡುಗೆ ನೀಡದೆ ಭ್ರಷ್ಟಾಚಾರದ ಮೂಲಕ ಕೊಳ್ಳೆಹೊಡೆಯುತ್ತಿದ್ದಾರೆ. ಕೃಷಿ ಜಮೀನು, ನಗರದ ಕಮರ್ಶಿಯಲ್ ರಿಯಲ್ ಎಸ್ಟೇಟ್ ಎರಡರಲ್ಲೂ ಸರ್ಕಾರಿ ಪ್ರಭಾವ ದುರುಪಯೋಗ ಮಾಡಲಾಗುತ್ತಿದೆ. ಬಲೂಚಿಸ್ತಾನದಲ್ಲಿ ಭಯೋತ್ಪಾದನೆ ವಿರುದ್ಧ ಸಮಾಜದ ಹೆಸರಲ್ಲಿ, ಜನರ ನಿಜವಾದ ಆಶೋತ್ತರಗಳನ್ನು ತುಳಿಯಲು ಇನ್ನಷ್ಟು ಸೈನ್ಯ ತುಕಡಿಗಳನ್ನು ಸಿದ್ಧಮಾಡಲಾಗುತ್ತಿದೆ. ಇವೆಲ್ಲದರಿಂದ ಜನ ರೊಚ್ಚಿಗೆದ್ದಿದ್ದಾರೆ. ಅವರು ಜನರ ಗಮನ ಬೇರೆಡೆಗೆ ತಿರುಗಿಸಲು ಕಾಶ್ಮೀರ ಸಮಸ್ಯೆ ಬಳಸಿಕೊಳ್ಳಲಾಗುತ್ತಿದೆ.

ಪ್ರಾದೇಶಿಕ ಆರ್ಥಿಕ ಸಹಕಾರ

ದಕ್ಷಿಣ ಏಶ್ಯಾದಲ್ಲಿ ಆರ್ಥಿಕ ಸಹಕಾರದ ಕೂಟ ರಚಿಸುವುದು ಇಂದಿನ ಅಗತ್ಯ. ನಾಫ್ತಾ, ಯೂರೋಪಿಯನ್ ಕೂಟ, ಅಸಿಯನ್ ಹೀಗೆ - ಹಲವು ಪ್ರಾದೇಶಿಕ ಆರ್ಥಿಕ ಸಹಕಾರದ ಕೂಟಗಳು ಕೆಲಸ ಮಾಡುತ್ತಿದ್ದು ಇದು ಜಾಗತೀಕರಣದ ಸಂದರ್ಭದಲ್ಲಿ ಅಗತ್ಯ. ಸಾರ್ಕ್ ದೇಶಗಳ 'ಸಪ್ತ' ಮುಂದೆ ಹೋಗದಿರಲು ಭಾರತ - ಪಾಕಿಸ್ತಾನ ದ್ವಿಪಕ್ಷೀಯ ಸಮಸ್ಯೆಗಳೇ ಕಾರಣ. ಹಲವು ಸಾರ್ಕ್ ಶೃಂಗಸಭೆಗಳೇ ಭಾರತ - ಪಾಕಿಸ್ತಾನ ವಿವಾದಕ್ಕೆ ಬಲಿಯಾಗಿವೆ. ಆಫ್ರಿಕಾದ ಸಹಾರಾದ ಅಂಚಿನ ಪ್ರದೇಶ ಬಿಟ್ಟರೆ ಅತ್ಯಂತ ಕನಿಷ್ಠ ಮಾನವ ಬೆಳವಣಿಗೆ ದರ ಇರುವ ಈ ಪ್ರದೇಶದಲ್ಲಿ ಸಮೃದ್ಧಿಗೆ ಭಾರತ-ಪಾಕಿಸ್ತಾನ ಶಾಂತಿ ಅಗತ್ಯ. ಇವೆರಡೂ ದೊಡ್ಡ ದೇಶಗಳು ಈ ಪ್ರಕ್ರಿಯೆಗೆ ನಾಯಕತ್ವ ವಹಿಸಬೇಕು. ಹೀಗೆ ಮಾಡುವಂತೆ ಎರಡೂ ದೇಶಗಳ ಆಳರಸರ ಮೇಲೆ ಜನ ಒತ್ತಾಯ ತರಬೇಕು. ಇತ್ತೀಚಿಗೆ ತೆರೆದ ಹೊಸ ಅವಕಾಶಗಳು ಮುಚ್ಚಿ ಹೋಗದಿರಲು ಎಚ್ಚರಿಕೆ ವಹಿಸಬೇಕು.

ಜನಾರೋಗ್ಯ ....

ಪುಟ 10 ರಿಂದ

ಕ್ಷೇತ್ರದಲ್ಲಿ ಕೆಲಸ ಮಾಡುವವರು, ಪ್ರವಾಸಿ ಉದ್ದಿಮೆಯಲ್ಲಿರುವವರು.

ಚಿಕಿತ್ಸೆ ಸಮಯದಲ್ಲಿ CD4 cell amount ಎಂಬ ಪರೀಕ್ಷೆ ಉಪಯುಕ್ತವಾಗುತ್ತದೆ. ಅದನ್ನು ಉಚಿತವಾಗಿ ಮಾಡಲಾಗುತ್ತಿದೆ.

ಈ ಎಲ್ಲ ಪ್ರಯತ್ನಗಳಿಂದಾಗಿ ಏಡ್ಸ್ ರೋಗದಿಂದ ಸಾಯುವವರ ಸಂಖ್ಯೆ ಕಡಿಮೆಯೆಂದೇ ಹೇಳಬಹುದು.

ಅಗತ್ಯ ಔಷಧಿಗಳು:- ಕ್ಯೂಬಾ ದೇಶದಲ್ಲಿ ಕೇವಲ ಅಗತ್ಯ ಔಷಧಿಗಳು ದೊರಕುತ್ತಿವೆ. ಯಾವ ಅನಗತ್ಯ ಔಷಧಿಗಳಿಲ್ಲ. ಈ ದೇಶ ತನಗೆ ಅಗತ್ಯವಿರುವ ಎಲ್ಲ ಔಷಧಿಗಳನ್ನು ತಾವೇ ತಯಾರಿಸುತ್ತವೆ. **'ಆರ್ಥಿಕ ದಿಗ್ಬಂಧನವೆಂದರೆ ತಲೆನೋವಿಗೆ ಆಸ್ಪಿನ್ ಗುಳಿಗೆಯೂ ಸಿಗದಂತೆ ಮಾಡು[illegible]ದು'** ಎಂದು ಫಿಡಲ್ ಕ್ಯಾಸ್ಟ್ರೋ ಹೇಳುತ್ತಾರೆ. ಈ ಆರ್ಥಿಕ ದಿಗ್ಬಂಧನದಿಂದ ಅನೇಕ ಔಷಧಿಗಳು ಇಲ್ಲಿ ದೊರಕುತ್ತಿಲ್ಲ, ಇದರಿಂದಲೇ ಕ್ಯೂಬಾ ಗ್ರೀನ್ ಮೆಡಿಸಿನ್‌ಗಳನ್ನು ವೃದ್ಧಿಗೊಳಿಸಿದೆ. ಅಂದರೆ ಗಿಡಮೂಲಿಕೆ ಔಷಧಿಗಳು. ತನ್ನ ದೇಶದಲ್ಲಿ ಬೆಳೆಯುವ ಎಲ್ಲ ಗಿಡಮೂಲಿಕೆಗಳ ಔಷಧೀಯ ಗುಣಗಳನ್ನು ಅಭ್ಯಸಿಸಿ, ಔಷಧಿ ತಯಾರಿಸಿ ಅದನ್ನು ಎಲ್ಲ ಆಸ್ಪತ್ರೆಗಳಲ್ಲೂ ದೊರಕುವಂತೆ ಮಾಡಿದೆ. ಅಲ್ಲಿಯ ಎಲ್ಲ ಸಿಬ್ಬಂಧಿಗಳಿಗೂ ಈ ಔಷಧಿಯ ವೈಜ್ಞಾನಿಕ ಉಪಯೋಗದ ಬಗ್ಗೆ ತರಬೇತಿ ನೀಡಿದೆ. ಈ ಔಷಧಿಗಳು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಭಾರತದಲ್ಲಿ ಆಯುರ್ವೇದ, ಸಿದ್ಧ ಹಾಗೂ ಅನೇಕ ಗಿಡಮೂಲಿಕೆಗಳಿದ್ದರೂ ಅವುಗಳ ವ್ಯಾಪಕ ಬಳಕೆ ಇಲ್ಲದಿರುವುದು ಶೋಚನೀಯವಲ್ಲವೇ?

ಈಗಿನ ದಿನಗಳಲ್ಲಿ **ಬಯಾಟೆಕ್ನಾಲಜಿ** ಉದ್ದಿಮೆ ಭರದಿಂದ ಸಾಗಿದೆ. ಹಾಗೂ ಕೆಲವು ಔಷಧಿಗಳನ್ನು ಸ್ಥಳೀಯವಾಗಿ ತಯಾರಿಸುವುದಲ್ಲದೇ ರಫ್ತು ಮಾಡಲಾರಂಭಿಸಿದೆ. ಕ್ಯೂಬಾಸದ ಸಕ್ಕರೆ, ನಿಕಲ್ ಬಿಟ್ಟರೆ ಮೂರನೇ ಮುಖ್ಯ ರಫ್ತು ಈ ಔಷಧಿಗಳು.

ಔಷಧಿಗಳನ್ನು ತಯಾರಿಸಿ ಸ್ಥಳೀಯವಾಗಿ ಉಪಯೋಗಿಸುತ್ತ, ರಫ್ತು ಮಾಡುತ್ತ ಬಂದಿರುವ ಔಷಧಿಗಳೆಂದರೆ - ಲಸಿಕೆಗಳು, ಕಸಿ ಶಸ್ತ್ರ ಚಿಕಿತ್ಸೆ ನಂತರ ಉಪಯೋಗಿಸುವ ಇಂಟರ್ ಫೆರಾನ್, ಮೊನೊಕ್ಲೋನಲ್ ಆಂಟೀಬಾಡಿ, ಹೃದಯಾಘಾತ ರೋಗಿಗಳಿಗೆ ಉಪಯೋಗಿಸುವ ಸ್ಟ್ರೆಪ್ಟೋಕೈನೇಸ್. ○

ಎ.ಕೆ.ಗೋಪಾಲನ್.....

ಪುಟ 2 ರಿಂದ

ಗಳಿಂದಲೇ. ಬಲ ಪರಿಷ್ಕರಣವಾದವು ಚಳುವಳಿಗೆ ಮಾರಕ ಎಂಬುದನ್ನು ಅರಿತುಕೊಳ್ಳಲು ಅಥವಾ ಎಡ ಸಾಹಸವಾದವನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಲು ಎಕೆಜಿಯವರಿಗೆ ತೀವ್ರ ಸೈದ್ಧಾಂತಿಕ ಅಭ್ಯಾಸ ಮಾಡಲೇಬೇಕಾದ ಅಗತ್ಯವೇನೂ ಕಂಡುಬರಲಿಲ್ಲ. ಅವರ ಕ್ರಾಂತಿಕಾರೀ ಒಲವು/ ನಿಲುವುಗಳು ರೂಪಿತವಾದದ್ದೇ ದುಡಿಯುವ ಜನರ ಬಗ್ಗೆ ಅವರಿಗಿದ್ದ ಕಾಳಜಿ ಮತ್ತು ಅಂತಹ ಜನರ ಯೋಚನೆಗಳನ್ನು ಸರಿಯಾಗಿಯೇ ಗ್ರಹಿಸುವ ಶಕ್ತಿಗಳಿಂದಾಗಿ.

ಎಲ್ಲಾ ಕಮ್ಯೂನಿಸ್ಟರಿಗೆ ಮತ್ತು ಪ್ರಜಾಪ್ರಭುತ್ವ ವಾದಿಗಳಿಗೆ ಎಕೆಜಿ ಒಂದು ಅಮೂಲ್ಯ ಪರಂಪರೆಯನ್ನೇ ಬಿಟ್ಟುಹೋಗಿದ್ದಾರೆ. ಅವರ ಸಂಪೂರ್ಣ ಸಮರ್ಪಣಾಭಾವ; ಜನಸಾಮಾನ್ಯರ ವಿಮೋಚನೆಗಾಗಿ ನಡೆಸಿದ ಅವಿರತ ಹೋರಾಟಗಳು; ಮಾರ್ಕ್ಸ್‌ವಾದೀ ಲೆನಿನ್‌ವಾದೀ ನಿಲುವುಗಳಿಂದ ಪ್ರೇರಿತವಾದ ಅವರ ಗಾಢ ಮಾನವೀಯತೆ; ಶೋಷಿತರ, ಅದರಲ್ಲೂ ಕೃಷಿಕ ಸಮುದಾಯದ, ಜತೆಗೆ ಅವರು ತಮ್ಮನ್ನು ಗುರ್ತಿಸಿಕೊಂಡ ರೀತಿ; ಕಾರ್ಯಕರ್ತರು ಮತ್ತು ಯುವ ಕ್ರಾಂತಿಕಾರಿಗಳ ಪೀಳಿಗೆಯ ಬಗ್ಗೆ ಅವರಿಗಿದ್ದ ಅಪಾರ ವಾತ್ಸಲ್ಯ; ಕಷ್ಟಗಳು ಎದುರಾದಾಗಲೆಲ್ಲ ಅವರು ಪ್ರದರ್ಶಿಸುತ್ತಿದ್ದ ಧೈರ್ಯ ಮತ್ತು ಹಾಸ್ಯಪ್ರವೃತ್ತಿ; ಜನಸಮುದಾಯ ಹಾಗೂ ಪಕ್ಷದ ಅಪಾರ ಪ್ರೀತಿಗೆ ಪಾತ್ರವಾಗಿದ್ದ ವ್ಯಕ್ತಿತ್ವ - ಇವೆಲ್ಲವೂ ಮಾದರಿಗಳಾಗಿ ವರ್ಗಶೋಷಣೆಯಿಂದ ಭಾರತವನ್ನು ವಿಮೋಚನೆಗೊಳಿಸುವ ಹೋರಾಟದಲ್ಲಿ ಭಾಗವಹಿಸುವ ಎಲ್ಲರ ಮುಂದೂ ನಿಲ್ಲುತ್ತವೆ.

ಎಕೆಜಿಯವರ ಜನ್ಮ ಶತಾಬ್ಧಿಯನ್ನು ಆಚರಿಸುವುದರ ಮೂಲಕ ನಾವು ಭಾರತದ ಕಮ್ಯೂನಿಸ್ಟರನ್ನು ರೂಪಿಸಿದ ಆದ್ಯ ಪ್ರವರ್ತಕ ಹಾಗೂ ಜನನಾಯಕರೊಬ್ಬರಿಗೆ ಭಾವಾಂಜಲಿ ಸಲ್ಲಿಸುತ್ತಿದ್ದೇವೆ. ಮತ್ತೊಬ್ಬ ಮಹಾನ್ ಕ್ರಾಂತಿಕಾರಿ ಚೇತನ ಬಿ.ಟಿ ರಣದಿವೆಯವರ ಜನ್ಮ ಶತಾಬ್ಧಿ ಆಚರಣೆಯನ್ನು ನಡೆಸಿದ ಹಾಗೆಯೇ, ಎಕೆಜಿ ಜನ್ಮ ಶತಾಬ್ಧಿಯನ್ನು, ಆ ಮಹಾನ್ ಚೇತನಗಳು ಕೊಡಮಾಡಿರುವ ಸಂಪನ್ನ ಮತ್ತು ಚಾರಿತ್ರಿಕ ಪರಂಪರೆಗಳನ್ನು ವ್ಯಾಪಿಸುವ ಮೂಲಕ ನಡೆಸಬೇಕಾಗಿದೆ. ಸಮಾಜವಾದದ ಮುನ್ನಡೆಗಾಗಿ ವೈಚಾರಿಕ ಹೋರಾಟವನ್ನು ಇನ್ನಷ್ಟು ಮೊನಚುಗೊಳಿಸಲು ಬಳಸಬೇಕಾಗಿದೆ.


ಶೋಷಿತರ ಧ್ವನಿ ಮುಲ್ಕ್‌ರಾಜ್ ಆನಂದ ನಿಧನ

ಶೋಷಿತ ಸಮುದಾಯದ ಪರವಾಗಿ ವಿಪುಲವಾಗಿ ಸಣ್ಣ ಕತೆ, ಕಾದಂಬರಿ, ಕಲೆ, ಸಾಹಿತ್ಯವನ್ನು ಸೃಷ್ಟಿಸಿದ ಮುಲ್ಕ್‌ರಾಜ್ ಆನಂದ್ ತನ್ನ 99ನೇ ವಯಸ್ಸಿನಲ್ಲಿ ಪುಣೆಯ ಆಸ್ಪತ್ರೆಯೊಂದರಲ್ಲಿ ಸೆಪ್ಟೆಂಬರ್ 28ರಂದು ನಿಧನರಾದರು.

ಇಂದಿನ ಪಾಕಿಸ್ತಾನದ ಪೇಶಾವರದಲ್ಲಿ 1905ರ ಡಿಸೆಂಬರ್ 12ರಂದು ತಾಮ್ರದ ಗಣಿಯ ಕೆಲಸಗಾರನ ಮಗನಾಗಿ ಜನಿಸಿದ ಮುಲ್ಕ್‌ರಾಜ್ ಪ್ರತಿ ಹಂತದಲ್ಲೂ ಹೋರಾಟದ ಮೂಲಕ ದೇಶದಾದ್ಯಂತ ಖ್ಯಾತಿ ಪಡೆದುದು ಮಾತ್ರವಲ್ಲದೆ ವಿದೇಶಗಳಲ್ಲಿಯೂ ಮೆರೆದರು. ತಂದೆ ಬ್ರಿಟಿಷ ಸೇನೆಯಲ್ಲಿ ಕೆಲಸ ಮಾಡಿದರೂ, ಕೀಳು ಜಾತಿಯವನೆಂದು ನಿಂದನೆಗೆ ಒಳಗಾದ ಸಂದರ್ಭದಲ್ಲಿ, ಅದನ್ನು ಮೆಟ್ಟಿನಿಂತು, ಓದು, ಬರಹ ಮತ್ತು ಚರ್ಚೆಗಳ ಮೂಲಕ ಸ್ವಯಂ ಅಭ್ಯಾಸ ನಡೆಸಿ, ಜಗತ್ತೇ ಬೆರಗಾಗುವ ಸಾಹಿತ್ಯ ಕೃಷಿ ನಡೆಸಿದರು. ಆ ಮೂಲಕ ತಾನು ವೈಚಾರಿಕ ಬೆಳವಣಿಗೆ ಹೊಂದಿದ್ದು ಮಾತ್ರವಲ್ಲದೆ, ಶೋಷಣೆಗೆ ಒಳಗಾದ ಜನರನ್ನು ಎಚ್ಚರಿಸಿದರು. ಜಾತಿಯು ಮನುಷ್ಯನ ಮನಸ್ಸನ್ನು ಸಂಕುಚಿತಗೊಳಿಸಿದರೆ, ಅಂತರ ರಾಷ್ಟ್ರೀಯತೆಯು ಮಾನವನ ವಿಕಸನಕ್ಕೆ ಮೆಟ್ಟಿಲಾಗುವುದು ಎಂದು ಅವರು ದೃಢವಾಗಿ ನಂಬಿದ್ದರು.

ಸ್ವತಂತ್ರ ಹೋರಾಟ ಕಾಲದಲ್ಲಿ ಮೊದಲು ಮಹಾತ್ಮಾ ಗಾಂಧಿಯವರ ಆದರ್ಶಗಳಿಗೆ ಆಕರ್ಷಿತರಾದ ಮುಲ್ಕ್‌ರಾಜ್ ಆನಂದ್ ನಂತರ ಎಡ ಪಂಥೀಯ ನಿಲುವಿನ ಕಡೆ ವಾಲಿದರು. ಅಖಿಲ ಭಾರತ ಮಟ್ಟದಲ್ಲಿ ಪ್ರಗತಿಪರ ಬರಹಗಾರರ ಸಂಘ ಮತ್ತು ಇಂಡಿಯನ್ ಪೀಪಲ್ಸ್ ಥಿಯೇಟರ್(ಇಪ್ಟಾ) ಸ್ಥಾಪನೆಗೆ ಕಾರಣರಾದ ಅವರು ಅಸ್ಪೃಶ್ಯ(1935),

ತಮ್ಮ 99ನೇ ವಯಸ್ಸಿನಲ್ಲಿ ನಿಧನರಾದ ಖ್ಯಾತ ಸಾಹಿತಿ ಮುಲ್ಕ್‌ರಾಜ್ ಆನಂದ್‌ರವರ ಬದುಕಿನ ಒಂದು ಸಾಮಾಜಿಕ ಕಥನ. ಅವರದ್ದು ಸದಾ ಜನತೆಗಾಗಿ ತುಡಿವ ಹೃದಯ. ಶೋಷಿತರ ಧ್ವನಿ



ಕೂಲಿ(1936), ಎರಡು ಎಲೆಗಳು ಮತ್ತು ಮೊಗ್ಗು(1937) ಎಂಬ ಮಹಾನ್ ಕೃತಿಗಳನ್ನು ರಚಿಸಿದರು. ಅಸ್ಪೃಶ್ಯ ಎಂಬುದು ಮಲ ತೊಳೆಯುವ ಬಾಲಕ 'ಬಖಾ'ನ ಕಥೆಯದರೆ, ಎರಡನೆಯದು ಕ್ಷಯ ಪೀಡಿತವಾಗಿದ್ದ ಬಾಲ ಕಾರ್ಮಿಕನೊಬ್ಬನ ಕಥೆಯಾಗಿತ್ತು.

ಚಿಕ್ಕಮ್ಮನಿಗೆ ಆದ ಅವಮಾನ : ಮುಲ್ಕರಾಜ್ ಆನಂದರ ಚಿಕ್ಕಮ್ಮ ಮುಸ್ಲಿಂ ಮಹಿಳೆಯೊಬ್ಬರ ಜತೆ ಊಟ ಮಾಡಿದರೆಂದು ಹಿಂದೂ ಸಮುದಾಯದ ಕೆಲವರಿಂದ ಅವಮಾನಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡರು. ಇದರಿಂದ ತೀವ್ರ ನೊಂದ ಮುಲ್ಕರಾಜ್ 'ಅಸ್ಪೃಶ್ಯ' ಕಾದಂಬರಿ ಸೃಷ್ಟಿಗೆ ಕಾರಣಕರ್ತರಾದರು.

ಬರಹಗಾರರಾಗಿ ತನ್ನ ವೃತ್ತಿಯನ್ನು ಇಂಗ್ಲೆಂಡ್‌ನಲ್ಲಿ ಆರಂಭಿಸಿದ ಆನಂದ್ ಇಂಗ್ಲೀಷ್‌ನ ಹೆಸರಾಂತ ಸಾಹಿತಿಗಳಾದ ಟಿ.ಎಸ್. ಈಲಿಯಟ್, ಇ.ಎಂ.ಫೋಸ್ಟರ್ ಮೊದಲಾದವರ ಕೂಟದಲ್ಲಿದ್ದರು. ಈ ಸಂದರ್ಭದಲ್ಲಿ ವಸಹಾತು ಶಾಹಿಯ ವಿರುದ್ಧ ಫ್ಯಾಸಿಸಂನ ವಿರುದ್ಧ ತನ್ನ ಆಳವಾದ ತಿಳುವಳಿಕೆ ಯನ್ನು ಬಲಪಡಿಸಿ ಕೊಂಡಿದ್ದು ಮಾತ್ರವಲ್ಲದೆ, ಬ್ರಿಟಿಷ್ ಸುದ್ದಿ ಸಂಸ್ಥೆ(ಬಿ.ಬಿ.ಸಿ)ಯ ಚಲನಚಿತ್ರ ವಿಭಾಗದಲ್ಲಿ ಕೆಲಸ ಮಾಡುತ್ತಾ ಫ್ಯಾಸಿಸ್ಟರ ವಿರುದ್ಧ ಲೇಖನಗಳನ್ನು ಬರೆದರು.

ಪಂಜಾಬಿನ ಖಲ್ಸಾ ಕಾಲೇಜಿನಲ್ಲಿ ಪದವಿಯನ್ನು ಪಡೆದ ಆನಂದ್ ಕೇಂಬ್ರಿಡ್ಜ್‌ನಲ್ಲಿ ಪಿ.ಹೆಚ್.ಡಿ. ಪದವಿಯನ್ನು ಗಳಿಸಿದರು. ಯೌವನದ ಬಹುಭಾಗವನ್ನು ವಿದೇಶದಲ್ಲಿ ಕಳೆದರೂ ಭಾರತದ ಜನರ ಬಗ್ಗೆ ಅದರಲ್ಲೂ, ಬಡಜನರ ಬಗೆಗಿನ ಅವರ ಪ್ರೇಮ, ಕಳಕಳಿ ಅಪೂರ್ವವಾದುದು. ಅಂತೆಯೇ ಎರಡನೇ ಮಹಾಯುದ್ಧ ಮುಗಿದ ನಂತರ ಭಾರತಕ್ಕೆ ಆಗಮಿಸಿ ಇಲ್ಲಿನ ಸ್ವಾತಂತ್ರ್ಯ ಚಳುವಳಿಗೆ ತನ್ನದ ಆದ ಕೊಡುಗೆ ನೀಡಿದರು.

ಗಾಂಧೀಜಿಯವರ ಸ್ವಾತಂತ್ರ್ಯ ಹೋರಾ ದಿಂದ ಆಕರ್ಷಿತರಾದರೂ, ಅವರು ಅಲ್ಲಿಗೆ ನಿಲ್ಲ ಸಮಾನತೆಯನ್ನು ಸಾರುವ ಸಮಾಜವಾ ಬರಬೇಕೆಂದು ಆಶಿಸಿದ್ದರು. ಅವರ ಬರಹಗಳಲ್ಲಿ ಈ ತುಡಿತವನ್ನು ಕಾಣಬಹುದು.

ಕಲಾಸಾಹಿತ್ಯಕ್ಕೆ ಆಕರ್ಷಣೆ: 19456 ರ 'ಮಾರ್ಗ' ಎನ್ನುವ ಕಲಾ ಸಾಹಿತ್ಯಕ್ಕೆ ಮೀಸಲಾ ಪತ್ರಿಕೆಯನ್ನು ಹೊರತಂದ ಮುಲ್ಕಾರಾಜ್ ಶಿಲ್ಪಕಲೆ, ಪೈಂಟಿಂಗ್ ಮೊದಲಾದ ಕಲೆಗಳ ಕೇವಲ ಉಳ್ಳವರಿಗೆ ಮಾತ್ರವಲ್ಲದೆ ಜನಸಾಮಾ ರನ್ನು ಮುಟ್ಟುವಂತಿರಬೇಕು ಎಂದು ಅದಕ್ಕಾ ಪ್ರಯತ್ನಪಟ್ಟರು. ಕಲೆಯು ಆಡಂಬರವಲ್ಲ ಬದಲಾಗಿ ಜೀವನದ ಅವಶ್ಯಕತೆ ಎಂದ ನಂಬಿದ್ದರು.

ಕಲಾ ಸಾಹಿತ್ಯದಲ್ಲಿ ಅಪಾರ ಪುಸ್ತಕಗಳನ್ನು ಬರೆದಿದ್ದ ಅವರು, ಹಲವಾರು ವರ್ಷ ಲಲಿ ಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಪುಣೆಯಲ್ಲಿ ತಾವೇ ಸ್ಥಾಪಿಸಿದ್ದ ಸರ್ವೋದಯ ಟ್ರಸ್ಟ್‌ಗೆ ತನ್ನೆಲ್ಲಾ ಆಸ್ತಿಯನ್ನು ಉಯಿಲು ಮಾಡಿ ಮುಲ್ಕಾರಾಜ್ ಆನಂದ್ ತನ್ನ ಪತ್ನಿ ಹಾಗೂ ಪುತ್ರಿ ಹಾಗೂ ಅಪಾರ ಅಭಿಮಾನಿ ಬಳಗವನ್ನು ಅಗಲಿದ್ದಾರೆ.

ಬಾಲಕನಾಗಿದ್ದಾಗ ಎಡ್ವರ್ಡ್ ಏಳನೇ ರಾಜ ಆಳುತ್ತಿದ್ದಾಗ ಶಾಲೆಯಲ್ಲಿ 'ದೇವರೇ ರಾಜನನ್ನು ಕಾಪಾಡು' ಎಂದು ಶಾಲಾ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದ ಮುಲ್ಕಾರಾಜ್ ಆನಂದ್ ಮುಂದೆ ಬ್ರಿಟಿಷರ ರಾಜರ ವಸಾಹತುಶಾಹಿಯ ವಿರುದ್ಧ ಕೆಂಡಕಾರಿದ್ದು, ಅವರ ಆಳವಾದ ಅಧ್ಯಯನ, ಹೋರಾಟಕ್ಕೆ ಸಾಕ್ಷಿ.

ಪುಟ 7 ರಿಂದ

ರೈತ - ಕೂಲಿಕಾರರ ಲಗ್ಗೆ

ಕೋಟಿ ರೂ. ಸಾಲವನ್ನು ಪಡೆದ ಕರ್ನಾಟಕದ ಹಿಂದಿನ ಕಾಂಗ್ರೆಸ್ ಸರ್ಕಾರ ಖಾಸಗೀಕರಣ ಪ್ರಕ್ರಿಯೆಯನ್ನು ಆರಂಭಿಸಿಯೇ ಬಿಟ್ಟಿತು. ಇದರ ಅಂಗವಾಗಿ ರೈತರ ಪಂಪ್‌ಸೆಟ್‌ಗಳಿಗೆ, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಸಂಪರ್ಕಗಳಿಗೆ ಬಲವಂತದ ಮೀಟರ್ ಅಳವಡಿಕೆ ಆರಂಭವಾಯಿತು. ಖಾಸಗಿ ವಿದ್ಯುತ್ ಉತ್ಪಾದಕ ಕಂಪನಿಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು ದುಬಾರಿ ವಿದ್ಯುತ್ತನ್ನು ಜನತೆಯ ಮೇಲೆ ಹೇರುವುದನ್ನು ಆರಂಭಿಸಲಾಯಿತು. ರೈತರ ತೀವ್ರ ಪ್ರತಿಭಟನೆಯ ಕಾರಣದಿಂದ ಪಂಪ್‌ಸೆಟ್ ರೈತರ ಹಳೆಯ ಬಾಕಿಗಳನ್ನು ಮನ್ನಾ ಮಾಡಲಾಯಿತಾದರೂ ರೈತರಿಗೆ ರಿಯಾಯ್ತಿ ದರಗಳಲ್ಲಿ ವಿದ್ಯುತ್ ಪೂರೈಕೆ ಮಾಡಲು ಸರ್ಕಾರ ಮುಂದೆ ಬರಲಿಲ್ಲ. ಕೃಷಿ ಕೂಲಿಕಾರರ ಮತ್ತು ಇತರ ಬಡವರ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಸಂಪರ್ಕಗಳ ಹಳೆಯ ಬಾಕಿಗಳನ್ನು ಮನ್ನಾ ಮಾಡಲು ತೀರ್ಮಾನ ಮಾಡಲಿಲ್ಲ.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಯು.ಪಿ.ಎ. ಸರ್ಕಾರ 2003 ರ ವಿದ್ಯುತ್ ಕಾಯ್ದೆಯನ್ನು ಪುನರ್ ಪರಿಶೀಲಿಸುವ ಭರವಸೆ ನೀಡಿದೆಯಾದರೂ ಇನ್ನೂ ಈ ದಿಕ್ಕಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಸಮ್ಮಿಶ್ರ ಸರ್ಕಾರ ರೈತರ ನೆರವಿಗೆ ಬರುವ ಮಾತುಗಳನ್ನು ಆಡುತ್ತಿದ್ದರೂ ವಿದ್ಯುತ್ ರಂಗದ ಖಾಸಗೀಕರಣದ ಪ್ರಕ್ರಿಯೆಯನ್ನು ತಡೆಯಲು ಅದು ಉತ್ಸುಕವಾಗಿಲ್ಲ. ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ್ದ ವಿಶ್ವಬ್ಯಾಂಕ್ ಪ್ರತಿನಿಧಿಗಳು ಈ ಕುರಿತು ಇನ್ನಷ್ಟು ಒತ್ತಡ ಹೇರಿದ್ದಾರೆ. ಕರ್ನಾಟಕ ಸರ್ಕಾರಕ್ಕೆ ವಿಶ್ವಬ್ಯಾಂಕ್ ಪರವಾಗಿ ರಾಜ್ಯವನ್ನು ಆಳಲು ಬಿಡಬೇಕೇ ಎಂಬುದನ್ನು ರಾಜ್ಯದ ಜನತೆ ನಿರ್ಧರಿಸಬೇಕಾಗಿದೆ.

5. ಸಾರ್ವಜನಿಕ ವಿತರಣಾ ಪದ್ಧತಿ

ಗ್ರಾಮೀಣ ಹಾಗೂ ನಗರ ಪ್ರದೇಶದ ಬಡವರಿಗೆ ಕನಿಷ್ಟ ಜೀವನಾವಶ್ಯಕ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳಲು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಪಡಿತರ (ರೇಷನ್) ಪದ್ಧತಿಯನ್ನು ಜಾರಿಗೆ ತರಲಾಗಿತ್ತು. ಮಾರುಕಟ್ಟೆಯ ದರಗಳಿಗಿಂತ ಕಡಿಮೆ ದರಗಳಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ರೇಷನ್ ಅಂಗಡಿಗಳನ್ನು ತೆರೆಯಲಾಗಿತ್ತು. ಸರ್ಕಾರದ ಸಬ್ಸಿಡಿಯೊಂದಿಗೆ ನಡೆಯುತ್ತಿದ್ದ ಈ ವ್ಯವಸ್ಥೆಯಿಂದಾಗಿ ಆಹಾರ ಧಾನ್ಯಗಳನ್ನು ಬೆಳೆಯಲು ರೈತರಿಗೂ ಪ್ರೋತ್ಸಾಹ ಸಿಗುತ್ತಿತ್ತು. ರೈತರಿಗೆ ಬೆಂಬಲ ಬೆಲೆ ನೀಡಿ ಸರ್ಕಾರ ಆಹಾರ ಧಾನ್ಯಗಳನ್ನು ಕೊಂಡುಕೊಂಡು ತನ್ನ ಉಗ್ರಾಣಗಳಲ್ಲಿ ಸಂಗ್ರಹಿಸಿಟ್ಟು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಒದಗಿಸುತ್ತಿತ್ತು. 'ಸರ್ಕಾರ ಆರ್ಥಿಕ ವ್ಯವಹಾರಗಳಿಂದ ಹಿಂದಕ್ಕೆ ಸರಿಯಬೇಕು; ಸಬ್ಸಿಡಿ ಕೊಡುವುದನ್ನು ನಿಲ್ಲಿಸಬೇಕು' ಎಂಬ ವಿಶ್ವಬ್ಯಾಂಕ್ ನಿರ್ದೇಶನವನ್ನು ಚಾಚೂ ತಪ್ಪದೆ ಜಾರಿಗೆ ತರಲು ಹೊರಟಿರುವ ಸರ್ಕಾರಗಳು ಸ್ವಾತಂತ್ರ್ಯ ಸಿಕ್ಕಾಗಿನಿಂದ ನಡೆಸಿಕೊಂಡು ಬಂದ ರೇಷನ್ ಪದ್ಧತಿಯನ್ನು ನಾಶ ಮಾಡಲು ಹೊರಟಿವೆ. ರೇಷನ್ ದರಗಳನ್ನು ಏರಿಸುತ್ತಾ ಬರಲಾಗುತ್ತಿದೆ. ರೇಷನ್ ಕಾರ್ಡುಗಳ ಸಂಖ್ಯೆಯನ್ನು ಕಡಿತ ಮಾಡುತ್ತಾ ಬರಲಾಗುತ್ತಿದೆ. 'ಬಡತನದ ರೇಖೆಯ ಕೆಳಗೆ ಬದುಕುತ್ತಿರುವವರಿಗೆ ಮಾತ್ರ ರೇಷನ್ ಕಾರ್ಡು ಕೊಡುತ್ತೇವೆ' ಎಂಬ ಟಾರ್ಗೆಟೆಡ್ ಪದ್ಧತಿಯಿಂದ ಬಡವರಿಗೆ ಸಿಗಬೇಕಾದ್ದ ಕಾರ್ಡುಗಳು ಅರ್ಹರಲ್ಲದವರ ಪಾಲಾಗುವುದೇ ಹೆಚ್ಚು.



ಬೆಲೆ ಸಿಗದೆ ಬೀದಿಗೆ ಸುರಿದ ಟೊಮೊಟೋ

ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸುವ ಬದಲು ಅದನ್ನು ಹಂತಹಂತವಾ ದುರ್ಬಲಗೊಳಿಸುತ್ತಾ ಹೋಗುವ ಸರ್ಕಾರ ಧೋರಣೆ ಅನಾಹುತಕಾರಿಯಾಗಿದೆ. ಭೀಕ ಬರಗಾಲಕ್ಕೆ ತುತ್ತಾಗಿ, ಹೊಟ್ಟೆಗಿಲ್ಲದೆ ಉಪವಾ ಬಿದ್ದ ಜನಗಳು, ವಿಶೇಷವಾಗಿ ಮಕ್ಕಳು ಮರಿಗಳ ಸಾಯುತ್ತಿದ್ದಾಗಲೂ, ಸರ್ಕಾರಿ ಉಗ್ರಾಣಗಳ ರಾಶಿ ಬಿದ್ದು ಕೊಳೆಯುತ್ತಿದ್ದು ಆಹಾರ ಧಾನ್ಯಗಳನ ರಿಯಾಯಿತಿ ದರಗಳಲ್ಲಿ ನೀಡದ ನಿರ್ದಯ ವಾಜಪೇಯಿ ಸರ್ಕಾರವನ್ನು ನಾವು ನೋಡಿದ್ದೇವೆ. ಹೊಸದಾಗಿ ಬಂದಿರುವ ಸರ್ಕಾರ ರೇಷನ್ ಪದ್ಧತಿಯ ಬಗ್ಗೆ ಹಿಂದಿನ ಸರ್ಕಾರದ ನೀತಿಯನ್ನು ಕೈಬಿಡದಿದ್ದರೆ ಇವರೂ ಪಶ್ಚಾತ್ತಾ ಪಡಬೇಕಾದೀತು. ರಾಜ್ಯದಲ್ಲಿ ಧರಂಸಿಂಗ್ ಸರ್ಕಾರವು ಬಡವರಿಗೆ ಕೆ.ಜಿ.ಗೆ 3 ರೂ. ದರದ ಅಕ್ಕಿ, ಗೋಧಿ ನೀಡುವ ಕಾರ್ಯಕ್ರಮವನ್ನೇನೂ ಪ್ರಕಟಿಸಿದೆ. ಆದರೆ ಅರ್ಹ ಬಡವರಿಗೆ ಅಗತ್ಯವಾ ಕಾರ್ಡುಗಳನ್ನು ವಿತರಣೆ ಮಾಡುವ ಬದಲು ಕಾರ್ಡುಗಳ ಸಂಖ್ಯೆಯನ್ನು ಕಡಿತಗೊಳಿಸಲ ಆದೇಶ ನೀಡಿದೆ. ದರವನ್ನು ಕಡಿಮೆ ಮಾಡು ಜೊತೆಯಲ್ಲಿ ಕಾರ್ಡುಗಳ ಸಂಖ್ಯೆಯನ್ನೂ ಕಡಿಮೆ ಮಾಡುವುದರಿಂದ ಬಡವರಿಗೆ ನೆರವಾಗು ಉದ್ದೇಶ ಈಡೇರಲಾರದು. ವಿಶ್ವಬ್ಯಾಂಕ್ ಆದೇಶವನ್ನು ಧಿಕ್ಕರಿಸಿ ಬಡವರ ನೆರವಿ ಧಾವಿಸುವ ಧೈರ್ಯ ಧರಂಸಿಂಗ್ ಸರ್ಕಾ ತೋರಿಸಬೇಕಾಗಿದೆ. ಜನತೆಯ ಹೋರಾ ತೀವ್ರಗೊಳ್ಳಬೇಕಾಗಿದೆ.

ಈ ಕಾರಣಕ್ಕಾಗಿ 2004 ಅಕ್ಟೋಬರ್ ರಂದು ನಡೆಯುವ 'ವಿಧಾನಸೌಧ ಚಲೋ' ಚಳುವಳಿಯಲ್ಲಿ ರಾಜ್ಯದ ರೈತರು ಕೃಷಿಕೂಲಿಕಾರರು ಹೆಚ್ಚಿನ ಸಂಖ್ಯೆ ಭಾಗವಹಿಸಬೇಕಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್, ಸಂಪಾದಕೀಯ ಕಚೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462
ಮುದ್ರಣ: ಹಾ. ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH